ಕೆ. ಸತ್ಯನಾರಾಯಣರವರ ಸಣ್ಣ ಕಥೆಗಳು

(ಎಂ.ಫಿಲ್., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನ ಸಂಪ್ರಬಂಧ)

ಸಂಶೋಧಕರು

ನೋಂದಣಿ ಸಂಖ್ಯೆ: ೧೬೦೧೦೨೦೨೦೦೮

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೬-೨೦೧೭

ಕೆ. ಸತ್ಯನಾರಾಯಣರವರ ಸಣ್ಣ ಕಥೆಗಳು

(ಎಂ.ಫಿಲ್., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನ ಸಂಪ್ರಬಂಧ)

ರಾಹುಲ. ಎಲ್

ಸಂಶೋಧಕರು

ನೋಂದಣಿ ಸಂಖ್ಯೆ: ೧೬೦೧೦೩೦೩೦೦೦೮

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩೨೭೬

೨೦೧೬-೧೭

ಪರಿವಿಡಿ

ಅಧ್ಯಾಯ: ಒಂದು

ಕಥೆಗಾರ ಕೆ. ಸತ್ಯನಾರಾಯಣ ೧-೫

ಅಧ್ಯಾಯ: ಎರಡು

ಕೆ. ಸತ್ಯನಾರಾಯಣರವರ ಕಥಾ ಸಂಕಲನಗಳ ಪರಿಚಯ ೬-೩೧

ಅಧ್ಯಾಯ: ಮೂರು

ಕೆ. ಸತ್ಯನಾರಾಯಣರವರ ಕಥೆಗಳ ವೈಶಿಷ್ಟ್ಯತೆ ೩೨-೪೯

ಅಧ್ಯಾಯ: ನಾಲ್ಕು

ವಿಮರ್ಶಕರ ದೃಷ್ಟಿಯಲ್ಲಿ ಕೆ. ಸತ್ಯನಾರಾಯಣ'ರವರ ಕಥೆಗಳು ೫೦-೫೯

ಅಧ್ಯಾಯ: ಐದು

ಕೆ. ಸತ್ಯನಾರಾಯಣ'ರವರ ಸಂದರ್ಶನ ೬೦-೬೭

ಅಧ್ಯಾಯ: ಆರು

ಸಮಾರೋಪ ೬೮-೭೧

ಪರಾಮರ್ಶನ ಗ್ರಂಥಗಳು ೭೨-೭೩

ಅಧ್ಯಾಯ : ಒಂದು

ಕಥೆಗಾರ ಕೆ. ಸತ್ಯನಾರಾಯಣ

ಅಧ್ಯಾಯ: ಒಂದು

ಕಥೆಗಾರ ಕೆ. ಸತ್ಯನಾರಾಯಣ

ಕೆ. ಸತ್ಯನಾರಾಯಣ ಈಚಿನ ವರ್ಷಗಳಲ್ಲಿ ಕನ್ನಡ ಕಥನಕಲೆಗೆ ಹೊಸ ಆಯಾಮ ನೀಡುತ್ತಿರುವ ಸಕ್ರೀಯ' ಲೇಖಕ. ಅವರು ವೃತ್ತಿಯಲ್ಲಿ ವರಮಾನ ಇಲಾಖೆಯಲ್ಲಿ ವರಿಷ್ಠ ಅಧಿಕಾರಿಯಾಗಿ ಕಾಲ ಕಾಲಕ್ಕೆ ವಿವಿಧ ಸ್ಥಳಗಳಿಗೆ ವರ್ಗವಾಗುತ್ತಾ – ರಾಜ್ಯದಾಚೆಗೆ ಹಲವು ಜವಾಬ್ದಾರಿಗಳನ್ನು ನಿರ್ವಹಿಸಿದಾರೆ. ಅದರ ಮದ್ಯೆಯೆ ಬಿಡುವು ಮಾಡಿಕೊಂಡು ಕಳೆದ ೩೦ ವರ್ಷಗಳಲ್ಲಿ ವಿಪುಲ ಸಾಹಿತ್ಯ ನಿರ್ಮಾಣ ಮಾಡಿದ್ದಾರೆ.

ಶ್ರೀ ಕೆ. ಸತ್ಯನಾರಾಯಣ ಅವರು ನವೋತ್ತರ ಕನ್ನಡದ ಪ್ರಮುಖ ಕಥೆಗಾರರೆಂದು ಈಗಾಗಲೇ ಪ್ರಸಿದ್ಧರಾಗಿದ್ದಾರೆ. ಕಾದಂಬರಿಗಳು, ಕಥಾಸಂಕಲನಗಳು, ಪ್ರಬಂಧ ಸಂಗ್ರಹಗಳು, ವಿಮರ್ಶಾ ಲೇಖನ ಸಂಗ್ರಹಗಳಲ್ಲದೆ ಪ್ರವಾಸ ಕಥನ, ಅಂಕಣ ಬರಹ ಮುಂತಾದ ಕೃತಿಗಳನ್ನು ನೀಡಿ ತಮ್ಮ ವಿಶಿಷ್ಟ ಪ್ರತಿಭೆಯನ್ನು ತೋರಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ ಮುಂತಾದ ಅನೇಕ ಪ್ರಶಸ್ತಿಗಳು ಇವರಿಗೆ ಸಂದಿವೆ.

ಸತ್ಯನಾರಾಯಣರು ಕಾದಂಬರಿಗಳನ್ನು ಬರೆದಿರುವವರಾದರೂ ಕಥೆಗಾರರೆಂದೇ ಕನ್ನಡ ಓದುಗ ಹಾಗೂ ವಿಮರ್ಶಕ ವಲಯದಲ್ಲಿ ಗುರುತಿಸಲ್ಪಟ್ಟವರು. ವಿಶೇಷ ಸಂಚಿಕೆಗಳಿಗೆ ಕಾಯದೆ, ಸಾಹಿತ್ಯ ಪತ್ರಿಕೆಗಳಿಗೆ ಬರೆಯದೆ, ಸಾಮಾನ್ಯ ಓದುಗನನ್ನು ಗಮನದಲ್ಲಿಟ್ಟುಕೊಂಡು ಜನಪ್ರಿಯ ಪತ್ರಿಕೆಗಳಿಗೆ ಹೆಚ್ಚಾಗಿ ಬರೆಯುವ ಇವರು ತಮ್ಮ ಕಥೆಗಳನ್ನು ಜನಸಾಮಾನ್ಯರ ಆವರಣದಲ್ಲೇ ಕಟ್ಟುವವರು ಅಷ್ಟೇ ಅಲ್ಲ, ಸಭ್ಯತನದಲ್ಲೇ ಅದ್ದಿಕೊಂಡು ಇವೊತ್ತಿನ ತಹತಹಗಳನ್ನು ಕಥೆಗಳನ್ನಾಗಿ ಮಾಡುತ್ತಿರುವರು. ಆಶ್ಚರ್ಯವೆಂದರೆ, ಮಾಸ್ತಿ ಪರಂಪರೆಯಿಂದಲೇ ಸ್ಫೂರ್ತಿಗೊಂಡು ಕಥೆಗಾರಿಕೆಯನ್ನು ಆರಂಭಿಸಿದ ಸತ್ಯನಾರಾಯಣ, ಅದನ್ನು ಮೀರುವ ಪ್ರಯತ್ನ ಮಾಡುತ್ತಲೇ ಎಷ್ಟು ದೂರ ಕ್ರಮಿಸಿದ್ದರೆಂದರೆ, ಇವರ ಕಥೆಗಳಲ್ಲಿ ಮಾಸ್ತಿಯವರ ವಾಸ್ತವವಾದ ಒಂದು ನಂಬಿಕೆಯಾಗುಳಿಯದೆ ಒಂದು ಅನುಮಾನವಾಗಿ ಬೆಳೆದು ನಿಂತಿದೆ.

ಕೆ. ಸತ್ಯನಾರಾಯಣ'ರವರು ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಕೊಪ್ಪ' ಗ್ರಾಮದಲ್ಲಿ ೧೯೫೪ ಏಪ್ರೀಲ್ ೨೧ ರಂದು ಜನಿಸಿದರು. ೧೯೭೨ ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎ ಪದವಿಯನ್ನು ಸುವರ್ಣ ಪದಕದೊಂದಿಗೆ ಪಡೆದರು. ಇದೇ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ೧೯೭೪ ರಲ್ಲಿ ಪಡೆದರು. ೧೯೭೯, ರಲ್ಲಿ ಭಾರತ ಸರ್ಕಾರದ ಇಂಡಿಯನ್ ರೆವಿನ್ಯೂ ಸರ್ವೀಸ್‌ಗೆ ಸೇರಿ ಆದಾಯ ತೆರಿಗೆ ಇಲಾಖೆಯಲ್ಲಿ ದೇಶದ ನಾನಾ ಭಾಗಗಳಲ್ಲಿ ಕೆಲಸ ಮಾಡಿ ಏಪ್ರೀಲ್ ೨೦೧೪ ರಲ್ಲಿ ಕರ್ನಾಟಕ ಮತ್ತು ಗೋವಾ ವಲಯದ ಮುಖ್ಯ ಆಯುಕ್ತರಾಗಿ ನಿವೃತ್ತರಾದರು.

ನವೋತ್ತರ ಕಾದಂಬರಿಕಾರರಲ್ಲಿ ಕೆ. ಸತ್ಯನಾರಾಯಣ ಅವರ ಪ್ರಯೋಗಗಳಿಗೆ ತನ್ನದೇ ಆದ ಒಂದು ವಿಶಿಷ್ಟ ಸ್ಥಾನವಿದೆ. 'ಒಂದು ಕಥಾನಕದ ಮೂಲಕ' [೧೯೮೮] ಎಂಬ ತಮ್ಮ ಮೊದಲ ಕಾದಂಬರಿಯಲ್ಲಿ ಸತ್ಯನಾರಾಯಣ ಬರವಣಿಗೆಯ ಸಿದ್ಧಮಾರ್ಗಗಳನ್ನು ತೊರೆದು ತಮ್ಮದೇ ಆದ ಒಂದು ದಾರಿಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಎರಡನೆಯ ಕಾದಂಬರಿ 'ರಾಜಧಾನಿಯಲ್ಲಿ ಶ್ರೀಮತಿಯವರು (೧೯೮೯) ಪದ್ಯರೂಪದಲ್ಲಿ ಬರೆದದ್ದು ಕಥನದ ಹಲವು ಸಾಧ್ಯತೆಗಳನ್ನು ಸೃಜನಶೀಲ ಪ್ರಯೋಗಗಳಿಗೆ ಒಡ್ಡುವುದು ಶ್ರೀಯುತರ ಬರಹಗಳ ಒಂದು ಮುಖ್ಯ ಲಕ್ಷಣವಾಗಿದೆ. 'ಗೌರಿ' (೧೯೯೨) ಸತ್ಯನಾರಾಯಣರ ಮೂರನೆಯ ಕಾದಂಬರಿ. ಇಲ್ಲಿ ಲೇಖಕರು ತಮ್ಮ ಮೊದಲೆರಡು ಕಾದಂಬರಿಗಳಿಗಿಂತ ತುಸು ಭಿನ್ನವೆನಿಸುವ ತಂತ್ರವನ್ನು ಬಳಸಿದ್ದಾರೆ. ಸನ್ನಿದಾನ(೧೯೯೭), ಕಾಲಜಿಂಕೆ(೨೦೦೫) 'ವಿಚ್ಛೇದನಾ ಪರಿಣಯ' (೨೦೧೦), ಕಾದಂಬರಿಗಳನ್ನು ರಚನೆ ಮಾಡಿರುವುದನ್ನು ಕಾಣಬಹುದು.

ಕೆ. ಸತ್ಯನಾರಾಯಣ ವಿಭಿನ್ನವಾದ ಕಥೆಗಳ ಸಮರ್ಥ ಲೇಖಕರು ನಿಮ್ಮ ಮೊದಲ ಪ್ರೇಮದ ಕಥೆ' [೧೯೯೩] ಎಂಬ ಕಥಾ ಸಂಕಲನವನ್ನು ಹೊರತಂದ ಅವರು 'ವಿಕ್ಟೋರಿಯಾಮಗ ದೇವಲಿಂಗು' (೧೯೯೮) ಎಂಬ ಅಪೂರ್ವ ಕಥೆಯ ಮೂಲಕ ತಾವು ಇತರ ಕಥೆಗಾರರಿಗಿಂತ ವಿಭಿನ್ನ ಎಂದು ತೋರಿಸಿಕೊಂಡಿದ್ದಾರೆ. 'ಹಳೆಯ ಕಾಲದ ಹೊಸ ಕಥೆ' (೨೦೦೨), 'ಈ ತನಕದ ಕಥೆಗಳು' (೨೦೦೬). ನಕ್ಸಲ್ ವರಸೆ' ೨೦೧೦, 'ಹೆಗ್ಗುರುತು' (೨೦೧೨) 'ಪ್ರಸಿದ್ದನಾಮಾ' (೨೦೧೧), 'ಭಾವ ಕಲ್ಲೋಲ' (ಆಯ್ದ ಕಥೆಗಳ ಮರಾಠಿ ಅನುವಾದ ಸಂಗ್ರಹ –೨೦೦೮), ದಲಿತರ ನಮ್ಮಕಥೆಗಳು' (೨೦೧೩), ಹನ್ನೋದನೆಯ ಇಂದ್ರಿಯ' (೨೦೧೩), 'ನಾಳೆ ಬರೆದ ಕಥೆಗಳು' (ಆಯ್ದ ಕಥೆಗಳು–೨೦೧೪), ಚಿತ್ರಗುಪ್ತನ ಕಥೆಗಳು(೨೦೧೫), 'ಅಮೇರಿಕನ್ ಮನೆ' (೨೦೧೬) ಕತೆಗಳನ್ನು ರಚನೆ ಮಾಡಿದ್ದಾರೆ.

ಕೆ. ಸತ್ಯನಾರಾಯಣರು ಈಗಾಗಲೇ ಐದು ಪ್ರಬಂಧ ಸಂಕಲನಗಳು 'ನಮ್ಮ ಪ್ರೀತಿಯ ಕ್ರಿಕೆಟ್' (೧೯೮೮), 'ದಾಂಪತ್ಯಕ್ಕೊಂದು ಶೀಲ' (೧೯೯೫), 'ನಿಂತ ಬಂಡಿಯ ದೇಶಾಂತರ' (೨೦೦೭), 'ಲೋಕ ಪ್ರಬಂಧ' (೨೦೧೨), 'ನಮ್ಮ ಮಕ್ಕಳೇ ಚರಿತ್ರೆ ಬರೆದರೆ' (೨೦೧೪).

(ಆಯ್ದ ಪ್ರಬಂಧಗಳು) ಪ್ರಕಟಿಸಿದ್ದಾರೆ. ಅವರು ನಮ್ಮ ಇಂದಿನ ಮಹತ್ವದ ಕಥೆ ಕಾದಂಬರಿಕಾರರಾಗಿದ್ದಂತೆ ಮಹತ್ವದ ಅಂಕಣ ಬರಹಗಾರರೂ ಪ್ರಮುಖ ಪ್ರಬಂಧಕಾರರು ಆಗಿದ್ದಾರೆ.

ಕೆ. ಸತ್ಯನಾರಾಯಣ ಅವರಿಗೆ ಮೂಲತಃ ಕತೆ ಮತ್ತು ಕಾದಂಬರಿ ಹಾಗೂ ಪ್ರಬಂಧಗಳನ್ನು ಬರೆಯುವುದರಲ್ಲಿ ಹೆಚ್ಚು ಆಸಕ್ತಿ, ಉತ್ತಮ ಕಾದಂಬರಿ ಕತೆ ಪ್ರಬಂಧ ಸಂಕಲನಗಳನ್ನು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕೊಟ್ಟಿರುವಂತೆಯೇ ಉತ್ತಮ ವಿಮರ್ಶಾ ಸಂಕಲನಗಳನ್ನು ನೀಡಿದ್ದಾರೆ. 'ಆಸಕ್ತಿ'–(೧೯೯೧), 'ಮನೋಧರ್ಮ',–(೨೦೦೧), 'ಖಾಸಗಿ ವಿಮರ್ಶೆ'–(೨೦೦೯), 'ಸುಮ್ಮನೆ ಓದೋಣ'(೨೦೦೨), ವೈವಿಧ್ಯ,–(೨೦೧೫), ಅವರ ವಿಮರ್ಶಾ ಬರಹಗಳು ಅವರ ಕಾದಂಬರಿಗಳಂತೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೌಲಿಕವಾದ ಬರಹಗಳಾಗಿವೆ.

ಸತ್ಯನಾರಾಯಣ' ರವರ ಪ್ರವಾಸ ಕಥನ 'ಸದ್ದು' ದೇವರು ಸ್ನಾನ ಮಾಡುತ್ತಿದ್ದಾರೆ (೧೯೯೮), ರಲ್ಲಿ ಪ್ರಕಟವಾಗಿದೆ. ಈ ಬರಹಗಳ ವಸ್ತು ರಾಜಕೀಯ ಮುಕ್ತವಾದ ಸಾಮಾಜಿಕ, ಸಾಹಿತ್ತಿಕ, ಸಾಂಸ್ಕೃತಿಕ ಮುಖ್ಯ ಘಟನಾವಳಿಗಳಿಗೆ ಮನಸ್ಸು ಸ್ಪಂದಿಸಿದ ಹಾಗೆ ಒಂದು ತೆರೆದ ಮನಸ್ಸಿನ ಚರ್ಚೆ ಪ್ರಧಾನವಾಗಿರುವಂತೆ ಕಾಣಿಸುತ್ತದೆ. ಇವರ ಅಂಕಣ ಬರಹಗಳಾದ 'ಕುಶಲೋಪರಿ'–(೨೦೦೮), 'ಮುಂದಣ ಅನಂತ'–(೨೦೧೩), 'ಒತ್ತಾಸೆ'–(೨೦೧೫), ಇಲ್ಲಿನ ಅನೇಕ ಬರಹಗಳು ಕಥಾನಕದ ರೂಪದಲ್ಲೇ ಇವೆ.

ಆತ್ಮ ಚರಿತ್ರೆ–'ನಾವೇನು ಬಡವರಲ್ಲ' (೨೦೧೫), ಸಣ್ಣ ಪುಟ್ಟ ಆಸೆಗಳು'–(೨೦೧೬), ವೃತ್ತಿ ವಿಲಾಸ'(೨೦೧೭), ಗಳನ್ನು ರಚನೆ ಮಾಡಿದ್ದಾರೆ. ಹಾಗೂ ಎಚ್.ವೈ. ಶಾರದಾ ಪ್ರಸಾದ್ –೨೦೧೪ ರಲ್ಲಿ ಜೀವನ ಚಿತ್ರವನ್ನು ರಚಿಸಿದ್ದಾರೆ. ಅಷ್ಟೇಅಲ್ಲದೇ ೧೯೯೫ರಲ್ಲಿ 'ಪ್ರಬಂಧ'ಗಳನ್ನು ಮತ್ತು 'ಬೆಸಗರಹಳ್ಳಿ ರಾಮಣ್ಣ' –೨೦೧೨, ಎನ್ನುವಂತಹ ಕೃತಿಗಳನ್ನು ಸಂಪಾದನೆ ಮಾಡಿದ್ದಾರೆ.

ಇದುವರೆಗೆ ಸಣ್ಣಕಥೆ, ಕಿರುಗತೆ, ಕಾದಂಬರಿ, ಪ್ರಬಂಧ, ವ್ಯಕ್ತಿಚಿತ್ರ, ಆತ್ಮಚರಿತ್ರೆ, ಅಂಕಣ ಬರಹ, ವಿಮರ್ಶೆ, ಪ್ರವಾಸಕಥನ ಹೀಗೆ ಬೇರೆ ಬೇರೆ ಪ್ರಕಾರಗಳಲ್ಲಿ ೨೫ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ೧೯೮೮ ಮತ್ತು೧೯೯೨ರಲ್ಲಿ ಇವರ ಪ್ರಬಂಧ ಮತ್ತು ಕಾದಂಬರಿಗಳಿಗೆ ಪುರಸ್ಕಾರ ನೀಡಿದೆ. ೨೦೧೦ರಲ್ಲಿ ಮಾಸ್ತಿ ಪ್ರತಿಷ್ಠಾನವು ಇವರ ಕಥಾ ಸಂಕಲನ 'ನಕ್ಸಲ್ ವರಸೆ'ಗೆ ಪುರಸ್ಕಾರ ದೊರತಿದೆ. ಮತ್ತು ೨೦೧೪ರಲ್ಲಿ ಒಟ್ಟು ಕಥಾಸಾಹಿತ್ಯಕ್ಕೆ ನೀಡಿರುವ ಕೊಡುಗೆಗಾಗಿ ಗೌರವ ಪ್ರಶಸ್ತಿಯನ್ನು ನೀಡಿದೆ.

- ೨೦೧೨ರಲ್ಲಿ ಬಿ.ಎಂ. ಶ್ರೀ ಪ್ರತಿಷ್ಠಾನವು ಇವರ ಒಟ್ಟು ಸಾಹಿತ್ಯ ಸಾಧನೆಗಾಗಿ ಎಂ.ವಿ.ಸೀ ಪ್ರಶಸ್ತಿ ನೀಡಿದೆ.
- ೨೦೧೩ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ಇವರ ಸಾಹಿತ್ಯ ಮತ್ತು ಆಡಳಿತ ಕ್ಷೇತ್ರದ ಸಾಧನೆಯನ್ನು ಪರಿಗಣಿಸಿ ಗೌರವ ಡಿ.ಲಿಟ್ ಪದವಿಯನ್ನು ನೀಡಿದೆ.

- ೨೦೧೪ರಲ್ಲಿ ಮಂಡ್ಯ ಕರ್ನಾಟಕ ಸಂಘವು ಸಣ್ಣ ಕಥೆಯ ಕ್ಷೇತ್ರದಲ್ಲಿನ ಸಾಧನೆಗಾಗಿ ಡಾ.ರಾ.ಗೌ. ಪ್ರಶಸ್ತಿ ನೀಡಿದೆ.
- ೧೯೯೫ರಲ್ಲಿ ಚೀನಾ ಟೀಬೆಟ್ ಪ್ರಾಂತ್ಯದ ಕೈಲಾಸ ಮಾನಸ ಸರೋವರದ ಚಾರಣದಲ್ಲೂ, ೨೦೧೦ರಲ್ಲಿ ರಾಜಸ್ಥಾನದ ಥಾರ್' ಮರಭೂಮಿಯ ರಾಷ್ಟ್ರೀಯ ಚಾರಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ.
- ೨೦೦೮ರಲ್ಲಿ ಮಂಡ್ಯದ ತಾಲ್ಲೂಕ್ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು.
- ೨೦೧೬ರಲ್ಲಿ ಬಿ.ಎಚ್. ಶ್ರೀಧರ್ ಪ್ರಶಸ್ತಿ ದೊರತಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ನಿಬಂಧವು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಅಧ್ಯಾಯಗಳು ಈ ರೀತಿಯಾಗಿವೆ.

ಅಧ್ಯಾಯ : ೧. ಕಥೆಗಾರ ಕೆ. ಸತ್ಯನಾರಾಯಣ

ಅಧ್ಯಾಯ : ೨. ಕೆ. ಸತ್ಯನಾರಾಯಣ' ಅವರ ಕಥಾ ಸಂಕಲನಗಳ ಪರಿಚಯ

ಅಧ್ಯಾಯ : ೩. ಕೆ. ಸತ್ಯನಾರಾಯಣ' ರವರ ಕಥೆಗಳ ವೈಶಿಷ್ಟ್ಯತೆ.

ಅಧ್ಯಾಯ : ೪. ವಿಮರ್ಶಕರ ದೃಷ್ಟಿಯಲ್ಲಿ ಕೆ. ಸತ್ಯನಾರಾಯಣ ಅವರ ಕಥೆಗಳು

ಅಧ್ಯಾಯ : ೫. ಕೆ. ಸತ್ಯನಾರಾಯಣ' ರವರ ಸಂದರ್ಶನ

ಅಧ್ಯಾಯ : ೬. ಸಮಾರೋಪ

ಅಧ್ಯಾಯ : ೭. ಅನುಬಂಧ

ಅಧ್ಯಾಯ ೧ರಲ್ಲಿ ಕೆ. ಸತ್ಯನಾರಾಯಣ' ರವರ ಜೀವನ ಮತ್ತು ಸಾಹಿತ್ಯಿಕ ಕೃತಿಗಳು. ಹಾಗೂ ಸಾಧನೆಯನ್ನು ಕುರಿತು ಚರ್ಚಿಸಲಾಗಿದೆ. ಹಾಗೂ ಅಧ್ಯಯನದ ಸ್ವರೂಪ ಮತ್ತು ಉದ್ದೇಶಗಳನ್ನು ಒಳಗೊಂಡಿದೆ. ಅಧ್ಯಾಯ ೨ರಲ್ಲಿ ಕೆ. ಸತ್ಯನಾರಾಯಣ' ರವರ ಕಥಾ ಸಂಕಲನಗಳ ಪರಿಚಯ ಕಥೆಗಳ ಪರಿಚಯವನ್ನು ಮಾಡಿಕೊಡಲಾಗಿದೆ. ಅಧ್ಯಾಯ ೩ರಲ್ಲಿ ಕೆ. ಸತ್ಯನಾರಾಯಣ ರವರ ಕಥೆಗಳ ವೈಶಿಷ್ಟ್ಯತೆಯನ್ನು ಕುರಿತು ಚರ್ಚಿಸಲಾಗಿದೆ. ಅಧ್ಯಾಯ ೪. ರಲ್ಲಿ ವಿಮರ್ಶಕರ ದೃಷ್ಟಿಯಲ್ಲಿ ಕೆ. ಸತ್ಯನಾರಾಯಣ ರವರ ಕಥೆಗಳನ್ನು ಕುರಿತು ವಿವಿಧ ವಿಮರ್ಶಕರ ಅಭಿಪ್ರಾಯಗಳನ್ನು ಕುರಿತು ಬರೆಯಲಾಗಿದೆ. ಅಧ್ಯಾಯ ೫. ರಲ್ಲಿ ಕೆ. ಸತ್ಯನಾರಾಯಣ'ರವರನ್ನು ಕುರಿತು ಮಾಡಿರುವ ಸಂದರ್ಶನವನ್ನು ಹಾಗೂ ಅಭಿಪ್ರಾಯಗಳನ್ನು ಒಳಗೊಂಡಿದೆ. ಅಧ್ಯಾಯ ೭. ರಲ್ಲಿ ನಿಬಂಧದ ಆಶಯವನ್ನು ಕ್ರೋಢೀಕರಿಸಿ ಉಪಸಂಹಾರದ ಮೂಲಕ ಕಟ್ಟಿಕೊಡಲಾಗಿದೆ.

ಅಧ್ಯಯನದ ಉದ್ದೇಶ

ಕೆ. ಸತ್ಯನಾರಾಯಣರ ಕತೆಗಳು ಕನ್ನಡ ಕಥನ ಸಾಹಿತ್ಯದಲ್ಲೇ ಅಪೂರ್ವವಾಗಿವೆ. ಕೇದ್ರಸ್ಥಾನದಲ್ಲಿ ಸಮಕಾಲೀನ ಜಗತ್ತಿನ ಪ್ರಸಿದ್ಧರನ್ನು ಜೀವಂತ ಪಾತ್ರಗಳಿಂದ ಇರಿಸಿ ಅವರ ಜನಪರ ಆಂದೋಲನಗಳಿಗೆ ಇಂದಿನ ಜನಾಂಗ ಪ್ರತಿಕ್ರಿಯಿಸುತ್ತಿದ್ದುದರ ಕಾಲ್ಪನಿಕ ಚಿತ್ರದ ಮೂಲಕ ಪ್ರಕಟಿಸಿದ್ದಾರೆ. ಇವರ ಕತೆಗಳು ಬಿಡಿಯಾಗಿ ಹಾಗೂ ಇಡಿಯಾಗಿ ಸಮಕಾಲೀನ ಭಾರತದ ವಾಸ್ತವ ಚಿತ್ರಣಗಳಾಗಿವೆ. ಒಂದು ಕಾಲಕ್ಕೆ ಪ್ರಸಿದ್ದರು ಸಾಧಿಸಿದ ಸಾಮಾಜಿಕ ಪರಿವರ್ತನೆ ಈಗ ಭ್ರಷ್ಟಾಚಾರ, ಸ್ವಾರ್ಥ, ದಲಿತರ ಮೇಲಿನ ದೌರ್ಜನ್ಯ, ನಗರೀಕರಣ ಹಳ್ಳಿಗೆ ಅಧಿಕಾರದ ವಿಕೇಂದ್ರಿಕರಣಗಳಲ್ಲಿ ಪರ್ಯವಸಾನವಾಗಿವೆ. ಒಟ್ಟಿನಲ್ಲಿ ಈಗ ಭಿನ್ನ ಸಾಮಾಜಿಕ ಪರಿಸರ ಬದಲಾಗಿದೆ. ಇವುಗಳನ್ನೆಲ್ಲಾ ಕಥೆಗಾರ ಬಿಡಿ ಬಿಡಿಯಾಗಿ ಬಿಡಿಸುವುದರ ಮೂಲಕ ಭಾರತದ ದುರಂತ ಚಿತ್ರಣವನ್ನು ಕೊಟ್ಟಿದ್ದಾರೆ.

ಬಾಲ್ಯದ ನೆನಪಲ್ಲಿ ಇಂದಿನ ಬದುಕನ್ನು ಪರೀಕ್ಷಿಸುವುದು, ಹಿಂದಿನ ನೆನಪಲ್ಲಿ ಇಂದನ್ನು ಅರ್ಥಮಾಡಿಕೊಳ್ಳಲು ಹೆಣಗುವುದು ಸತ್ಯನಾರಾಯಣ ಅವರ ಶೋಧನ ಮುಖ್ಯವಾದದೊಂದು ಎಳೆದ. ಕಥೆ ಹೇಳುವುದು ಮತ್ತು ಕಥೆಯೊಳಗೆ ಒಂದು ಕಥೆ ಕೇಳುವುದು ಎರಡೂ ಕೂಡ ಸತ್ಯನಾರಾಯಣ ಅವರಿಗೆ ಬದುಕಿನ ಮೂಲ ಸತ್ಯ ಯಾವುದು ಎಂಬುದರ ನಿರಂತರ ಹುಡುಕಾಟದ ಒಂದು ಸಾಧನ. ಇಂದು ಅನೇಕರು ಬದುಕುತ್ತಿರುವ ಮದ್ಯಮ ದರ್ಜೆಯ ಮಾಮೂಲಿ ಸಾಮಾನ್ಯ ಬದುಕನ್ನು ಸತ್ಯನಾರಾಯಣ ಅವರ ಕಥೆಗಳಲ್ಲಿ ಹಾಗೇ ಕಾಣಿಸಿಕೊಂಡು ಅವು ಇರುವುದೇ ಹಾಗೇ ಎಂಬ ತಿಳುವಳಿಕೆಯನ್ನು ಅರಿವಿಗೆ ತರುವಲ್ಲಿ ಹೆಚ್ಚಿನ ಕಥೆಗಳು ಕೊನೆಗೊಳ್ಳುತ್ತವೆ.

ಸತ್ಯನಾರಾಯಣರ ಕಥೆಗಳಲ್ಲಿ ನಮ್ಮ ಕಾಲದ ಅಂದರೆ ಆಧುನಿಕ ಬದುಕಿನ ಪ್ರಸ್ತುತ ಸನ್ನಿವೇಶಗಳನ್ನು ಗುರುತಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಹಾಗೂ ನವೋತ್ತರದ ಅತ್ಯಾಧುನಿಕ ಜಗತ್ತಿನ ವೈವಿದ್ಯಮಯ ವಾಸ್ತವಗಳನ್ನು ಗುರುತಿಸುವುದು. ಹಾಗೂ ಇವರ ಕತೆಗಳಲ್ಲಿ ಬದುಕನ್ನು ವಿಶಿಷ್ಟವಾಗಿ ಗ್ರಹಿಸುವ ಕೆಲಸವನ್ನು ಮಾಡಿರುವುದನ್ನು ಕಾಣಬಹುದು.

ಬದುಕು ಮತ್ತು ಸಾಮಾನ್ಯನ ದೈನಂದಿನಗಳೇ ಪ್ರದಾನ ಕಾಳಜಿಯಾಗಿರುವ ವೈಶಿಷ್ಟವನ್ನು ಹೊಂದಿರುವುದನ್ನು ಕತೆಗಳಲ್ಲಿ ಕಾಣಬಹುದು. ಕೆ. ಸತ್ಯನಾರಾಯಣ ಕಳೆದ ಮೂರು ದಶಕಗಳಿಂದಲೂ ಬರೆಯುತ್ತ ಬಂದಿರುವ ಒಬ್ಬ ಕತೆಗಾರ ತೋರುತ್ತಿರುವ ಜೀವನ ಪ್ರೀತಿ, ಪ್ರಯೋಗ ಶೀಲತೆ ಮತ್ತು ಕಥನ ಕಲೆಯ ಕುರಿತಾದ ಜಿಜ್ಞಾಸೆಗಳು ಮಹತ್ವದ್ದಾಗಿದೆ ಎಂದು ತಿಳಿಯಬಹುದು.

ಕತೆಗಳಲ್ಲಿ ದುಡಿಯುವ ಮಹಿಳೆಯರ ಕೌಟುಂಬಿಕ ಜೀವನದ ಏಳು ಬೀಳುಗಳನ್ನು ಹಾಗೂ ದಲಿತ ಜಗತ್ತಿನ ಒಳಗೆ ಜರಗುತ್ತಿರುವ ಪಲ್ಲಟಗಳನ್ನು, ಸಂಘರ್ಷಗಳನ್ನು ಬದಲಾವಣೆಯ ಹಂತದಲ್ಲಿ ವರ್ತಮಾನದ ಜತೆಗಿನ ಅನುಸಂದಾನವನ್ನು ಗುರುತಿಸುವುದು ಅಧ್ಯಯನದ ಉದ್ದೇಶವಾಗಿದೆ.

ಅಧ್ಯಾಯ : ಎರಡು

ಕಥೆಗಾರ ಕೆ. ಸತ್ಯನಾರಾಯಣ'ರವರ ಕಥಾ ಸಂಕಲನಗಳ ಪರಿಚಯ

ಅಧ್ಯಾಯ: ಎರಡು

ಕೆ. ಸತ್ಯನಾರಾಯಣ'ರವರ ಕಥಾ ಸಂಕಲನಗಳ ಪರಿಚಯ

೧. ನಿಮ್ಮ ಮೊದಲ ಪ್ರೇಮದ ಕಥೆ

ಕೆ. ಸತ್ಯನಾರಾಯಣರು ಸಣ್ಣಕಥಾ ಕ್ಷೇತ್ರದಲ್ಲಿ ಗುರುತಿಸಲ್ಪಟ್ಟದ್ದು 'ನಿಮ್ಮ ಮೊದಲ ಪ್ರೇಮದ ಕಥೆ' ಎಂಬ ಮೊದಲ ಕಥಾ ಸಂಕಲನದ ಮೂಲಕ ಈ ಸಂಕಲನವು ೧೯೯೩ರಲ್ಲಿ ಪ್ರಕಟವಾಯಿತು. ಸತ್ಯನಾರಾಯಣರ ಕಥೆಗಳನ್ನು ಸುಲಭದಲ್ಲಿ ಸಂಕ್ಷಿಪ್ತಗೊಳಿಸಿ ಹೇಳಲು ಬರುವುದಿಲ್ಲ. ಅವುಗಳ ಧೋರಣೆ ಏನು ಎಂದು ಸ್ಪಷ್ಟ ಮಾತುಗಳಲ್ಲಿ ವಿವರಿಸುವುದು ಕಷ್ಟವೇ.

ಈ ಕಥಾ ಸಂಕಲನದಲ್ಲಿ ಏಳು ಕಥೆಗಳಿವೆ. 'ಸೀತೆ ಹೇಳಿದ ರಾಮನ ಗುರುತು', 'ಮುದುಕಿ ಹೇಳಿದ ಸರ್ ಎಂ.ವಿ. ಕಥೆ', 'ಸಾವೆಂಬ ಕತೆಯೊಡನೆ', 'ನಿಮ್ಮ ಮೊದಲ ಪ್ರೇಮದ ಕಥೆ', 'ನಜೀರಸಾಬು ಚರಿತ್ರೆಯು', 'ಮಾರ್ಕ್ಸ್ ಟುಲಿ ಹೇಳಬೇಕಾಗಿ ಬಂದ ಶ್ರೀ (ದಲಿತ) ರಾಮಚಂದ ಕತೆ', 'ಎತ್ತಣಿಂದೆತ್ತ ಎಂಬುದರ' ಎನ್ನುವಂತಹ ಕಥೆಗಳನ್ನು ಕಾಣಬಹುದು.

'ಸೀತೆ ಹೇಳಿದ ರಾಮನ ಗುರುತು' ಕಥೆಯಲ್ಲಿ ರಾಮ ಹನುಮಂತನ ವರ್ಣನೆಯ ವಿಷಯವಾದರೆ ಆತ ಸೀತೆಯ ಕಥನದ ವಿಷಯವಾಗುತ್ತಾನೆ. ಹನುಮಂತ ರಾಮನನ್ನು ಗುರುತಿಸುವುದು ಅವನ ಅದ್ಭುತವಾದ ದೇಹದ ಮೂಲಕ ಅದರ ಎಲ್ಲ ಸೂಕ್ಷ್ಮಗಳನ್ನು ಅವನು ಆಸ್ಥೆಯಿಂದ ಗಮನಿಸಿದ್ದಾನೆ. ಕಥೆಯಲ್ಲಿ ಸೀತೆ ಹೇಳಿಧ ಕತೆಯೇ ಒಂದು. ಹನುಮಂತ ಗ್ರಹಿಸಿದ್ದು ಇನ್ನೊಂದು ಸೀತೆ ಹೇಳಿದ ಕಕಾಸುರ ವೃತ್ತಾಂತ ಮತ್ತು ತನ್ನ ಅರಣ್ಯವಾಸದ ನೆನಪುಗಳಲ್ಲಿ ಸೂಚ್ಯವಾಗಿರುವ ಶೋಕವನ್ನು ಹನುಮಂತ ಕೇಳಿಸಿಕೊಳ್ಳುವುದೇ ಇಲ್ಲ. "ಸೀತೆಗೆ ಮಾತೇ ಹೊರಡಲಿಲ್ಲ. ತಾನು ರಾಘವನಿಗೆ ಗುರುತಿಗಾಗಿ ಹೇಳಿದ ಕತೆಯಿಂದಾಗಿ ಹನುಮಂತ ಅಷ್ಟು ಆನಂದ ತುದಿಲನಾಗಿ ಹೀಗೆಲ್ಲ ಮಾತನಾಡುವನೆಂದು ಅವಳು ಊಹಿಸಿರಲೇ ಇಲ್ಲ."[೧] "ರಾಮನ ಪತ್ನಿ ಎಂಬುದರ ಹೊರತಾಗಿ ತನಗೆ ಒಂದು ವ್ಯಕ್ತಿತ್ವವೇ ಇಲ್ಲವೆ" ಎಂಬ ಸೀತೆಯ ಅಳಲು ಅದರ ಧ್ವನಿ ಕೇಳಿಸಿಕೊಳ್ಳುವವರೇ ಇಲ್ಲದೆ ಮೂಕವೇದನೆಯಾಗುತ್ತದೆ.

ಮುದುಕಿ ಹೇಳಿಧ ಸರ್ ಎಂ.ವಿ. ಕಥೆಯು ಎಂ.ವಿ. ಅವರ ಸ್ಮರಣೆಯ ನೆಪದಲ್ಲಿ ಊರಿನ ಗತಿಯನ್ನು ಹಿಡಿಯುತ್ತದೆ. ಕಥೆಯಲ್ಲಿ ಭಾಗಮ್ಮ ದಿವಾನರಾದ ಸರ್ ಎಂ.ವಿ. ಅವರಿಂದ ಹತ್ತು ರೂಪಾಯಿನ ಮನಿಯಾರ್ಡರ್ ಪಡೆದು ಕೆಸ್ತೂರಿನ ಸಂತೆಯಿಂದ ರಾಗಿಕಲ್ಲು ತೆಗೆದುಕೊಂಡು ಬರುತ್ತಾಳೆ. ಭಾಗಮ್ಮ ತನ್ನ ಗಂಡ ತಿಪ್ಪಯ್ಯನ ಉಸಾಬರಿಗಳಿಂದ ನಷ್ಟ ಅನುಭವಿಸಿ ನೊಂದವಳು. ಆ ನೋವನ್ನು ಹಂಚಿಕೊಳ್ಳಲು ಅವಳಿಗಿದ್ದ ಒಂದೇ ಆಸರೆ ಬೀಸೋಕಲ್ಲು. ಬೀಸೋಕಲ್ಲು ಭಾಗಮ್ಮನ ಬದುಕಿನ ಗತಿಗೆ ಎಷ್ಟು ಮುಖ್ಯವಾಗಿತ್ತೋ ತನ್ನ ಎದೆಗುದಿ ತೋಡಿಕೊಳ್ಳಲು ಆಪ್ತ ಸಂಗಾತಿಯಾಗಿ ಅಷ್ಟೇ ಮುಖ್ಯವಾಗುತ್ತದೆ. ಇದನ್ನು ಮರಳಿ ಪಡೆಯಲು ಕಾರಣರಾದ ವಿಶ್ವೇಶ್ವರಯ್ಯನವರಲ್ಲಿ ಅವಳದು ತುಂಬು ಕೃತಜ್ಞತೆ.

ಮಾರ್ಕ್‌ಟುಲಿ ಹೇಳಬೇಕಾಗಿ ಬಂದ ಶ್ರೀ(ದಲಿತ) ರಾಮಚಂದನ ಕತೆಯನ್ನು ಹೇಳಲೇಬೇಕಾಗಿ ಬರುವ ಸಂದರ್ಭವನ್ನು ಸೃಷ್ಟಿಸುವ ಘಟನೆಯೆಂದರೆ ಡಿ.ಸಿ. ಭರತಕುಮಾರ ಒಬ್ಬ ಹರಿಜನನನ್ನು ದೇವಸ್ಥಾನವೊಂದರ ಅರ್ಚಕನನ್ನಾಗಿ ನೇಮಿಸಿದ ಪ್ರಸಂಗದಿಂದ "ಯಾವುದು ಸರಿ, ಯಾವುದು ತಪ್ಪು ಅಂತ ನಿರ್ಧಾರ ಮಾಡಿದ ತಕ್ಷಣವೇ ಮನಸ್ಸು ಯೋಚನೆ ಮಾಡೋದನ್ನ, ಗ್ರಹಿಸೋದನ್ನ ನಿಲ್ಲಿಸಿಬಿಡುತ್ತೆ" "ಸರಿ–ತಪ್ಪಿನ ಕಲ್ಪನೆಯೇ ಇಲ್ಲದೆ ಹೋದ್ರೆ ಪ್ರಪಂಚ ಮುಂದುವರಿಯೋದು ಹೇಗೆ ಹೇಳಿ. ಅದಕ್ಕೊಂದು ದಿಕ್ಕು ದೆಸೆ ಬೇಕಲ್ಲ?" ಇದಕ್ಕೆ ಟುಲಿಯವರು "ಚರಿತ್ರೆ ಆಗಲಿ ಪ್ರಪಂಚ ಆಗಲಿ ಮುಂದುವರಿಯೋದು ಅಗತ್ಯಕ್ಕೆ ಅನಿವಾರ್ಯಕ್ಕೆ ತಕ್ಕಂತೆ ಮಾತ್ರವೇ ಹೊರತು ಸರಿ ತಪ್ಪಿನ ಕಲ್ಪನೆಯಿಂದಲ್ಲ"[೨] ಅವರ ಈ ಮಾತು ಕೇಳಿ ಶ್ರೋತೃವೊಬ್ಬನನ್ನು ಕೆರಳಿಸುತ್ತದೆ. ಅವನ ಟೀಕೆಯು ದಲಿತ ರಾಮಚಂದನ ಕತೆ ಹೇಳಲು ಟುಲಿಗೆ ಕಾರಣವಾಗುತ್ತದೆ. ಅವರನ್ನು ಟೀಕಿಸುವ ಈ ವ್ಯಕ್ತಿಗೆ ಟುಲಿ ಭಾರತದಲ್ಲಿಯೇ ಹುಟ್ಟಿದವರೆನ್ನುವುದಾಗಲಿ ರಾಮಚಂದ ಯಾವ ಜಾತಿಯವನೆಂದು ವಿಚಾರ ಕೂಡ ಮಾಡದೆ ಅವನನ್ನು ತಮ್ಮ ಮನೆಯಲ್ಲಿ ಸೇರಿಸಿಕೊಂಡು ಅವನೊಬ್ಬ ಮನೆತನದ ಸದಸ್ಯನೆಂಬಂತೆಯೇ ಅವನನ್ನು ನಡೆಸಿಕೊಂಡುದುದಾಗಲಿ ತಿಳಿದಿರುವುದಿಲ್ಲ.

'ಸಾವೆಂಬ ಕತೆಯೊಡನೆ' ಎಂಬ ಕತೆಯಲ್ಲಿ ಪ್ರಸಿದ್ದ ಉದ್ಯಮಿ ವಾರಿಯರ್‌ನ ಸಾವು ಕತೆಯ ನಿವೇದಕ ಹಾಗೂ ಅವನ ಗೆಳೆಯರಾದ ಶ್ರೀನಿವಾಸ ಹಾಗೂ ಶ್ರೀಕಂಠಯ್ಯನವರಿಗೆ ಚಿಂತನೆಯ ವಿಷಯವಾಗುತ್ತದೆ. "ಯಾರು ಯಾರು ಹೇಗೆ ಬದುಕ್ತಾರೆ, ಹಾಗೆ ಸಾಯ್ತಾರೆ" ಎಂದು ಹೇಳುವ ಶ್ರೀಕಂಠಯ್ಯ ಒಂದು ನೀತಿಕಥೆಯ ಮೂಲಕ ತಮ್ಮ ಮಾತನ್ನು ಸಮರ್ಥಿಸಿಕೊಳ್ಳುತ್ತಾರೆ. ಶ್ರೀಕಂಠಯ್ಯನವರ ಕತೆ ಶ್ರೀನಿವಾಸನನನ್ನು ಗಾಢವಾಗಿ ಪ್ರಭಾವಿಸುತ್ತದೆ. ಆದರೆ ಈ ಕತೆಯನ್ನು ಕುರಿತು ಅವನಲ್ಲಿ ಸಂಶಯಗಳು ಇವೆ. "ನೋಡಿ ನೀವು ಹೇಳಿದ್ದೆಲ್ಲಾ ಸರಿ ಆದ್ರೂ, ನಿಜ ಆದ್ರೂ ಇದರಿಂದ ಹೀಗಾಯ್ತು ಇದಕ್ಕೆ ಹೀಗಾಯ್ತು ಅಂತ ಹೇಳೋದು ಬಹು ಕಷ್ಟ."[೩] ತನ್ನ ಮಾತಿನ ನಿದರ್ಶನವೆಂದು ಅವನು ಒಂದು ಕತೆಯನ್ನು ಹೇಳುತ್ತಾನೆ.

ಕತೆ ಹೇಳುವಾಗ ಶ್ರೀನಿವಾಸನ ಉದ್ದೇಶ ಶ್ರೀಕಂಠಯ್ಯನ ನಿಲುವನ್ನು ವಿರೋಧಿಸುವುದಾಗಿರುತ್ತದೆ. ತನ್ನ ಉದ್ದೇಶವನ್ನು ಹೀಡೇರಿಸಿಕೊಳ್ಳಲು ಅವನು ಜೀವಂತವಾಗಿರುವ ಸುಬ್ಬಿಗೆ ಸಾವು ಹಾಗೂ

ತೃಪ್ತಿಕರ ಅಂತ್ಯಕ್ರಿಯೆಗಳನ್ನು ಕಲ್ಪಿಸುತ್ತಾನೆ. ಆದರೆ ಕತೆಗೆ "ಒಳ್ಳೆಯದಾಯ್ತು ಬಿಡು ಶ್ರೀನಿವಾಸ ಯಾರ ಹಂಗಿಗೂ ಹೆಚ್ಚಿಗೆ ದಿನ ಬೀಳಬಾರದು ಅಂತ ಭಗವಂತನ ಇಚ್ಛೆ ಇತ್ತೋ ಏನೋ"[೪] ಎಂದಾಗ ಅದಕ್ಕೆ ವಿರುದ್ಧವಾಗಿ ಅವರನ್ನು ಕೆಣಕುತ್ತಾನೆ.

'ಎತ್ತಣಿಂದೆತ್ತ ಎಂಬುದರ' ಕತೆಯಲ್ಲಿ ಚೀಪ್ ಎಂಜಿನಿಯರೆಂದು ಕೆಲಸ ಮಾಡಿ ನಿವೃತ್ತರಾದ ನಂಜಪ್ಪನವರು ಎದುರಿಸಬೇಕಾದ ಭ್ರಷ್ಟಾಚಾರದ ಆಪಾದನೆ ಹಾಗೂ ಕೋರ್ಟ್‌ಕೇಸ್‌ನ ಸಮರ್ಥನೆಯನ್ನು ಮಾಡಲು ಶ್ರೀಕಂಠಯ್ಯ ಹೇಳುವ 'ಹೆಂಗಸಿನ ಕಥೆ' ಹುಟ್ಟಿಕೊಳ್ಳುತ್ತದೆ. ಈ ಕತೆಯ ನಾಯಕ ಕರಿಯಪ್ಪ ಜಮೀನ್ದಾರ ಮನೆತನದಲ್ಲಿ ಹುಟ್ಟಿದರೂ ಜಮೀನ್ದಾರ ಜೀವನವನ್ನು ಬಿಟ್ಟು ಪ್ರೇಮಮಯೀ ಜೀವನವನ್ನು ಆಯ್ದುಕೊಳ್ಳುತ್ತಾನೆ. ಇವನ ಬದುಕನ್ನು ನೆನೆದಾಗ ಶ್ರೀಕಂಠಯ್ಯನವರಿಗೆ "ನಮ್ಮ ದೇಶದ ಜನಸಂಖ್ಯೇಲಿ ನಾಲ್ಕಾಣೆ ಭಾಗ ಕರಿಯನಂತೋರಿದ್ರು ಈ ಹಾಳು ಭ್ರಷ್ಟಾಚಾರ, ಲಂಚ ಎಲ್ಲಾ ಎಷ್ಟೋ ಕಡಿಮೆ ಆಗುತ್ತೆ"[೫] ಎಂದೆನಿಸುತ್ತದೆ.

ಗೋಪಾಲ ಹೇಳುವ ತನ್ನ ತಂದೆ ಮಧುಸೂದನ ರೆಡ್ಡಿಯ ಕತೆಯ ಆಶಯವೂ ಇದೇ ಆಗಿದೆ. ಹುಸೇನನ ಮೂಲಕ ಮಂತ್ರ ಮಾಟದ ಆಕರ್ಷಣೆಗೆ ಒಳಗಾಗಿ ಅವನ ಸಾವಿನ ನಂತರ ಅವನಿಂದಲೇ ಆವಾಹಿತನಾಗಿ ಅವನ ಹೆಂಡತಿಯನ್ನು ಸ್ವೀಕರಿಸುವ ಮಧುಸೂದನ ರೆಡ್ಡಿಯನ್ನು ಅವನ ಲೌಕಿಕ ಪ್ರಗತಿ ಹಾಗೂ ಸ್ಥಾನಮಾನಗಳು ತಟ್ಟುವುದೇ ಇಲ್ಲ. ಮಧುಸೂದನ ರೆಡ್ಡಿ ಅದೃಶ್ಯನಾಗುವದರೊಂದಿಗೆ ಕತೆ ಕೊನೆಗೊಳ್ಳುತ್ತದೆ.

'ನಿಮ್ಮ ಮೊದಲ ಪ್ರೇಮದ ಕಥೆ'ಯಲ್ಲಿ ಪುಟ್ಟರಾಜು ತನ್ನ ಕೌಟುಂಬಿಕ ಹಾಗೂ ಸಾಮಾಜಿಕ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಾನೆ. ಆದರೆ ಈ ಹೊಣೆ ಒಂದು ನಾಟಕ ಪ್ರದರ್ಶನದ ಮೂಲಕ ಪರಿಚಿತವಾಗುವ ರತ್ನಿಯ ಜೊತೆಗೆ ಅವನಿಗಿರುವ ಪ್ರೇಮ ಸಂಬಂಧಕ್ಕೆ ಅಡ್ಡ ಬರುವುದಿಲ್ಲ. ನಿವೇದಕ ಮಿತ್ರ ಪುಟ್ಟರಾಜುವಿನ ಸೌಭಾಗ್ಯವನ್ನು ಹೊಗಳಿ ಕೊಂಡಾಡುತ್ತಾನೆ. "ಒಂದು ಸಲ ಆ ತರ ಹೂವಾಗಿಬಟ್ರೆ, ಹೂವಿನಂತ ಹುಡುಗಿ ಸಿಕ್ಕುಬಿಟ್ರೆ ಸಂಸಾರದ ರುಚಿ ಅನ್ನೋದು ಕೆಡೋದೇ ಇಲ್ಲ" ಇದು ಪುಟ್ಟರಾಜುವಿನ ಕತೆಯ ಪ್ರಾರಂಭದಲ್ಲಿ ಗೆಳೆಯರ ನಡುವೆ ನಡೆದ ಚರ್ಚೆಗೆ ಉತ್ತರವಾಗಿದೆ. ನಲ್ವತ್ತಕ್ಕೆ ಏಕೆ ದಾಂಪತ್ಯ ಸುಸ್ತು ಹೊಡೆಸುತ್ತದೆ. ಪ್ರೀತಿಸಬೇಕು ಅನ್ನುವ ಅನಿಸಿಕೆ ಏಕೆ ಪ್ರೀತಿಯಾಗಿ ಮಾರ್ಪಡುವುದೇ ಇಲ್ಲ. ಪುಟ್ಟರಾಜುವಿನ ಕತೆ ವರ್ತಮಾನಕ್ಕಿಲ್ಲದೇ ಹೋದರೂ ಭವಿಷ್ಯಕ್ಕೆ ಪ್ರಸ್ತುತವಾಗಬಹುದು ಎನ್ನುವುದು ಈ ಕತೆ ಹೇಳುವ ನಿವೇದಕ ಮಿತ್ರನ ಆಸೆ.

೨. 'ವಿಕ್ಟೋರಿಯಾ ಮಗ ದೇವಲಿಂಗು'

ಕೆ. ಸತ್ಯನಾರಾಯಣ'ರವರ ಎರಡನೆಯ ಕಥಾ ಸಂಗ್ರಹ 'ವಿಕ್ಟೋರಿಯಾ ಮಗ ದೇವಲಿಂಗು' ಇದು ೧೯೯೮ರಲ್ಲಿ ಪ್ರಕಟವಾಯಿತು. ಈ ಕಥಾಸಂಕಲನದಲ್ಲಿ 'ವಿಕ್ಟೋರಿಯಾ ಮಗ ದೇವಲಿಂಗು', 'ಲೋಕನಾಯಕರ ಮೇಲುಕೋಟೆ ಪುರಾಣ', 'ಮಿಸೆಸ್ ಡೆತ್ ಅಮ್ಮನ ಸಾವು', 'ನಡೆಯುತ್ತಿತ್ತ,

ಕತೆ ಬೆಳೆಯುತ್ತಿತ್ತ’, ‘ಇನ್ನೊಬ್ಬ ಗಾಂಧಿಯ ಹೆಂಡತಿ’, ‘ಹೀಗೂ ಉಂಟೆ ಪ್ರೇಮದ ಶೈಲಿಯು’, ‘ಇಂಗ್ಲೀಷ್ ಗೌಡರು ಎಂಬ ಭಯವು’, ‘ಚಿನ್ನಸ್ವಾಮಿ ಮಂಡಲ್ ವರದಿ’, ‘ಸೈಕಲ್ ಇನ್ನೊಂದು ಸಾಕು’ ಒಟ್ಟು ಹತ್ತು ಕಥೆಗಳನ್ನು ಒಳಗೊಂಡಿದೆ.

‘ನಿಮ್ಮ ಮೊದಲ ಪ್ರೇಮದ ಕಥೆ’ ಕತೆಯ ಕತೆಯಾದರೆ ಈ ಸಂಗ್ರಹದ ‘ವಿಕ್ಟೋರಿಯಾ ಮಗ ದೇವಲಿಂಗು’ ಕತೆಗಾರನ ಕತೆಯಾಗಿದೆ. ಈ ಕತೆಯ ದೇವಲಿಂಗು ಒಬ್ಬ ಅದ್ಭುತ ಕಥನಕಾರ, “ವಸ್ತ್ರಾಪಹರಣವನ್ನೋ ಅಭಿಮನ್ಯುವಿನ ಸಾವನ್ನೋ, ಅಶ್ವತ್ಥಾಮನ ಸಾವನ್ನೋ ಸೀತಾಪರಿತ್ಯಾವನ್ನೋ ಅವನು ಕಣ್ಣಲ್ಲಿ ನೀರು ತುಂಬಿಕೊಂಡು ಕಥಿಸಲು ಪ್ರಾರಂಭಿಸಿದರೆ ನಮ್ಮ ಕಣ್ಣಲ್ಲಿ ನೀರು ಗಂಟಲಿನ ನರಗಳೆಲ್ಲ ಉಬ್ಬಿಕೊಳ್ಳೋದು”[೬] ಎಂದು ಅವನನ್ನು ಚಿಕ್ಕಂದಿನಿಂದಲೂ ಬಲ್ಲ ನಿವೇದಕ ಅವನ ಕಥನ ಶಕ್ತಿಯನ್ನು ವರ್ಣಿಸುತ್ತಾನೆ.

ಕತೆಗಳನ್ನು ಸಂಗ್ರಹಿಸುವ ಯೋಜನೆಯಿಟ್ಟುಕೊಂಡು ಭಾರತಕ್ಕೆ ಬರುವ ಕೇಂಬ್ರಿಡ್ಜ್ ವಿದುಷಿ ಪ್ರೊಫೆಸರ್ ಮಾರ್ಗರೇಟ್ ಮಿಡ್‌ಳಿಗೆ ಕಥನಗಳ ಬಗ್ಗೆ ತನ್ನದೇ ಆದಂತಹ ಸಿದ್ಧಾಂತಗಳಿವೆ. ಜಾನಪದ ಕತೆಗಳು, ಪೌರಾಣಿಕ ಕತೆಗಳು ಕೂಡ ಹೇಳುವವನ ವ್ಯಕ್ತಿತ್ವ, ಆಸೆ–ಆಕಾಂಕ್ಷೆಗಳಿಗನುಗುಣವಾಗಿ ಬೇರೆ ಬೇರೆಯಾಗುತ್ತ ಹೋಗುತ್ತವೆ. ನಿವೇದಕ ದೇವಲಿಂಗುವಿನ ಪ್ರಸ್ತಾಪ ಮಾಡಿದಾಗ ಮಾರ್ಗರೇಟ್ ಮಿಡ್‌ಳಿಗೆ ಅವನಲ್ಲಿ ಆಸಕ್ತಿ ಹುಟ್ಟುತ್ತದೆ. ಆದರೆ ದೇಶೀಯ ಕಥನಕಾರನಾದ ದೇವಲಿಂಗು ಅವಳೊಡನೆ ಸಹಕರಿಸಲು ಒಪ್ಪುವುದಿಲ್ಲ.

ಮಾರ್ಗರೇಟ್ ಮೀಡ್‌ಳಿಗೆ ಬೇಕಾದ ಕಥನಗಳನ್ನು ಒದಗಿಸಲು ದೇವಲಿಂಗು ಸಿದ್ಧನಿಲ್ಲ. ಆದರೆ ಅವನಿಗೆ ಅವನದೇ ಆದ ಕಥನಗಳಿವೆ. ಈ ಕಥನೆಗಳನ್ನು ಹೇಳುವಾಗ ಅವನು ‘ವಿಕ್ಟೋರಿಯಾ ಮಗ ದೇವಲಿಂಗು’ ಎಂಬ ಹೊಸ ವ್ಯಕ್ತಿತ್ವವನ್ನೇ ತನ್ನಲ್ಲಿ ಆವಾಹಿಸಿಕೊಳ್ಳುತ್ತಾನೆ.

‘ಇಂಗ್ಲೀಷ್ ಗೌಡರು ಎಂಬ ಭಯವು’ ಕಥೆ ವಸಾಹತಿನ ಅನುಭವದ ವಸ್ತುವನ್ನಾಧರಿಸಿದ ಕತೆ. ನಿವೇದಕ/ನಿರೂಪಕ ಬರೆಯುವುದರಲ್ಲಿಯ ಆಸಕ್ತಿಯನ್ನು ಗಮನಿಸಿದ ಅವರ ಅನ್ಯಭಾಷೀಯ ಮಿತ್ರರು ಅವನನ್ನು ಇಂಗ್ಲೀಷಿನಲ್ಲಿ ಕತೆ ಕಾದಂಬರಿಗಳನ್ನು ಯಾಕೆ ಬರೆಯಬಾರದು ಎಂದು ಕೇಳಿದಾಗ ಅವನು ಚಿಕ್ಕಂದಿನಿಂದಲೂ ತಾನು ಇಂಗ್ಲೀಷ್ ಗೌಡನ ಬಗ್ಗೆ ಬೆಳೆಸಿಕೊಂಡ ಭಯ ಅದಕ್ಕೆ ಕಾರಣವಾಗಿರಬಹುದು ಎಂದು ಹೇಳಿ ಅವನ ಕತೆಯನ್ನು ಪ್ರಾರಂಭಿಸುತ್ತಾನೆ.

ಮಂಡ್ಯ ಜಿಲ್ಲೆಯ ಒಂದು ಚಿಕ್ಕ ಹಳ್ಳಿಗೆ ಸೇರಿದ ಕಾಳಮರಿಗೌಡ ಇಂಗ್ಲೀಷ್ ಅಭ್ಯಾಸದ ಪರಿಣಾಮವಾಗಿ ಕೆ.ಎಮ್. ಗೌಡನಾಗಿ ಹೊಸದೊಂದು ವ್ಯಕ್ತಿತ್ವವನ್ನು ಪಡೆದುಕೊಳ್ಳುತ್ತಾನೆ. ಸುಧಾರಣಾಪ್ರಿಯಳಾದ ಅವನ ಮಲೆನಾಡಿನ ಹೆಂಡತಿ ಮಂಗಳಮ್ಮನ ವ್ಯಕ್ತಿತ್ವವು ಗೌಡನ ಈ ಹೊಸ ವ್ಯಕ್ತಿತ್ವಕ್ಕೆ ಪೋಷಕವಾಗುತ್ತದೆ. ಗೌಡನನ್ನು ಇಂಗ್ಲೀಷ್ ಮೋಹ ಎಷ್ಟರ ಮಟ್ಟಿಗೆ ಆವರಿಸುತ್ತದೆಯೆಂದರೆ ಜನರು ಅವನ ಸಿಟ್ಟನ್ನು ಕೂಡ ‘ಇಂಗ್ಲೀಷ್ ಸಿಟ್ಟು’ ಎಂದು

ಕರೆಯುವಂತಾಗುತ್ತದೆ. ಇಂಗ್ಲೀಷ್ ಗೌಡನ ಪ್ರಭಾವದಲ್ಲಿ ಅವನ ತಂಗಿ ನಾಗಿ ಕೂಡ ಈ ಮೋಹಕ್ಕೆ ಒಳಗಾಗುತ್ತಾಳೆ.

'ಲೋಕನಾಯಕರ ಮೇಲುಕೋಟೆ ಪುರಾಣ'ದಲ್ಲಿ ಸಮಕಾಲೀನ ರಾಜಕೀಯ ವಾಸ್ತವದ ಇನ್ನೊಂದು ಮುಖದ ದರ್ಶನವಿದೆ. ಕಳೆದ ಶತಮಾನದ ಎಪ್ಪತ್ತರ ದಶಕದಲ್ಲಿ ಜೆ.ಪಿ. ಚಳವಳಿ ಭಾರತೀಯರಿಗೆ ಹೊಸ ಕನಸುಗಳನ್ನು ಕೊಟ್ಟಿತಾದರೂ ಗಾಂಧೀ ಚಳುವಳಿಯಂತೆ ಅದು ಕೂಡ ತನ್ನ ಸತ್ವವನ್ನು ಕಳೆದುಕೊಂಡುದು ನಮ್ಮ ಕಾಲದ ದುರಂತಗಳಲ್ಲೊಂದು. ಈ ದುರಂತವೇ ಲೋಕನಾಯಕರ ಮೇಲುಕೋಟೆ ಪುರಾಣದ ವಸ್ತು.

'ಮಿಸೆಸ್ ಡೆತ್ ಅಮ್ಮನ ಸಾವು', 'ಇನ್ನೊಬ್ಬ ಗಾಂಧಿಯ ಹೆಂಡತಿ' 'ಚಿನ್ನಸ್ವಾಮಿ ಎಂಬ ಮಂಡಲ್ ವರದಿ' ಇಂಥ ಆಕರ್ಷಕ ವ್ಯಕ್ತಿ ಚಿತ್ರಗಳಿವೆ. ಗಂಡು-ಹೆಣ್ಣು ಸಂಬಂಧಗಳ ರಹಸ್ಯಗಳನ್ನು ಕೆದಕುವ, 'ನಡೆಯುತ್ತಿತ್ತ ಕತೆ ಬೆಳೆಯುತ್ತಿತ್ತ' 'ಹೀಗೂ ಉಂಟೆ ಪ್ರೇಮದ ಶೈಲಿ'ಗಳಂಥ ಕತೆಗಳಿವೆ. 'ಸೈಕಲ್ ಇನ್ನೊಂದು ಸಾಕು'ದಂಥ ಸಾಮಾನ್ಯರ ಜೀವನದ ವಾಸ್ತವ ಚಿತ್ರಣಗಳಿವೆ.

ಮಿಸೆಸ್ ಡೆತ್ ಅಮ್ಮನ ಸಾವು ಕತೆಯಲ್ಲಿ 'ಡೆತ್ ಅಮ್ಮ' ಎನ್ನುವಾಕೆ ಪ್ರತಿ ಮನೆಯ ಸಾವಿನ ಸಂದರ್ಭದಲ್ಲಿ ಅನಾಮಂತ್ರಿತವಾಗಿ ಬಂದು ಅದರಲ್ಲಿ ಕೊನೆಯವರೆಗೆ ಪಾಲ್ಗೊಳ್ಳುವುದರಿಂದ ಹಿಡಿದು ಹತ್ತಿರದವರಿಗೆ ಸಾಂತ್ವನ ಹೇಳುವುದರೊಂದಿಗೆ ಅವರು ಮುಂದೆ ಬದುಕಲು ಬೇಕಾದ ಸ್ಥೈರ್ಯವನ್ನು ತುಂಬುತ್ತಿದ್ದ ವ್ಯಕ್ತಿ. ಆದರೆ ಅವರ ಸಾವನ್ನು ಜನ ಸ್ವೀಕರಿಸಿದ ರೀತಿ ಪ್ರತಿಕ್ರಿಯಿಸಿದ ರೀತಿ ಮಾತ್ರ ಅತ್ಯಂತ ಯಾಂತ್ರಿಕವಾದುದು. ಜನರ ಶೀತಲ ಪ್ರತಿಕ್ರಿಯೆಯನ್ನು ದಾಖಲಿಸುವಾಗ ನಿರೂಪಕನಲ್ಲಿ ಗಾಢವಾದ ವಿಷಾದ ವ್ಯಕ್ತವಾಗುತ್ತದೆ.

'ಇನ್ನೊಬ್ಬ ಗಾಂಧಿಯ ಹೆಂಡತಿ' 'ಇಂಗ್ಲೀಷ್ ಗೌಡರು ಎಂಬ ಭಯವು' ಹಾಗೂ 'ಚಿನ್ನಸ್ವಾಮಿಯೆಂಬ ಮಂಡಲ್ ವರದಿ' ಎಂಬ ಕತೆಗಳು ಬದಲಾಗುತ್ತಿರುವ ಕಾಲದ ಹೊಸ ಸವಾಲುಗಳು ಜನಸಾಮಾನ್ಯರನ್ನು ಕಂಗೆಡಿಸಿ ಉಂಟುಮಾಡುತ್ತಿರುವ ವಿಸಂಗತಿಗಳನ್ನು ಚಿತ್ರಿಸುವ ಗಂಭೀರ ಉದ್ದೇಶದಿಂದ ಹೊರಡುತ್ತವಾದರೂ, ಅಂತಿಮವಾಗಿ ಇವು ವಿವಾದಕ್ಕೆ ಬದಲಾಗಿ ವ್ಯಂಗ್ಯವನ್ನು ಸೃಷ್ಟಿಸುವುದರಿಂದಾಗಿ ಓದುಗರಲ್ಲಿ ಅನುಮಾನಗಳನ್ನು ಉಂಟು ಮಾಡುತ್ತವೆ.

೩. ಹಳೆಯ ಕಾಲದ ಹೊಸ ಕತೆ

ಸತ್ಯನಾರಾಯಣರ ಮೂರನೆಯ ಕಥಾ ಸಂಗ್ರಹ 'ಹಳೆಯ ಕಾಲದ ಹೊಸ ಕತೆ'ಯಲ್ಲಿಯೂ ಸಮಕಾಲೀನ ಸಾಮಾಜಿಕ ವಾಸ್ತವದ ಅವರ ಅನ್ವೇಷಣೆ ಮುಂದುವರಿದಿದೆ. ಈ ಸಂಗ್ರಹದಲ್ಲಿ 'ಹೊಸ ಕಾಲದ ಹಿಂಸೆ', 'ಅಪಂಡಿತ್-ರಮಾಬಾಯಿ-ರ್ಗೆಲ್', 'ರೂಪಾಯಿ ಗುಟ್ಟು ಮತ್ತು ರಾಜಕುಮಾರಿ ಡಯಾನ', 'ನಾವೇನ ಬೇಡುವುದು ಇವರ ಬಳಿಬಂದು', 'ವರ್ಷಾಂತಿಕ', 'ಕಿಸಾಗೌತಮಿಗೊಂದು ಕಥೆ' 'ಕತೆಯಂತೂ ಒಂದೇ, ಕನಸುಗಳು ಮಾತ್ರ', 'ದಲಿತರ ವೀಡಿಯೋ ಪುರಾಣ', 'ಇಳಿವಯಸ್ಸಿನ ಡೈವೋರ್ಸ್', 'ಹೇಳಿ, ಇವರೇಕೆ ಕತೆಯಾಗಬೇಕು', 'ಮಸಣದಿ

ಹೇಳಿಕೊಂಡ ಮಗನ ಕತೆ', 'ಗ್ರಹಾಂಬೆಲ್‌ಗು ಕೇಳದ ಕನಸು', 'ಮಧುಗಿರಿ ರಾಮು ಮತ್ತು ಸಾಹಿತಿ ಮುದುಕಪ್ಪ' '೧೦೦೧ನೇ ಕಣ್ಣು' ಎನ್ನುವಂತಹ ೧೪ ಕಥೆಗಳನ್ನು ಕಾಣಬಹುದು. ಈ ಕಥಾ ಸಂಕಲನವು ೨೦೦೨ರಲ್ಲಿ ಪ್ರಕಟವಾಯಿತು. ಸತ್ಯನಾರಾಯಣರ ಕಥನ ಶೈಲಿ ಇಲ್ಲಿ ತನ್ನ ತನವನ್ನು ಬಿಟ್ಟುಕೊಡದೆ ಅತಿರೇಕಗಳನ್ನು ಕಳಚಿಕೊಂಡು ಪಕ್ವವಾಗಿದೆ. ಉಳಿದ ಎರಡು ಸಂಗ್ರಹಗಳಲ್ಲಿದ್ದಂತೆ ಇಲ್ಲಿಯೂ ಒಂದೆರಡು ಕತೆಗಳಿಗೆ ಕತೆಗಾರನ ಕಲೆಯೇ ವಸ್ತುವನ್ನೊದಗಿಸಿದೆ.

'ಮಧುಗಿರಿ ರಾಮು ಮತ್ತು ಸಾಹಿತಿ ಮುದುಕಪ್ಪ' ಕತೆಯು ಕತೆಯ ಸ್ವರೂಪದ ಹಾಗೂ ಕತೆಗಾರನ ಸಮಸ್ಯೆಗಳ ಮೇಲೆ ಹೊಸ ಬೆಳಕು ಚೆಲ್ಲುವುದರಿಂದ ಮಹತ್ವದ್ದೆನಿಸುತ್ತದೆ. ಕತೆಗಾರನು ಆದ ನಿವೇದಕನ ಒಂದು ಸಮಸ್ಯೆಯಲ್ಲಿಯೇ ಕತೆಯು ಪ್ರಾರಂಭವಾಗುತ್ತದೆ. ಕತೆಯಲ್ಲಿ ರೈಲಿನೊಳಗೆ ಅಕಸ್ಮಾತ್ತಾಗಿ ಸಿಗುವ ಸಾಹಿತಿ ಮುದುಕಪ್ಪ ಹೇಳುವುದು "ಯಾರಿಗೆ ಬೇಕಿರುತ್ತೆ ನಮ್ಮ ಒಳಜಗತ್ತು ಅಂತರಂಗದ ಬದುಕೆಲ್ಲ. ಅದನ್ನೆಲ್ಲಾ ಇನ್ನೊಬ್ಬರು ಗ್ರಹಿಸುತ್ತಾರೆ. ಅರ್ಥಮಾಡಿಕೋತಾರೆ. ಪ್ರೀತಿ ಮಾಡತಾರೆ ಅಂತ ನಿರೀಕ್ಷಿಸುವುದೇ ತಪ್ಪು. ಯಾರೇ ಆದರೂ ನಮ್ಮ ಬಗ್ಗೆ ಕೊನೆಗೆ ಗ್ರಹಿಸುವುದು ಅವರಿಗೆ ಬೇಕಾದಷ್ಟು ಸತ್ಯವನ್ನು ಮಾತ್ರ. ಉಳಿದದ್ದೆಲ್ಲ ನಮ್ಮೊಳಗೆ ಉಳಿದು, ನಮ್ಮೊಡನೆಯೇ ಕರಗಿ ಹೋಗಿ ಒಂದು ದಿನ ಹಿಡಿ ಬೂದಿಯಾಗಿ ಬಿಡುತ್ತೆ."[೭]

ಯಾರೇ ಆದರೂ ನಮ್ಮ ಬಗ್ಗೆ ಕೊನೆಗೆ ಗ್ರಹಿಸುವುದು ಅವರಿಗೆ ಬೇಕಾದಷ್ಟು ಸತ್ಯವನ್ನು ಮಾತ್ರ ಎಂಬುದು ಸತ್ಯನಾರಾಯಣ ಅವರ ಒಂದು ಮಟ್ಟದ ತಾತ್ವಿಕ ನೆಲೆಯೂ ಹೌದು. ಸತ್ಯ ಅವರಿಗೆ ಕಂಡಷ್ಟು ಮಾತ್ರವಲ್ಲ ಕಾಣಲು ಬಯಸಿದಷ್ಟು ಮಾತ್ರ ಎಂಬುದೇ ನಮ್ಮ ಸುತ್ತಲಿನ ಮಾಮೂಲಿ ಬದುಕಿನ ಕೊಳಕು ಕ್ಷುದ್ರತೆಗೆ ಕಾರಣವಾಗಿರಲೂಬಹುದು. ಇದು ಇಂದಿನ ಬದುಕಿನ ವ್ಯಂಗ್ಯ. ಆದರೆ ಸ್ಥಾಯಿ ಸಂದರ್ಭದಂತೆ ವರ್ತಮಾನದ ಬದುಕು ನಮ್ಮ ಅರಿವಿಗೆ ಬಂದರೆ ಸಾಕೆ? ಕಲೆಗೆ ಬದುಕಿನ ಚಲನಶೀಲತೆಯನ್ನು ಬದಲಾವಣೆಯ ಧನಾತ್ಮಕ ಶಕ್ತಿಗಳನ್ನು ಸೂಚಿಸುವ ಜವಾಬ್ದಾರಿ ಇಲ್ಲವೆ.

'ವರ್ಷಾಂತಿಕ' ಸತ್ಯನಾರಾಯಣರ ಯಶಸ್ವೀ ಕತೆಗಳಲ್ಲೊಂದು. ಈ ಕತೆಯ ಕೇಂದ್ರದಲ್ಲಿ ಒಬ್ಬ ವೃದ್ಧರಿದ್ದಾರೆ. ಅವರ ಸಂಸಾರ ಮಕ್ಕಳು, ಮೊಮ್ಮಕ್ಕಳಿಂದ ತುಂಬಿದ್ದರೂ ಈ ವೃದ್ಧರಿಗೆ ತಮ್ಮದೇ ಆದ ರೀತಿಯಲ್ಲಿ ಬದುಕಬೇಕು ಎನ್ನುವ ಹಂಬಲ ಈ ಹಂಬಲಕ್ಕೆ ಕಾರಣವಾಗುವುದು ತಾವು ಇವರೆಲ್ಲರ ಜೀವನದಲ್ಲಿ ಅಪ್ರಸ್ತುತರಾಗಿದ್ದೇವೆ ಎನ್ನುವ ಭಾವನೆ. ಈ ಹಂಬಲ ಅವರಲ್ಲಿ ಒಂದು ವಿಧವಾದ ವೈರಾಗ್ಯಕ್ಕೆ ಕಾರಣವಾಗುತ್ತದೆ. ಅವರಿಗೆ ಸಂವಾದ ಸಾಧ್ಯವಾಗುವುದು ಲಾಲ್‌ಬಾಗದ ಕೆರೆಯೊಂದರಲ್ಲಿ ಅವರು ದಿನಾಲು ನೋಡುವ ತಮ್ಮ ಪ್ರತಿಬಿಂಬದೊಡನೆ ಮಾತ್ರ.

'ಹೊಸಕಾಲದ ಹಿಂಸೆ'ಯಲ್ಲಿ ತಂದೆ ಮೇಲೆ ಹಲ್ಲೆ ಮಾಡಿದ ದಾರಿಹೋಕ ರದ್ದಿ ಅಂಗಡಿ ವ್ಯಾಪಾರಿಯನ್ನು ಮಟ್ಟ ಹಾಕಿಬಿಡುತ್ತೇನೆ ಎಂಬ ಉದ್ವೇಗದಿಂದ ಪ್ರಾರಂಭವಾಗಿ ಕೊನೆಗೆ

ಎಲ್ಲವೂ, ಎಲ್ಲರಿಗೂ ಸಹಜವಾಗುವ ಯಾವುದು ಎಲ್ಲೂ ಆಳವಾಗಿ ತಟ್ಟದ ನೆಲೆಗೆ ಬಂದು ತಲುಪುತ್ತದೆ. ಸತ್ಯನಾರಾಯಣರಿಗೆ ಇರುವ ಸಮಸ್ಯೆ ಎಂದರೆ ತನ್ನ ಸುತ್ತಲಿನ ಈ ಕ್ಷುದ್ರತೆ, ಕ್ಷುಲ್ಲಕ ಬದುಕನ್ನು ಮೀರಲು ಒಂದು ಸಾಧ್ಯತೆ ಇದೆ ಎಂಬ ನಂಬುಗೆ ಅಥವಾ ಅಂತಹ ಒಂದು ಮೀರುವಿಕೆಯನ್ನು ಕಂಡುಕೊಳ್ಳಲು ಸಾಧ್ಯ ಎಂಬ ಕಲ್ಪನೆಯ ಬಗೆಗೂ ನಂಬುಗೆ ಇಲ್ಲದಿರುವುದು ಕತೆಯ ಒಟ್ಟು ಆಶಯ ಮತ್ತು ಪ್ರಬಂಧ ಧ್ವನಿ ಸುತ್ತಲಿನ ಬದುಕಿನ ಸಾಮಾನ್ಯ ಜಂಜಾಟ ಹಾಗೂ ಕೀಳುತನದ ವಿರುದ್ಧವಾಗಿರುವುದರಿಂದ ಕತೆ ಕಾಣಿಸುವ ಲೋಕ ಬರಹಗಾರ ಒಪ್ಪುವ ಬದುಕು ಆಗಿರಬೇಕಿಲ್ಲ ಎಂಬುದು ವಿದಿತವಾಗುತ್ತದೆ. ಆದರೆ ಅದಕ್ಕೊಂದು ಸಂಕಲ್ಪ ಬಲದ ಆಧಾರವಿಲ್ಲ.

'ಇಳಿ ವಯಸ್ಸಿನ ಡೈವೋರ್ಸ್' ಕತೆಯ ನಂದಿನಿ ಮೇಡಂ ಹೇಳುವುದು "ನಾವು ಒಬ್ಬರಿಗೆ ಜೀವನದಲ್ಲಿ ಬೇಕಾದಷ್ಟು ಪ್ರೀತಿ ಮಾಡಬಹುದು, ಅಕ್ಕರೆ ಕೊಡಬಹುದು, ಆದರೆ ಅಷ್ಟಕ್ಕೆ ಬದುಕನ್ನು ಅವರು ನಮ್ಮ ಕಣ್ಣಿಂದಲೇ ನೋಡಬೇಕು ಅಂತ ಆಸೆ ಪಡುವುದು, ಆಸೆ ನಿರಾಸೆಯಾದಾಗ ಕೊರಗುವುದು ತುಂಬಾ ತಪ್ಪು. ಮನಸ್ಸಿಗೆ ಈ ಮಾತು ಸಮಾಧಾನ ಕೊಟ್ಟರೂ ಹಿತ ಕೊಡುತ್ತಿರಲಿಲ್ಲ."[೮] 'ಬಹುಶಃ ಸತ್ಯನಾರಾಯಣ ಅವರ ಕತೆಗಳ ಶೋಧನೆ ಒಟ್ಟಾರೆ ಬದುಕಿಗೆ ಯಾವುದು ಹಿತ' ಎಂಬುದನ್ನು ಅರಸುವುದೇ ಆಗಿದೆ.

ಈ ಸಂಕಲನದ 'ದಲಿತರ ವೀಡಿಯೋ ಪುರಾಣ' ಎಂಬ ಕಥೆ ಸಮುದಾಯದ ರಾಜಕೀಯ ಹಾಗೂ ಸಾಮಾಜಿಕ ಆಯಾಮಗಳನ್ನು ಮೈಮೇಲೆ ಎಳೆದು ಹಾಕಿಕೊಂಡು ಬರೆದ ಕತೆ. ಕತೆಯೊಳಗೆ ದಲಿತರಿಗೆ ಉಪಕಾರವಾಗಲಿ ಎಂದು ಚುನಾವಣೆ ವೀಕ್ಷಣೆಗೆ ವೀಡಿಯೋ ರೆಕಾರ್ಡ್ ಮಾಡುವ ಕಾಂಟ್ರಾಕ್ಟ್ ಪಡೆದ ದಲಿತ ಹುಡುಗರ ಕೆಲಸದ ಗುಣಮಟ್ಟ ಸರಿಯಾಗದ ತಕರಾರು ತೆಗೆದು ವೀಕ್ಷಕನ ಕ್ರಿಯೆ ಕತೆಯ ಕೇಂದ್ರದಂತೆ ತೋರಿದರೂ ದಲಿತ ನಾಯಕ ಬಾಬುರಾವ್ ಇಡೀ ಕಥಾನಕದ ಆತ್ಮ. ಆದರೆ ಕತೆಯಲ್ಲಿ ಕಾಣುವ ಬಾಬುರಾವ್‌ನ ಪ್ರಾಮಾಣಿಕ ಭಾವನಾತ್ಮಕ ಸತ್ಯ ಕತೆಯಲ್ಲಿ ಕಾಣ್ಕೆಯ ಒಂದು ನೆಲೆಯಾಗುವ ಬದಲು ಅವನು ಪ್ರಾರಂಭಿಸಿದ ಪುಟ್ಟ ವ್ಯಾಪಾರವೇ ಕತೆಯ ತಿರುಳಾಗಿ ಪರಿಣಮಿಸುತ್ತದೆ.

ಅವರು ಮಧ್ಯಮ ವರ್ಗದ ಎಲ್ಲಾ ಕೊಳಕು ಭ್ರಷ್ಟತೆಗೂ ಇಳಿಯಲಿಲ್ಲ. ಮಂದಿ ಆ ಮೂಲಕ ಮಾಮೂಲಿ ಬದುಕಿನ ಇನ್ನೊಬ್ಬ ಪ್ರತಿನಿಧಿ ಎಂಬುದರ ಮೂಲಕ ಕತೆಗಾರ ಬಾಬುರಾವ್‌ನ ಪ್ರಾಮಾಣಿಕ ಸಿಟ್ಟನ್ನು ಮರೆಯಿಸಿ ಬಿಡುತ್ತಾರೆ. ಇನ್ನೊಂದು ದೃಷ್ಟಿಯಿಂದ ಇದು ಬಾಬುರಾವ್‌ನನ್ನು ಕೇವಲ ದಲಿತ ಮಾತ್ರನಲ್ಲದೆ ನಮ್ಮ ನಿಮ್ಮ ಹಾಗಿರುವ ಒಬ್ಬ ಮನುಷ್ಯನಾಗಿ ಪರಿಗಣಿಸುತ್ತದೆ. ಓದುಗನ ಕಣ್ಣಲ್ಲಿ ಆತನನ್ನು ದಲಿತ ಪಟ್ಟದಿಂದ ಬಿಡುಗಡೆಗೊಳಿಸುತ್ತದೆ. ಇದು ಕಲೆಯ ಕೌಶಲ್ಯ ಹಾಗೂ ತಾತ್ವಿಕ ನಿಲುವುಗಳು ಮುಖಾಮುಖಿಯಾಗಬೇಕಾದ ಸಂದರ್ಭ. ಆದರೆ ಕತೆಯಲ್ಲಿ ಸತ್ಯನಾರಾಯಣ ಇಂತಹ ಮುಖಾಮುಖಿಗಳನ್ನು ಎದುರಿಸುವುದಿಲ್ಲ.

'ಮಸಣದಿ ಪೇಳಿಕೊಂಡ ಮಗನ ಕತೆ'ಯಲ್ಲಿ ಬರುವ ಮುದುಕಪ್ಪ ಸ್ಮಶಾನದಲ್ಲಿ ಆಕಸ್ಮಿಕವಾಗಿ ಕಂಡು ಅಲ್ಲೆ ಒಂದು ಬದುಕಿನ ಕತೆ ಬಿಚ್ಚಿಟಾತ. ಆ ಪಾತ್ರ ವಾಸ್ತವ ತರ್ಕದಿಂದ ಬಿಡಿಸಿಕೊಂಡು ಮಾಂತ್ರಿಕ ವಾಸ್ತವದಂತೆ ಬಿಚ್ಚಿಕೊಳ್ಳುತ್ತದೆ. ಸಾವಿನಲ್ಲಿ ಕಾಣುವ ನೆರಳು ಒಂದು ಇನ್ನೊಂದರ ಮುಖಾಮುಖಿಯಲ್ಲಿ ಅನುಭಾವದ ಶಕ್ತಿಯನ್ನು ಸೂಚಿಸುತ್ತದೆ. ಕೆಲವೊಮ್ಮೆ ಅದು ವೈರಾಗ್ಯದ ನೀರಗುಳ್ಳೆಯಂತೆಯೂ ಭಾಸವಾಗುತ್ತದೆ. ಯಾವುದೋ ಒಂದು ನಿಜವಾಗಬೇಕಾದ ನಿತ್ಯದ ಎದುರು ಪರಸ್ಪರ ಸುಳ್ಳಾಗುವುದೇ ಇಂದಿನ ಮಧ್ಯಮ ವರ್ಗದ ಸಹಜ ಸ್ಥಿತಿ ಎಂಬುದನ್ನು ಸೂಚಿಸುತ್ತಾ ಆ ಎಲ್ಲಾ ಅನುಭವವನ್ನು ರೂಪಕವನ್ನಾಗಿಸಲು ಮಾಡುವ ಪ್ರಯತ್ನವೇ ಸತ್ಯನಾರಾಯಣ ಅವರ ಕತೆಗಳು.

'ಕತೆಯಂತೂ ಒಂದೇ, ಕನಸುಗಳು ಮಾತ್ರ' ಎಂಬ ಕತೆಯಲ್ಲಿ "ಆನಂದನ ಸುಖ ಸಂಸಾರದ ಯಾತ್ರೆಯ ಪಟ್ಟಿ ಬಹು ದೀರ್ಘವಾಗಿತ್ತು. ತನ್ನ ಸಂಬಳ ಸಂಪಾದನೆಯನ್ನೆಲ್ಲ ವಿವರಿಸಿ ನಾಲ್ಕು ವರ್ಷದಲ್ಲಿ ಸೈಟು, ಆದಾದ ಮೂರು ವರ್ಷದಲ್ಲಿ ಮನೆ ಮಾಡಲೇಬೇಕು ಎಂಬ ಲೆಕ್ಕಾಚಾರ. ಆಫೀಸಿನಿಂದ ನೇರವಾಗಿ ಮನೆಗೆ ಬಂದು ಯಾವಾಗಲೂ ಜೊತೆಯಲ್ಲಿ ಇರುವುದಕ್ಕೆ ಇಲ್ಲ ಒಟ್ಟಿಗೆ ಸಂಗೀತ–ಸಿನಿಮಾಕ್ಕೆ ಹೋಗಲು ಆಸೆ ಪಡುತ್ತಿದ್ದ. ಸದಾ ಪ್ರೀತಿ–ಪ್ರೇಮದ ಮಾತುಗಳು, ರಾತ್ರಿ ಮಲಗಿದಾಗ ಗೊತ್ತಾಗೋದು ಸುಖ ಸಂತೋಷದ ಬಗ್ಗೆ ಎಷ್ಟೇ ಆಸೆ ಪಟ್ಟರೂ, ಯೌವ್ವನ, ಉತ್ಸಾಹ, ತೀವ್ರತೆ ಎಲ್ಲವೂ ಅವನ ಬದುಕಿನಲ್ಲಿ ಈಗಾಗಲೇ ಮುಗಿದುಹೋದ ಅಧ್ಯಾಯವಾಗಿತ್ತು."[೯]

ಈ ಕಥೆಯ ನಾಯಕಿ ವಸುಧಾಳ ಸಂದರ್ಭದಲ್ಲಿ ರಾತ್ರಿ ಮಲಗಿದಾಗ ಗೊತ್ತಾಗುವ ಈ ಮುಗಿದು ಹೋದ ಅಧ್ಯಾಯ ಕಳೆದು ಹೋದ ಅಂತರಂಗ ಪ್ರಜ್ಞೆಯ ಸಂಕೇತದಂತೆ ಗೋಚರಿಸುತ್ತದೆ. ಬತ್ತಲಿನ ನೈಜತೆಯಲ್ಲೂ ಒಬ್ಬರಿಗೊಬ್ಬರು ಸತ್ಯವಾಗಲಾರದ ಸಂಬಂಧಗಳಲ್ಲಿ ಸತ್ಯವನ್ನು ನೆನಪಿಸುವವರು ಯಾರು? ಸತ್ಯವನ್ನು ನೆನಪಿಸುವ ಕ್ರಿಯೆಗೆ ಇನ್ನೊಂದು ಮುಖವೂ ಇದೆ. ಅದು ಲೌಕಿಕ ನೆಲೆಯಲ್ಲೆ ನೆನಪಿಗೆ ಬರಬೇಕಾಗಿ ಇಲ್ಲ.

'ನಾವೇನು ಬೇಡುವುದು ಇವರ ಬಳಿ ಬಂದು' ಕತೆಯಲ್ಲಿ ಕತೆಯ ನಿವೇದಕನಿಗೆ ಮಲಯಾಳೀ ಕವಿ ಹಾಗೂ ಕತೆಗಾರ್ತಿ ಕಮಲಾದಾಸಳ "To be loved by as many and to love many more is also a difinite dieological position ಅನುವುದೇ ಈವತ್ತಿನ ಜನಕ್ಕೆ ಗೊತ್ತಿಲ್ಲ. ಇಂತಹ ಸಮಾಜಕ್ಕೆ ಭವಿಷ್ಯ ಏನಿರುತ್ತೆ"[೧೦] ಎನ್ನುವ ಪ್ರಚೋದಕ ಹೇಳಿಕೆ ಆಕರ್ಷಕವೆನಿಸುತ್ತದೆ. ಆದರೆ ಅವನ ಹೆಂಡತಿಗೆ ಇದರಲ್ಲಿ ಆಷಾಡಭೂತಿತನ ಕಾಣುತ್ತದೆ.

ಶಿವಕಾಮಿಯನ್ನು ನೋಡಿ ಬಂದ ನಂತರ ಅವಳ ಐಡಿಯಾಲಜಿ ಕುಸಿದು ಬೀಳುತ್ತದೆ. "Perhaps I was Wrong... ನನ್ನಲ್ಲೇ ಇರೋ ಮುಗ್ದತೇನ, ಪಾವಿತ್ರ್ಯವನ್ನು ಕೀರ್ತಿಗಾಗಿ, ಲೌಕಿಕ ಯಶಸ್ಸಿಗಾಗಿ ನಾನೇ ನಾನಾಗಿ ಕಳಕೊಂಡ ಮುಗ್ಧತೆಯನ್ನು ಪಾವಿತ್ರ್ಯವನ್ನು ಈ

ಹುಡುಗಿಯ ಜೀವನದಲ್ಲಿ ಕಾಣೋಕೆ ಬಂದದ್ದು ತಪ್ಪು ಅಂತಾ ಕಾಣುತ್ತೆ. ನಾನು ಮುಗ್ಧತೆ, ಕಳಕೊಳ್ಳೋದು ಅಂದ್ರೆ ನನ್ನ ಕಾಲದ ಮುಗ್ಧತೆ, ಪಾವಿತ್ರ್ಯವನ್ನು ಕೂಡ ನಾಶ ಮಾಡಿದ ಹಾಗೆ. ಹೀಗೆ ಎಲ್ಲವನ್ನು ನಾವೇ ನಾಶಮಾಡಿದ ಕಾಲದಲ್ಲಿ ಶಿವಕಾಮಿ ಜಯಬಾಲನ್ ಜೀವನ ಇನ್ನೇನಾಗಲು ಸಾಧ್ಯ ಹೇಳಿ"[೧೧] ಇದೇ ಈ ಸಂಗ್ರಹದ ಶೀರ್ಷಿಕೆ ಸೂಚಿಸುವ ಹಳೆಯ ಕಾಲದ ಹೊಸ ಕತೆ.

'ಹೇಳಿ ಇವರೇಕೆ ಕತೆಯಾಗಬೇಕು?' ಎಂಬ ಕತೆಯಲ್ಲಿ ತಲೆಬರಹವೆ ಒಂದು ಪ್ರಶ್ನೆ. ಹೀಗೆ ಪ್ರಶ್ನೆಯೇ ಕತೆಗೆ ಹೆಸರಾದಾಗ ಹುಡುಕಾಟವೇ ಕತೆಯ ಉಸಿರಾಗುತ್ತದೆ ಎಂಬುದು ಸೂಚನೆ. ಕತೆ ಬೆಂಗಳೂರಿನಿಂದ ಮದ್ರಾಸಿಗೆ ವರ್ಗವಾಗಿ ಬಂದ ಕುಟುಂಬ ಸ್ನೇಹಿತರಾದ ರಾಮಿ ಪೂರ್ಣಿಮಾ ದಂಪತಿಗಳಿಂದ ಪ್ರಾರಂಭಾಗಿ, ಅವರ ಮೇಲಿನ ಪ್ಲ್ಯಾಟಿನ ಪಳನಿಯಪ್ಪನ ಸುತ್ತ ಹಬ್ಬಿಕೊಳ್ಳುತ್ತದೆ.

ನಿತ್ಯದ ಬದುಕಿನ ಕೊಸರಂಕೊಳ್ಳಗಳಲ್ಲಿ ಮುಳುಗಿರುವ ಜನರಿಗೆ ಪಳನಿಯಪ್ಪನ ಇನ್ನೊಂದು ಮುಖ ಕಂಡಿರುವುದೇ ಇಲ್ಲ. ಅವನು ಮತ್ತೊಬ್ಬರ ಪ್ರೈವಸಿಗೆ ಅನಗತ್ಯವಾಗಿ ಬಾಯಿ ಹಾಕುವ ಅಧಿಕ ಪ್ರಸಂಗಿಯಾದ ಪರೋಪಕಾರಿ ಪಾಪಣ್ಣ. ಆದರೆ ಇದ್ದಕ್ಕಿದ್ದಂತೆ ಇದೇ ಪರೋಪಕಾರಿ ಪಳನಿಯಪ್ಪ ರಾಮಿ ಪೂರ್ಣಿಮಾ ಅವರೊಡನೆ ಮಾತಿಲ್ಲದೆ ಇರುವಂತಾದವ. ನಿರೂಪಕನಿಗೆ ಸಮುದ್ರದ ತಡಿಯಲ್ಲಿ ಸೂರ್ಯಸ್ತ ನೋಡುತ್ತಿದ್ದಾಗ ಹೇಳುತ್ತಾನೆ. ಜೀವನದಲ್ಲಿ ಕೊನೆಗೂ ಮುಖ್ಯವಾದದ್ದು ಒಬ್ಬರಿಗೊಬ್ಬರು ಸತ್ಯವನ್ನು ನೆನಪಿಸುವುದಷ್ಟೇ ನಮ್ಮ ಆತ್ಮೀಯರಿಗೆ ಸತ್ಯವನ್ನು ನೆನಪಿಸುವ ಆಸಕ್ತಿ ಹೋದ ಕ್ಷಣವೇ ನಮಗೆ ನಾವೇ ಸತ್ಯ ಹೇಳಿಕೊಳ್ಳುವುದರಲ್ಲೂ ಶ್ರದ್ಧೆ ಹೊರಟು ಹೋಗಿರುತ್ತದೆ.

ಈ ಸಂಕಲನದ ಕತೆಗಳಲ್ಲಿ ಸ್ಥಾಯಿಯಾಗಿ ಪುನರಾವರ್ತನೆಗೊಳ್ಳುವ ಕೆಳ ಮಧ್ಯಮ ವರ್ಗದ ಕುಟುಂಬಗಳಲ್ಲಿ ಹೆಚ್ಚಾಗಿ ನಾಲ್ಕು ಜನ ಹೆಣ್ಣುಮಕ್ಕಳು ಮೂರು ಜನ ಗಂಡುಮಕ್ಕಳು. ಅಲ್ಲಿನ ಹೆಚ್ಚಿನವರ ಮೂಲ ಮಂಡ್ಯದ ಹತ್ತಿರದ ಯಾವುದಾದರೊಂದು ಕಾಲ್ಪನಿಕ ಹಳ್ಳಿ. ಆ ಸದಸ್ಯರು ಬೆಂಗಳೂರು, ಮದ್ರಾಸು ಎಲ್ಲಿಗೆ ಹೋದರೂ ಪುನಾರರ್ವತನೆಗೊಳ್ಳುವುದು ಬಾಲ್ಯದ ನೆನಪು. ಅದು ಮುಗ್ಧತೆಗೆ ಮರಳುವ ಮಾರ್ಗವಲ್ಲ. ಹಿಂದಿನ ಗೋಳು, ಬಡತನ ಹಾಗೂ ಸುತ್ತಲಿನ ಪಿಶಿತನವನ್ನು ನೆನಪಿಸುವ ನೋವು.

೪. ನಕ್ಸಲ್ ವರಸೆ

ಕಥೆಗಾರ, ಕಾದಂಬರಿಕಾರ, ಪ್ರಬಂಧಕಾರ, ವಿಮರ್ಶಕ ಹಾಗೂ ಅಂಕಣಕಾರ ಕೆ. ಸತ್ಯನಾರಾಯಣ ಅವರ ನಾಲ್ಕನೆಯ ಕಥಾ ಸಂಕಲನ ನಕ್ಸಲ್ ವರಸೆ. ಈ ಸಂಕಲನವು ೨೦೧೦ರಲ್ಲಿ ಪ್ರಕಟವಾಯಿತು. ಸುಮಾರು ಹತ್ತರಿಂದ ಇಪ್ಪತ್ತೇಳು ಪುಟಗಳ ಹರವು ಹೊಂದಿರುವ, ಸ್ವಲ್ಪ ದೀರ್ಘವೇ ಎನ್ನಬಹುದಾದ ಒಂಭತ್ತು ಕಥೆಗಳು ಇಲ್ಲಿ ಸಂಕಲಿತವಾಗಿವೆ. ಅವುಗಳು

'ನಕ್ಸಲ್ ವರಸೆ', 'ಸಬ್-ಸಬಾಲ್ಟ್ರನ್', 'ಮೊದಲ ಅ-ದಲಿತ ಕಥೆ', 'ದೇವರು ಮತ್ತು ಮಾಧವ ಮೆನನ್', '(ನನ್ನ ಕತೆಗೆ) ಇನ್ನೊಬ್ಬ ವೇಶ್ಯೆಯ ಪ್ರಶಸ್ತಿ', 'ಇದೆಲ್ಲ ಒಂದೇ ಕತೆಯೆ?', 'ಕಮುನಿಸ್ಟ್ ರಾಮಭಟ್ಟರ ಜೋಯಿಸ ಪ್ರೀತಿ', 'ಭಟ್ಟರು ಕಳಿಸಿದ ಕಥೆ', 'ಬೇಡ! ಬೇಡ! ಪೋರ್ಡ್ ಕಂಪನಿ ಕೆಲಸ' ಎನ್ನುವ ಕಥೆಗಳಿವೆ.

ಇಲ್ಲಿನ ಮೊದಲ ಕಥೆ 'ನಕ್ಸಲ್ ವರಸೆ' ಕತೆಯಲ್ಲಿ ಪತ್ರಿಕೆಯೊಂದರ ವಾಚಕರ ವಾಣಿಯಲ್ಲಿ ನಕ್ಸಲ್ ವಾದಿಯೊಬ್ಬನ ಜೀವನವನ್ನು ಹಿನ್ನೆಲೆಯಾಗಿಟ್ಟುಕೊಂಡು ಬರೆದಿದ್ದ ಕಾದಂಬರಿಯ ಆಶಯವನ್ನು ಪ್ರಶ್ನಿಸಿ ಬರೆದ ಪತ್ರ ಈ ಕಥೆ ಬಿಚ್ಚಿಕೊಳ್ಳಲು ಕಾರಣವಾಗುತ್ತದೆ. ಆಂಧ್ರದ ಒಂದು ವೈದ್ಯಕೀಯ ಕಾಲೇಜಿನಲ್ಲಿ ಓದುತ್ತಿದ್ದ ಓರ್ವ ಯುವಕ-ಯುವತಿ ಕಮುನಿಸ್ಟ್ ಮನಸ್ಸಿನ ಉಪನ್ಯಾಸಕರಿಂದ ಪ್ರಭಾವಿತರಾಗಿ, ನಕ್ಸಲೈಟ್ ಚಟುವಟಿಕೆಗಳಲ್ಲಿ ತೊಡಗಿ, ಜಮೀನುದಾರರೊಬ್ಬರ ಕೊಲೆಯ ಪ್ರಕರಣದಲ್ಲಿ ಪರೋಕ್ಷವಾಗಿ ಪಾಲ್ಗೊಳ್ಳುತ್ತಾರೆ. ನಂತರ ಜೈಲು ಸೇರಿ ಅಲ್ಲಿಯೇ ಮದುವೆಯಾಗುತ್ತಾರೆ. ಆ ಮೇಲೆ ಖುಲಾಸೆಗೊಂಡು, ವೈದ್ಯಕೀಯ ವೃತ್ತಿ ಆರಂಭಿಸಿ ಬಡವರ ಸೇವೆಯಲ್ಲಿ ತೊಡಗುತ್ತಾರೆ. ಆದರೆ ತಾವು ಮಹಾನ್ ನಕ್ಸಲ್ ವಾದಿಗಳು, ಜೈಲಿಗೆ ಹೋಗಿ ಬಂದವರು, ಹೀಗಾಗಿ ಅದರ ಗೌರವ, ಹಿರಿಮೆ-ಗರಿಮೆ ತಮಗೆ ಸದಾ ಸಲ್ಲಬೇಕು ಎಂಬ ಭ್ರಮೆಯಲ್ಲಿ ಬದುಕುತ್ತಿರುತ್ತಾರೆ.

'ಸಬ್ ಸಬಾಲ್ಟ್ರನ್' ಕಥೆಯಲ್ಲಿ ದೇವರಾಜ್ ಅರಸುರವರ ರಾಜಕಾರಣದ ಜೀವನ ಚಿತ್ರಣ ಇಲ್ಲಿದೆ. ಅರಸು ಸ್ವಾತಂತ್ರ್ಯ ಹೋರಾಟಗಾರ ಹರಿಜನ ಚೆನ್ನಯ್ಯನ ಪರಿಚಯ ಮಾಡಿಕೊಂಡು ಅವರ ತಂಗಿಯ ಮದುವೆಯಲ್ಲಿ ಹಾಜರಾಗಿ ಅಚ್ಚರಿ ಮೂಡಿಸುತ್ತಾರೆ. ನಂತರ ಚೆನ್ನಯ್ಯನಿಗೆ ಪುರಸಭಾಧ್ಯಕ್ಷ ಸ್ಥಾನ ಕೊಟ್ಟು ಗ್ರಾಮ ಉದ್ಧಾರ ಮಾಡುವ ಸೂಚನೆ ನೀಡುತ್ತಾರೆ. ಚೆನ್ನಯ್ಯ ಕೂಡ ಆ ದಿಶೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿ, ಒಳ್ಳೆಯ ಹೆಸರು ಗಳಿಸಿ, ಸವ್ವಾ ವರ್ಷದ ನಂತರ ಅಧ್ಯಕ್ಷಗಿರಿ ಬಿಟ್ಟುಕೊಡುತ್ತಾನೆ. ನಂತರ ಅರಸು ಭೇಟಿಯಾದರೂ ಮಾತನಾಡುವುದಿಲ್ಲ. ಆದರೂ ಚೆನ್ನಯ್ಯನಿಗೆ ಅರಸು ಬಗ್ಗೆ ಗೌರವ ಅಚಲವಾಗಿ ಉಳಿಯುತ್ತದೆ.

ಜಾತಿಯಿಂದ ದಲಿತರಾದರೂ ಸ್ಥಾನಮಾನದಿಂದ ಉನ್ನತ ಮಟ್ಟದಲ್ಲಿರುವ ದಂಪತಿ ಮಾಧವಿ-ಕೇಶವ ಪ್ರಸಾದರ ಮನೋತೊಳಲಾಟದ ಚಿತ್ರಣ ಕಾಣುವುದು 'ಮೊದಲ ಅ-ದಲಿತ ಕಥೆ'ಯಲ್ಲಿ. ಮಾಧವಿಯ ಮೇಲಾಧಿಕಾರಿಯಾಗಿರುವ ಕಥಾ ನಿರೂಪಕ, ತನ್ನ ಹೆಂಡತಿಯ ಮೂಲಕ ಮಾಧವಿಗೆ ಅಂಗವಿಕಲ ಸ್ಪಂದನರಹಿತ ಮಗನೊಬ್ಬನಿದ್ದಾನೆ ಎಂದು ಅರಿಯುತ್ತಾನೆ. ಇಂಥ ದೊಡ್ಡ ಸಮಸ್ಯೆ ಇದ್ದರೂ ಈ ವರೆಗೆ ಅದನ್ನು ತೋರ್ಪಡಿಸದೆ ಠಾಕು-ಠೀಕಾಗಿ ಇರುವ ಮಾಧವಿಯ ವರ್ತನೆ ಕುರಿತು ನಿರೂಪಕ ಅಚ್ಚರಿ ಪಡುತ್ತಾನೆಯಾದರೂ ಕ್ರಮೇಣ ಅವಳು ನಿರೂಪಕನಿಗೆ ತನ್ನ ಮನೆಗೆ ಕರೆದುಕೊಂಡು ಹೋಗಿ ಪರಿಸ್ಥಿತಿ ಸಂಪೂರ್ಣ ತೋರಿಸುತ್ತಾಳೆ. ಮಾಧವಿ ವ್ಯಕ್ತಿತ್ವ ಹೇಳುತ್ತ "ಹೆಂಗಸರ ಸ್ವಭಾವದಂತೆ ಮೃದು ಸ್ವಭಾವದವಳಲ್ಲ. ಧ್ವನಿ ಕೂಡ

ಗೊಗ್ಗರೇ ಜಿರಸೇ"[೧೨] ಎನ್ನುತ್ತಾರೆ. ಈ ನಿರೀಕ್ಷೆ ಏಕೆ ಎಂದು ಆಶ್ಚರ್ಯವೆನಿಸುತ್ತದೆ. ಲೈಂಗಿಕತೆಯ ಕುರಿತು ಕುತೂಹಲರಾಗಿ ಆರೋಗ್ಯ ಪೂರ್ಣ ಚರ್ಚೆ ಇಲ್ಲಿದೆ.

'ದೇವರು ಮತ್ತು ಮಾಧವ ಮೆನನ್' ಎಂಬ ಕಥೆಯು ದೇವರು ಎಂಬ ಕಲ್ಪನೆಯ ಕುರಿತು ವಿಚಾರ ಮಾಡಲು ಹಚ್ಚುವ ಕಥೆ. ವಿದ್ಯಾರ್ಥಿ ಜೀವನದಲ್ಲಿ ವೈಚಾರಿಕ ಪಂಡಿತರ ಪ್ರಭಾವದಿಂದಾಗಿ ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸಿ, ಪ್ರಖರ ನಾಸ್ತಿಕವಾದವನ್ನು ಮಂಡಿಸಿ, ಬಹುಮಾನಗಳನ್ನು ಪಡೆಯುತ್ತಿದ್ದ ಮಾಧವ ಮೆನನ್, ಅದೇ ವೈಚಾರಿಕತೆಯನ್ನು ಉದ್ದಕ್ಕೂ ಕಾಪಾಡಿಕೊಂಡು, ಯಶಸ್ವಿ ವೃತ್ತಿ ಹಾಗೂ ಸಂಸಾರಿಕ ಜೀವನ ಸಾಗಿಸಿಕೊಂಡು ಬಂದವರು. ಆದರೆ ಮುಪ್ಪಿನಲ್ಲಿ ಒಮ್ಮೆಲೆ ಅಪ್ಪಳಿಸಿ ಹೋದ ಗಂಡಾಂತರಗಳು ಯಾವುದೇ ಅಪಾಯ ಮಾಡದಿದ್ದರೂ, ಅಪಾಯವಾಗದೇ ಇದ್ದದ್ದು ದೇವರ ದಯೆ. ಆದ್ದರಿಂದ ಈಗಲಾದರೂ ಮಾಧವ ಮೆನನ್ ದೇವರು ನಂಬಲೇಬೇಕು. ಎಂದು ಮನೆಯವರು ನೆರೆಹೊರೆಯವರು ಹಾಗೂ ಕಚೇರಿ ಸಿಬ್ಬಂದಿಯವರು ಆಡಿಸಿಕೊಳ್ಳುವಂತಾಗುತ್ತದೆ.

"ಮಂಬೈಯಲ್ಲಿ ಈಚೆಗೆ ವೇಶ್ಯೆಯರ ಹಾವಳಿ ಹೆಚ್ಚಾಗಿದೆ. ಹೀಗಾಗಲು ರಾತ್ರಿ ಹೋಟೆಲ್ ಮತ್ತು ಬಾರ್‌ಗಳಲ್ಲಿ ಸೇವೆಗೈಯುವ, ನೃತ್ಯ ಮಾಡುವ ಹರೆಯದ ಹುಡುಗಿಯರೇ ಕಾರಣ ಎಂದು ಹೊಸ ತರುಣ ಗೃಹಮಂತ್ರಿಗೆ ಅನಿಸಿ ಇನ್ನು ಮುಂದೆ ರಾತ್ರಿ ಹತ್ತು ಗಂಟೆಯ ನಂತರ ಇತರ ಸೇವೆ ಚಟುವಟಿಕೆಗಳನ್ನು ನಿಷೇದಿಸಬೇಕು"[೧೩] 'ಎಂದು (ನನ್ನ ಕತೆಗೆ) ಇನ್ನೊಬ್ಬ ವೇಶ್ಯೆಯ ಪ್ರಶಸ್ತಿ' ಎಂಬ ಕಥೆ ಆರಂಭ ಮಾಡುತ್ತ ಬೇರೆ ಬೇರೆ ಕಾರಣಗಳಿಂದ ಹೆಣ್ಣು ಮಕ್ಕಳು ವೇಶ್ಯಾವೃತ್ತಿಗೆ ದೂಡಲ್ಪಡುತ್ತಾರೆ ಎಂದು ಹಳೆಯ ವಸ್ತುವನ್ನು ತಮ್ಮ ಅನುಭವಕ್ಕೆ ಬಂದ ಹಾಗೆ ಚಿತ್ರಿಸಿದ್ದಾರೆ. ಹುಲಿಯೂರು ದುರ್ಗದ 'ಲಕ್ಷ್ಮಿ' ಹಾಗೂ ಗದಗಿನ 'ಸುಜಾತ' ಕಾರಣಾಂತರಗಳಿಂದ ವೇಶ್ಯೆ ವೃತ್ತಿಯಲ್ಲಿ ತೊಡಗಿ ಲೇಖಕರ ಕಾದಂಬರಿಗಳನ್ನು ಓದಿ ಪತ್ರ ಬರೆಯುತ್ತಾರೆ. ಲೇಖಕರು ಈ ಇಬ್ಬರು ವೇಶ್ಯೆಯರ ಪ್ರಶಸ್ತಿ ಪಡೆದುಕೊಂಡೆ ಎಂದು ಹೇಳಿಕೊಳ್ಳುತ್ತ ಅವರ ಬಾಳನ್ನು ಇಣುಕಿ, ಅಲ್ಲಿನ ಶೋಷಣೆಗಳನ್ನು ಪರಿಚಯಿಸುತ್ತಾರೆ.

'ಕಮ್ಯುನಿಸ್ಟ್ ರಾಮಭಟ್ಟರ ಜೋಯಿಸ ಪ್ರೀತಿ' ರಾಮಭಟ್ಟರ ಕಥೆಯು ಹೌದು. ಅವರ ದೊಡ್ಡಪ್ಪ ಶಿವರಾಮಭಟ್ಟರ ಕಥೆಯೂ ಹೌದು. ಪೂಜೆ, ಪುರಸ್ಕಾರ, ಸಂಧ್ಯಾವಂದನೆ ಮುಂತಾದ ಸಾಧನೆಗಳ ಬಲದೊಂದಿಗೆ ಊರ ಜನರ ಲಗ್ನ, ಮುಹೂರ್ತ, ಆಕಳು–ಎಮ್ಮೆಗಳ ಕುರಿತು ಜ್ಯೋತಿಷ್ಯ ಹೇಳುವ ಶಿವರಾಮಭಟ್ಟರು ಸ್ವತಃ ತಮ್ಮ ಮಗ ವಿಮಾನ ಅಪಘಾತದಲ್ಲಿ ಸತ್ತಾಗ ದಿಗ್ಭ್ರಮೆಗೊಳ್ಳುವರು. ಮನೋವಿಕಾರಕ್ಕೊಳಗಾಗಿ ಮಾತನ್ನೇ ನಿಲ್ಲಿಸುವರು. ಇಂಥ ಜ್ಯೋತಿಷಿಗಳ ಮನೆತನದಿಂದ ಬಂದ ರಾಮಭಟ್ಟರು ಅದ್ಹೇಗೋ ಕಮ್ಯುನಿಸ್ಟರಾಗುವರು! ತಮ್ಮ ಪ್ರಗತಿಪರ ವಿಚಾರ, ಚಳವಳಿಗಳಿಂದ ದೇಶ ವಿದೇಶಗಳಲ್ಲಿ ಮನ್ನಣೆಗಳಿವೆ.

'ಭಟ್ಟರು ಕಳಿಸಿದ ಕಥೆ' ಹರೆಯದ ಮಗನನ್ನು ಕಾಣೆಯಾಗಿ ಕಳೆದುಕೊಂಡ ತಂದೆಯ ತಳಮಳದ ಕಥೆ. ಆ ವ್ಯಕ್ತಿಯೇ ತನ್ನ ಕಥೆ ಹೇಳುವ ಶೈಲಿಯಲ್ಲಿ ನಿಯಮಿತವಾಗಿದೆ.

ರಕ್ತಸಂಬಂಧಿಕರಿದ್ದರೂ ಅವರು ಸಮೀಪ ದೂರ ವಾಸಿಸುವುದರಿಂದ ಸಂಬಂಧಗಳು ಹೇಗೆ ಭಿನ್ನವಾಗುತ್ತವೆ. ಮಕ್ಕಳ ಬಗ್ಗೆ ಹೆತ್ತವರು ಏನು ನಿರೀಕ್ಷಿಸುತ್ತಾರೆ. ಅದು ಎಷ್ಟರ ಮಟ್ಟಿಗೆ ಸಾಧು ಇತ್ಯಾದಿ ಉಚಿತ ಚರ್ಚೆಗಳಿವೆ. ಕಥೆಯ ಉದ್ದಕ್ಕೂ ತಂದೆಯ ಒದ್ದಾಟ ಕಾಣುತ್ತವೆಯೋ ಹೊರತು ಆ ಮಹಾತಾಯಿಯದಲ್ಲ.

೫. ಹೆಗ್ಗುರುತು

ಹೆಗ್ಗುರುತು ಕಥಾಸಂಕಲನವು ೨೦೧೨ರಲ್ಲಿ ಪ್ರಕಟವಾಯಿತು. ಇದರಲ್ಲಿ ಒಟ್ಟು ಹತ್ತು ಕಥೆಗಳಿವೆ. ಅವುಗಳೆಂದರೆ 'ಪೂರ್ವನಾಮದ ವಲಸೆ', 'ಚಿಕ್ಕತಾಯಿ', 'ಡಾಕ್ಟರನ ಹುಚ್ಚು ಮಗ', 'ಹೆಗ್ಗುರುತು', 'ಭವ–ರೋಗ–ವೈದ್ಯ', 'ಮಾಸ್ತಿಗನ್ನಡಿ' 'ಭ್ರಷ್ಟಾಚಾರದ (Non fiction)', 'ಓಬಳಯ್ಯನ ಸುತ್ತಮುತ್ತ', 'ನಿಜಕವಲು', 'ಕೋನ' ಕತೆಗಳನ್ನು ಒಳಗೊಂಡಿದೆ.

'ಪೂರ್ವನಾಮದ ವಲಸೆ' ಸಂಕಲನದ ಮೊದಲ ಕತೆ ಇದರಲ್ಲಿ ಮಂಡ್ಯ ಸಮೀಪದ 'ಕೊಪ್ಪ' ಎಂಬ ಹಳ್ಳಿಯಲ್ಲಿ ಹುಟ್ಟಿ ಬೆಳೆದ ದಲಿತನೊಬ್ಬ ಮುಂಬಯಿಯಲ್ಲಿ ದೊಡ್ಡ ಅಧಿಕಾರಿಯಾಗಿದ್ದರೂ, ತನ್ನ ಹುಟ್ಟೂರಿನವನೇ ಆದ ದಲಿತೇತರ ಜಾತಿಯ ಅಧಿಕಾರಿಯನ್ನು ಬೇಟಿಯಾದಾಗ ಸೌಹಾರ್ದ ತೋರುವುದಿಲ್ಲ. ಅದಕ್ಕೆ ಆತ ಬಾಲ್ಯದಲ್ಲಿ ಅನುಭವಿಸಿದ ಜಾತ್ಯಾಧಾರಿತ ತಿರಸ್ಕಾರದ ನೆನಪೇ ಕಾರಣವಾಗಿರುತ್ತದೆ. ಆದರೆ ದಲಿತೇತರ ಜಾತಿಯ ಅಧಿಕಾರ (ನಿರೂಪಕ) ಸಲೀಸಾಗಿ ತನ್ನ ಹಿನ್ನೆಲೆಯನ್ನು ಹೇಳುತ್ತಾನೆ. ಇಲ್ಲಿ ಇಂದು ಸಮಾಜದಲ್ಲಿ ಉನ್ನತ ಸ್ಥಾನವನ್ನು ಗಳಿಸಿದವರನ್ನು 'ಭೂತಕಾಲದ ಭ್ರೂಣಗೂಡಗಳು' ಕಾಡುತ್ತ ಸಹಜ ಮಾನವೀಯ ಸಂಬಂಧಗಳಿಗೆ ತೊಡಕಾಗುವ ವಾಸ್ತವ ಸಮರ್ಥವಾಗಿ ಚಿತ್ರಿತವಾಗಿದೆ.

'ಚಿಕ್ಕತಾಯಿ' ಕತೆಯಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ಪ್ರಮುಖ ವಸ್ತುವಾಗಿದೆ. ಆದರೆ ಮಹಿಳೆಯ ಅನುಕಂಪ, ಮಾನವೀಯತೆಗಳ ಪ್ರತಿಕಾರದ ಛಲವನ್ನು ಮೀರಿ ವಿಜೃಂಭಿಸುತ್ತವೆ. ಸಮೃದ್ಧವೂ ಸೂಕ್ಷ್ಮವೂ ಆದ ವಿವರಗಳಿಂದ ಸಹಜವಾಗಿ ಬೆಳೆಯುವ ಈ ಕತೆ ಅನಿರೀಕ್ಷಿತ ರೀತಿಯಲ್ಲಿ ಕೊನೆಗೊಳ್ಳುವುದು ಸ್ವಾರಸ್ಯಕರವಾಗಿದೆ.

ಜೋನ್ ಪಿ. ಸೈಲೋ ಉರ್ಫ್ ಜೆಪಿ ಎಂಬ ಮಹಿಳೆ ತನಗೆ ಆಫೀಸಿನಲ್ಲಿ ಕಿರುಕುಳ ನೀಡುತ್ತಿದ್ದ ಮೇಲಾಧಿಕಾರಿಯಿಂದ ತಪ್ಪಿಸಿಕೊಳ್ಳಲು ಬೇರೆ ವಿಭಾಗಕ್ಕೆ ತನ್ನನ್ನು ವರ್ಗಾಯಿಸುವಂತೆ ಕೋರಿಕೆ ಸಲ್ಲಿಸಿದಾಗ ನಿರೂಪಕ ಆತನನ್ನು ಹೈದ್ರಾಬಾದಿಗೆ ವರ್ಗಾಯಿಸುತ್ತಾನೆ. ಆದರೆ ತನಗೆ ಕಿರುಕುಳ ಕೊಟ್ಟವನ ಮನೆಯಲ್ಲಿ ತೊಂದರೆಯಿದೆ, ಆತನ ಮಗ ಅಂಗವಿಕಲ, ಆತನ ವರ್ಗವಾದರೆ ಅವರ ಕುಟಂಬಕ್ಕೆ ತೊಂದರೆಯಾಗುತ್ತದೆ ಎಂಬ ಕಾರಣವನ್ನು ನೀಡಿ ಜೆಪಿ ಈ ವರ್ಗಾವಣೆಯನ್ನು ವಿರೋಧಿಸುತ್ತಾಳೆ. ತುಂಟಾಟ ಮಾಡುವ ಮಗುವನ್ನು ಲಘುವಾಗಿ ಶಿಕ್ಷಿಸುವ ತಾಯಿಯಂತೆ ಜೆಪಿ ಭಾಸವಾಗಿ 'ಚಿಕ್ಕತಾಯಿ' ಎಂಬ ಶೀರ್ಷಿಕೆಯನ್ನು ಸಮರ್ಥಿಸುತ್ತದೆ.

'ಡಾಕ್ಟರ್‌ನ ಹುಚ್ಚು ಮಗು' ಕತೆಯು ಮಾನವೀಯ ನೆಲೆಯಲ್ಲಿಯೇ ತೆರೆದುಕೊಳ್ಳುವುದು. ಪ್ರೀತಿಯ ಮೂಲವನ್ನು ಶೋಧಿಸುವ ಈ ಕತೆ ನಮ್ಮ ಅಂತರಂಗವನ್ನು ಕಲಕಿಬಿಡುತ್ತದೆ. ಹುಚ್ಚು

ಮಗು ಇಲ್ಲಿ ಮುಖ್ಯ ಪಾತ್ರವಲ್ಲ, ಡಾಕ್ಟರನೇ ಮುಖ್ಯ ಪಾತ್ರವಾಗಿರುವುದರಿಂದ ಇಲ್ಲಿಯೂ ಶೀರ್ಷಿಕೆ ದಾರಿ ತಪ್ಪಿಸುವಂತಿದೆ. ಅಲ್ಲದೆ ಕತೆಯ ಕೊನೆಯ ಭಾಗದಲ್ಲಿ ಸ್ವತಃ ಡಾಕ್ಟರನಿಗೆ ಹುಚ್ಚು ಹಿಡಿದಿದೆಯೇನೋ ಅನಿಸುತ್ತದೆ. ಹಿರಿಯರೆಲ್ಲ ಕೂಡಿ ಚರ್ಚಿಸುವಾಗ ಮಕ್ಕಳ ಮೇಲಿನ ನಮ್ಮ ಪ್ರೀತಿ ತೋರುಗಾರಿಕೆಯದು ಮತ್ತು ಸ್ವಾರ್ಥ ಪ್ರೇರಿತವಾದುದು ಎಂದು ನಿವೃತ್ತ ಡಾಕ್ಟರ್ ವಾದಿಸುತ್ತಾರೆ. ಅವರ ಸ್ವಂತ ಕತೆ ಅದಕ್ಕೆ ಉದಾಹರಣೆಯಾಗಿ ನಿಲ್ಲುತ್ತದೆ.

ಸಂಕಲನದ ಶೀರ್ಷಿಕೆಯಾಗಿರುವ 'ಹೆಗ್ಗುರುತು' ಇಸ್ಲಾಂ ಮತ್ತು ಮುಸ್ಲಿಂ ಮೈಕ್ರೋಫೈನಾನ್ಸ್ ಎಂಬ ವಿಷಯದ ಮೇಲೆ ನಡೆಯುವ ಅಂತರಾಷ್ಟ್ರೀಯ ಸೆಮಿನಾರಿನ ಹಿನ್ನೆಲೆಯಲ್ಲಿ ಆರಂಭವಾಗಿ, ಮುಸ್ಲಿಮೇತರರಲ್ಲಿ ಮುಸ್ಲಿಮರ ಬಗ್ಗೆ ಇರುವ ಗೃಹೀತಗಳು ಮತ್ತು ವಾಸ್ತವಗಳು, ಬಾಂಗ್ಲಾ ದೇಶದಲ್ಲಿ ಬಡವರಿಗಾಗಿ ಸಹಕಾರ ಸಂಸ್ಥೆಯನ್ನು ಸ್ಥಾಪಿಸಿ, ಸಾಲ ನೀಡಿ ಅವರ ಬಾಳನ್ನು ಬೆಳೆಸಿದ ನೋಬೆಲ್ ಪ್ರಶಸ್ತಿ ವಿಜೇತ ಯಾಕೂಬ್‌ರ ವಿಚಾರಗಳು, ವರ್ತನೆಗಳು ಅಮೆರಿಕನ್ನರ ಮನಸ್ಸಿನಲ್ಲಿ ಸ್ಥಿರವಾಗಿರುವ ಬಿನ್‌ಲಾಡೆನ್‌ನ ಭೂತ, ಕೇರಳದ ಹಳ್ಳಿಯೊಂದರಲ್ಲಿ ಸಮಗ್ರ ಚಿಕಿತ್ಸಾ ಕ್ರಮಕ್ಕಾಗಿ ಹೋರಾಡುತ್ತಿರುವ ತರುಣ ವೈದ್ಯನ ಕನಸು ಮುಂತಾದ ಆಧುನಿಕ ವಿದ್ಯಮಾನಗಳನ್ನು ಹಾದು "All Identities should lead to a new inteqration"[೧೪] ಎಂಬ ಮಾತು ನಿದ್ರಿಸುತ್ತಿರುವ ಯಾಕೂಬರ ಕಂಪ್ಯೂಟರ್‌ನಲ್ಲಿ ಸ್ಥಾಯಿಯಾಗಿರುವ ದೃಶ್ಯದಲ್ಲಿ ಕೊನೆಗೊಳ್ಳುತ್ತದೆ.

'ಭವ-ರೋಗ-ವೈದ್ಯ' ಮುದುಕನೊಬ್ಬನ ಲೈಂಗಿಕ ಸಮಸ್ಯೆಯ ಸುತ್ತ ಹೆಣೆಯಲ್ಪಟ್ಟಿದೆ. ಒಂದು ಮಾನಸಿಕ ಸಮಸ್ಯೆ ಕೂಡ 'ಭವರೋಗ ವೈದ್ಯ' ಎಂಬ ಕತೆಯಲ್ಲಿ ನಿರ್ವಹಿಸಲ್ಪಟ್ಟಿದೆ. ಕತೆಯನ್ನು ನಿರೂಪಕನೇ ಹೇಳಿದರೂ ವೈದ್ಯರ ಡೈರಿ, ಮುದುಕನ ಡೈರಿ, ಮುದುಕನೇ ಸ್ವತಃ ಹೇಳಿಕೊಳ್ಳುವುದು ಸೇರಿಕೊಂಡಿದೆ. ಮುದುಕ ಮಾನಸಿಕವಾಗಿ ಲೈಂಗಿಕ ಸಮಸ್ಯೆಯನ್ನು ಎದುರಿಸುತ್ತ ಅದರಿಂದ ಬಿಡುಗಡೆಯಾಗುತ್ತ ಹೆಂಡತಿಯೊಂದಿಗೆ ಪ್ರೀತಿಯಿಂದ ಇರಲು ಶಕ್ಯವಾಗುವುದು ನಿರೂಪಿತವಾಗಿದೆ.

'ಮಾಸ್ತಿಗನ್ನಡಿ'ಯಲ್ಲಿ ಮಾಂತ್ರಿಕ ವಾಸ್ತವತೆಯ ತಂತ್ರದ ಮುಖಾಂತರ ಮಾಸ್ತಿಯವರ ಸ್ವರ್ಗದಿಂದ ಬೆಂಗಳೂರಿಗೆ ಬಂದು ತಮ್ಮ ಮನೆಯ ಸುತ್ತಮುತ್ತಲ ಪರಿಸರವನ್ನು ವೀಕ್ಷಿಸಿ, ಜನರ ಜೀವನದಲ್ಲಾಗಿರುವ ಸ್ಥಿತ್ಯಂತರವನ್ನು ಕಾಣುವ ಹಾಗೂ ಪ್ರತಿಕ್ರಿಯಿಸುವ ನಿರೂಪಣೆ ಸ್ವಾರಸ್ಯಕರವಾಗಿದೆ. ಕೊನೆಯಲ್ಲಿ ವೆಂಕಟಸಾಮಿಯ ಗೋರಿಯನ್ನು ನೋಡಿದಾಗ, ಆತ ನಡೆಸಿದ ಸುಖ ಸಂಸಾರದ ಕುರುಹುಗಳು ಕಾಣಿಸಿ, ಮುದಗೊಳ್ಳುವುದು ಇತ್ಯಾದಿ ಕತೆಯ ಅಂತ್ಯ ಮಾಸ್ತಿಯವರ ಆಳವಾದ ಮಾನವ ಪ್ರೀತಿಯನ್ನು ಸಂಕೇತಿಸುತ್ತದೆ.

ಭ್ರಷ್ಟಾಚಾರದ (Non fiction) ಎಂಬ ಕಥನದಲ್ಲಿ ಶೀರ್ಷಿಕೆಯೇ ಹೇಳುವಂತೆ ಆಧುನಿಕ ಸಮಾಜದ ಒಂದು ಸಮಸ್ಯೆಯಾದ ಭ್ರಷ್ಟಾಚಾರದ ಚಿತ್ರಗಳಿವೆ. ಭ್ರಷ್ಟಾಚಾರ ಎಷ್ಟು ಸೂಕ್ಷ್ಮವಾದ

ಸ್ತರಗಳಲ್ಲಿ, ಆಯಾಮಗಳಲ್ಲಿ ಹಬ್ಬಿರಬಹುದು ಎನ್ನುವುದನ್ನು ಕಾಣಿಸುವ ಮೂರು ಕಥಾನಕಗಳು ಈ ಕತೆಯಲ್ಲಿವೆ. ಕತೆಯನ್ನು ಪೋಷಿಸಿರುವುದು ಈ ಆಶಯವೇ ಹೊರತು ಪಾತ್ರವಲ್ಲ. ಆಧುನಿಕ ಸಮಾಜದ ಹಲವೆಡೆಗಳನ್ನು ಪ್ರಜ್ಞಾಪೂರ್ವಕವಾಗಿ ಕಥನಕ್ಕೆ ಅಳವಡಿಸುವಾಗ ಸತ್ಯನಾರಾಯಣರ ಕೆಲವು ಕತೆಗಳು ನಾನ್‌-ಫಿಕ್ಷನ್‌ಗಳಾಗುವತ್ತಾ ಚಲಿಸುತ್ತವೆ.

'ಓಬಳಯ್ಯನ ಸುತ್ತಮುತ್ತ' ಕಥೆಯಲ್ಲಿ ಫುಟ್‌ಪಾತಿನ ಮೇಲೆ ಸೈಕಲ್ ಅಂಗಡಿಯಲ್ಲಿ ಸಿಗರೇಟ್, ಟೀ, ಗುಟ್ಕಾ ವ್ಯಾಪಾರ ಮಾಡುವ ಓಬಳಯ್ಯನ ಬದುಕಿನ ಬವಣೆಗಳು, ಆತ ಕಷ್ಟಪಟ್ಟು ಶಿಕ್ಷಣ ಕೊಡಿಸಿ ಇಂಜಿನಿಯರ್ ಆದ ಮಗ ಅಮೆರಿಕಕ್ಕೆ ಹಾರಿ, ಪಂಜಾಬಿ ಹುಡಿಗಿಯೊಂದಿಗೆ ಮದುವೆಯಾಗಿ ದೂರವಾಗುವ ಸಂಕಟ, ಚಿಲ್ಲರೆ ವ್ಯಾಪಾರದ ಜಾಗತೀಕರಣದ ಸುದ್ದಿಯಿಂದ ಉಂಟಾಗುವ ಆತಂಕ ಯೂನಿಯನ್ ಲೀಡರ್‌ನ ದ್ವಂದ್ವಮಯ ಬದುಕು ಮುಂತಾದ ಇಂದಿನ ವಾಸ್ತವಗಳನ್ನು ಎಳೆ ಎಳೆಯಾಗಿ ಬಿಡಿಸಿ ತೋರಿಸುವುದರಲ್ಲಿ ಯಶಸ್ವಿಯಾಗಿದೆ. "ಓಬಳಯ್ಯ, ಏನೂ ಆಗೋಲ್ಲ, ಟೀಗೆ ಬೆರೆಸುವ ಹಾಲು ಆದಷ್ಟು ಗಟ್ಟಿಯಾಗೇ ಇರಲಿ. ಕಡಿಮೆ ಬೆಲೆಗೆ ಸಿಗುತ್ತೆ ಅಂತಾ ಹಾಳುಮೂಳು ಟೀ ಸೊಪ್ಪು ಬೆರೆಸಬೇಡಿ... ನೋಡೇ ಬಿಡೋಣ ಯಾರು ಏನು ಮಾಡ್ತಾರೆ ಅಂತಾ..."[೧೫] ಹೀಗೆ ಧೈರ್ಯ ತುಂಬುವ ದಿವಾಕರ ಸ್ವಾಮಿ ಒಂದು ಸಂಕೇತವಾಗುತ್ತಾನೆ.

'ನಿಜ ಕವಲು' ಕತೆಯಲ್ಲಿ ರಾತ್ರಿ ಬಸ್ಸಿನಲ್ಲಿ ಕಂಡಕ್ಟರ್ ಆಗಿ ಕೆಲಸ ಮಾಡುತ್ತಿರುವ ರಾಜಮ್ಮ ತನ್ನ ನೌಕರಿಯಲ್ಲಿರುವ ಕಷ್ಟ, ಕಿರುಕುಳ ಶೋಷಣೆಗಳನ್ನು ಸಹಿಸುತ್ತಾ ಜತೆಗೇ ಮನೆವಾರ್ತೆಯ ಸಮಸ್ಯೆಗಳನ್ನು ದಿಟ್ಟತನದಿಂದ ನಿಭಾಯಿಸುತ್ತಾ ಬದುಕನ್ನು ಕಟ್ಟಿಕೊಳ್ಳುವ ಪರಿ ಮನಮುಟ್ಟುವಂತೆ ಮೂಡಿಬಂದಿದೆ. "ರಾತ್ರಿಯಿಡೀ ಬಸ್ಸಿನಲ್ಲಿ ದುಡಿದು, ದಣಿದು ಮನೆಗೆ ಬಂದಾಗ, ಗಂಡ ಮತ್ತು ಮಗ ಗೊರಕೆ ಹೊಡೆಯುತ್ತಿರುತ್ತಾರೆ. ಹೊರಗಡೆ ಬಾಗಿಲಿನ ಚಿಲಕಕ್ಕೆ ಸಿಕ್ಕಿಸಿರುವ ಹಾಲಿನ ಪ್ಯಾಕೆಟ್ಟನ್ನು ಕೂಡ ತೆಗೆದಿಟ್ಟಿರುವುದಿಲ್ಲ"[೧೬] ಎನ್ನುವಂಥ ಆಕೆಯ ಮಾತುಗಳು ದುಡಿಯುವ ಮಹಿಳೆಯ ಸ್ಥಿತಿಯನ್ನು ಸಮರ್ಥವಾಗಿ ಸಂಕೇತಿಸುತ್ತದೆ.

'ಕೋನ' ಕತೆಯಲ್ಲಿ ಇಂದಿನ ಮೀಸಲಾತಿ ಮತ್ತು ಮತಾಂತರಗಳ ಗೊಂದಲಮಯ ಹಿನ್ನೆಲೆಯಲ್ಲಿ, ವ್ಯಕ್ತಿಯೊಬ್ಬನ ನಿಜ ವ್ಯಕ್ತಿತ್ವದ ಸಮಗ್ರ ಸ್ವರೂಪವನ್ನು ಶೋಧಿಸುವ ಪ್ರಯತ್ನವಿದೆ. ಇಲ್ಲಿ ರವೀಂದ್ರಕುಮಾರ್ ಎಂಬ ಅಧಿಕಾರಿ, ಅವನ ಸಹಾಯಕನ ದೃಷ್ಟಿಯಲ್ಲಿ 'ಗ್ರೇಟ್‌ಮ್ಯಾನ್' ನಮ್ಮ ಕಮ್ಯುನಿಟಿಯ ಜನರನ್ನು ಮುಂದೆ ತಂದವನು. ಆದರೆ ಆತ ಈ ಕೆಲಸ ಮಾಡುತ್ತಿರುವ ಹೈದ್ರಾಬಾದ್ ಆಫೀಸಿನ ಸಿಬ್ಬಂದಿಗಳ ಪ್ರಕಾರ 'ಕೆಲಸಗಳ್ಳ ಸಕಾರಾತ್ಮಕ ಧೋರಣೆಯವನು' ಈ ದೃಷ್ಟಿಕೋನಗಳನ್ನು ಬಿಟ್ಟು ಬೇರೊಂದು ಸನ್ನಿವೇಶದಲ್ಲಿ ನೋಡಿದಾಗ ಆತನ ವ್ಯಕ್ತಿತ್ವದ ಆಶ್ಚರ್ಯಕರವಾದ ಒಂದು ವಿಭಿನ್ನ ಆಯಾಮ ಕಾಣಿಸುತ್ತದೆ.

ಒಟ್ಟಿನಲ್ಲಿ 'ಹೆಗ್ಗುರುತು' ಕಥಾ ಸಂಕಲನವು ಸತ್ಯನಾರಾಯಣರು ಸಣ್ಣ ಕತೆಯ ಪ್ರಕಾರದಲ್ಲಿ ಮಾಡಿರುವ ವಿಶಿಷ್ಟ ಸಾಧನೆಯ ಹೆಗ್ಗುರುತಾಗಿ ಮೂಡಿಬಂದಿದೆ ಎಂದರೆ ಉತ್ಪ್ರೇಕ್ಷೆಯಾಗಲಾರದು.

ಈ ಕತೆಗಳಲ್ಲಿ ಕಾಣುವ ವಸ್ತು ವೈವಿಧ್ಯ, ಜೀವನವನ್ನು ಸೂಕ್ಷ್ಮವಾಗಿ ಸಮಗ್ರ ದೃಷ್ಟಿಯಿಂದ ನೋಡುವ ಸಾಮರ್ಥ್ಯ ಅದರ ಸಂಕೀರ್ಣತೆಯನ್ನು ವಾಚನೀಯವಾದ ಭಾಷೆ, ವಿವರಗಳಲ್ಲಿ ಕಟ್ಟಿಕೊಡುವ ಕಥನ ಕೌಶಲ ಮುಂತಾದ ಅಂಶಗಳು ಇಲ್ಲಿ ಪಕ್ವ ಲೇಖಕರ ಒಂದು ಪ್ರಬುದ್ಧ ಕೃತಿಯಾಗಿ ಅರಳಿದೆ.

೬. ಪ್ರಸಿದ್ಧ ನಾಮಾ

ಕೆ. ಸತ್ಯನಾರಾಯಣರ 'ಪ್ರಸಿದ್ಧನಾಮಾ' ಪ್ರಕಟವಾದದ್ದು ೨೦೧೧ರಲ್ಲಿ ಕುತೂಹಲದ ಸಂಗತಿಯೆಂದರೆ ಮೊದಲ ಸಂಕಲನದ ಮೂರು ಸಣ್ಣಕಥೆಗಳು ಈ ಸಂಕಲನದಲ್ಲಿ ಮತ್ತೆ ಬರುತ್ತವೆ. 'ಮುದುಕಿ ಹೇಳಿದ ಸರ್.ಎಂ.ವಿ. ಕತೆ', 'ನಜೀರಸಾಬು ಚರಿತ್ರೆಯು', ಮತ್ತು "ಮಾರ್ಕ್ಸ್‌ಟುಲಿ ಹೇಳಬೇಕಾಗಿ ಬಂದ ಶ್ರೀ (ದಲಿತ) ರಾಮಚಂದ ಕತೆ' ಹಾಗೂ ಎರಡನೆ ಸಂಕಲನದ ಎರಡು ಕತೆಗಳು ಮತ್ತೆ ಬರುತ್ತವೆ. 'ಲೋಕನಾಯಕರ ಮೇಲುಕೋಟೆ ಪುರಾಣ', 'ಇನ್ನೊಬ್ಬ ಗಾಂಧಿಯ ಹೆಂಡತಿ', ಮೂರನೇ ಕಥಾಸಂಕಲನದಲ್ಲಿನ ಎರಡು ಕಥೆಗಳು ಪುನಃ ಬರುತ್ತವೆ. 'ನಾವೇನ ಬೇಡುವುದು ಇವರ ಬಳಿ ಬಂದು', 'ಮಧುಗಿರಿ ರಾಮು ಮತ್ತು ಸಾಹಿತಿ ಮುದುಕಪ್ಪ', ಮತ್ತು ಐದನೆಯ ಕಥಾ ಸಂಕಲನದ 'ಸಬ್ ಸಬಾಲ್ಟ್ರನ್' ಕಥೆ ಬರುತ್ತದೆ. ಹಾಗೂ ಈ ಸಂಕಲನದಲ್ಲಿ 'ನಡೆಯುತ್ತಿತ್ತ; ಕತೆ, ಬೆಳೆಯುತ್ತಿತ್ತ' ಎನ್ನುವಂತಹ ಒಟ್ಟು ಒಂಭತ್ತು ಕಥೆಗಳನ್ನು ಕಾಣಬಹುದು. ಇಲ್ಲಿನ ಕತೆಗಳು ಒಂದಕ್ಕೊಂದು ಮುಂದುವರಿಸಿಕೊಂಡು ಹೋಗುವ ಚಮತ್ಕಾರವೊಂದನ್ನು ರೂಢಿಸಿಕೊಳ್ಳಲು ಯತ್ನಿಸುವುದು ಕಾಣಿಸುತ್ತದೆ.

'ನಡೆಯುತ್ತಿತ್ತ; ಕತೆ ಬೆಳೆಯುತ್ತಿತ್ತ' ಎಂಬ ಕತೆಯ ಭಾಗ ಏಳರ ಉಪ ಶೀರ್ಷಿಕೆ ಹೀಗಿದೆ. ಕತೆ ಇಷ್ಟೇ; ಮುಂದೆ ಜೀವನ, ಈ ಭಾಗದ ಆರಂಭ ಹೀಗಿದೆ. "ದಿನಗಳೆದಂತೆ, ತಿಂಗಳುಗಳು ಕಳೆದಂತೆ, ನನ್ನ ಕತೆ, ನಾನು ಕೇಳಿದವರೆಲ್ಲರ ಕತೆ ಕಾಲ ಪ್ರವಾಹದೊಳಗೆ ಬೆರೆತು ಮತ್ತೆ ಯಾವ, ಯಾರ ಹೊಸಕತೆಗಳು ಗಮನಕ್ಕೆ ಬರದೆ ಜೀವನವೆನ್ನುವುದು ಎಂದಿನಂತೆ ಸಾಧಾರಣದ, ಸಾಮಾನ್ಯದ ಲಯ ಹಿಡಿಯಿತು"[೧೭] ಕತೆಯೆಂಬುದು ವಾಸ್ತವದ ಕನ್ನಡಿ ಎಂದುಕೊಳ್ಳುತ್ತಿರುವಾಗಲೇ 'ಇದಲ್ಲ', 'ಇದಲ್ಲ', ಎಂದುಕೊಳ್ಳುವಂತೆ ಮಾಡುವ ಪ್ರಸಂಗಗಳೂ ಇನ್ನಾವುದೋ ಕರೆಯ ವೇಷ ಧರಿಸಿ ಬರುತ್ತವೆ. ಇದನ್ನೆಲ್ಲ ಹೇಳಬೇಕಾಗಿರುವುದು ಕತೆಯ ಮೂಲಕವೇ ಎಂಬುದು ಸತ್ಯನಾರಾಯಣರಂಥ ವಾಸ್ತವವಾದಿ ಕಥನ ಮಾರ್ಗ ಅನಾವರಣಗೊಳಿಸುವ ಭ್ರಮಾತ್ಮಕತೆ ನಿರೂಪಣಾ ಶೈಲಿಯ ಸ್ವಾರಸ್ಯವಾಗಿದೆ.

ಜಿಡ್ಡು ಕೃಷ್ಣಮೂರ್ತಿಯವರಿಂದ, ತತ್ವಶಾಸ್ತ್ರದ ಚರ್ಚೆಯೊಂದಿಗೆ ಶುರುವಾದ ಕತೆ... ನಂತರ ಎಲ್ಲರೂ ದುಂಡಗೆ ಕೂತು... ಸಾಮಾನ್ಯರಂತೆ 'ಪೇಟೆಧಾರಣೆ ಭ್ರಷ್ಟಾಚಾರ, ಚುನಾವಣೆ, ವಸ್ತುಗಳ ಡಿಸ್ಕೌಂಟ್ ಮತ್ತು ಅಂಗಡಿ ಸಿಗುವ ಸುಲಭ ಇನ್‌ಸ್ಟಾಲ್‌ಮೆಂಟ್ ಬಗ್ಗೆ ಮಾತುಕತೆಯಾಡುವುದರೊಂದಿಗೆ ಕತೆ ಮುಗಿಯುತ್ತದೆ.

ಸರ್.ಎಂ. ವಿಶ್ವೇಶ್ವರಯ್ಯ, ನಜೀರ್‌ಸಾಬ್, ಮಾರ್ಕ್‌ಟುಲಿ, ಲೋಕನಾಯಕ ಜಯಪ್ರಕಾಶ್, ನಾರಾಯಣ, ಜಿಡ್ಡು ಕೃಷ್ಣಮೂರ್ತಿ, ಕಮಲಾದಾಸ್, ದೇವರಾಜ ಅರಸ್, ಮಹಾತ್ಮಗಾಂಧಿ, ಇವರೆಲ್ಲರ ನೆನಪುಗಳು ಇಲ್ಲಿನ ಒಂದೊಂದು ಕಥೆಗಳಲ್ಲೂ ಪಾತ್ರಗಳಾಗಿವೆ. ಆ ಕಾಲದ ಹಾಗೂ ಆ ಕಾಲದ ಜೀವನ ಸನ್ನಿವೇಶಕ್ಕೆ ಕನ್ನಡಿಗಳಾಗಿ, ವ್ಯಷ್ಟಿ/ಸಮಷ್ಟಿ ಜೀವನದ ಯಾವುದೇ ಪೋಸಿಲ್ಲದ ತಾತ್ವಿಕ ವಿಶ್ಲೇಷಣೆಗೆ ಕಾರಕಗಳಾಗಿ ದುಡಿಯುತ್ತವೆ. ಸತ್ಯನಾರಾಯಣರ ಈ ಹೊಸ ಸಂಕಲನದಲ್ಲಿ ಕಥೆಗಳ ನಿರೂಪಣೆ ಮಾಸ್ತಿಯವರ ಕಥನ ಮಾರ್ಗವನ್ನು ನೆನಪಿಸಿಕೊಡುತ್ತದೆ.

೭. ದಲಿತ ನಮ್ಮ ಕಥೆಗಳು

ಕೆ. ಸತ್ಯನಾರಾಯಣರವರ 'ದಲಿತರ ನಮ್ಮ ಕಥೆಗಳು' ಸಂಕಲನವು ನವೆಂಬರ್ ೨೦೧೩ರಂದು ಪ್ರಕಟವಾಯಿತು. ಈ ಕಥಾ ಸಂಕಲನದಲ್ಲಿ ಮೊದಲೇ ಪ್ರಕಟವಾಗಿರುವ ಕಥಾಸಂಕಲನಗಳಲ್ಲಿನ ಕಥೆಗಳನ್ನು ಆಯ್ಕೆ ಮಾಡಿಕೊಂಡು ಈ ಸಂಕಲವನ್ನು ಹೊರತರಲಾಗಿದೆ. ಈ ಸಂಕಲನದಲ್ಲಿ ಎಂಟು ಕತೆಗಳನ್ನು ಕಾಣಬಹುದು. ಮಾರ್ಕ್‌ಟುಲಿ ಹೇಳಬೇಕಾಗಿ ಬಂದ ಶ್ರೀ(ದಲಿತ) ರಾಮಚಂದ ಕತೆ, ದಲಿತರ ವೀಡಿಯೋ ಪುರಾಣ, ಸಬ್ ಸಬಾಲ್ಟ್ರನ್, ಮೊದಲ ಆ ದಲಿತ ಕಥೆ, 'ಪೂರ್ವನಾಮದ ವಲಸೆ', 'ಕೋನ', 'ಚಿನ್ನಸ್ವಾಮಿ ಎಂಬ ಮಂಡಲ್‌ವರದಿ', 'ಓಬಳಯ್ಯನ ಸುತ್ತಮುತ್ತ' ಎನ್ನುವ ಕತೆಗಳಿವೆ.

'ಕೋನ' ಕತೆಯಲ್ಲಿ ಇಂದಿನ ಮೀಸಲಾತಿ ಮತ್ತು ಮತಾಂತರಗಳ ಗೊಂದಲಮಯ ಹಿನ್ನೆಲೆಯಲ್ಲಿ ವ್ಯಕ್ತಿಯೊಬ್ಬನ ನಿಜವ್ಯಕ್ತಿತ್ವದ ಸಮಗ್ರ ಸ್ವರೂಪವನ್ನು ಶೋಧಿಸುವ ಪ್ರಯತ್ನವಿದೆ. ಇಲ್ಲಿ ರವೀಂದ್ರಕುಮಾರ್ ಎಂಬ ಅಧಿಕಾರಿ, ಅವನ ಸಹಾಯಕನ ದೃಷ್ಟಿಯಲ್ಲಿ 'ಗ್ರೇಟ್ ಮ್ಯಾನ್' ನಮ್ಮ ಕಮ್ಯುನಿಟಿಯ ಜನರನ್ನು ಮುಂದೆ ತಂದವನು. ಆದರೆ ಆತ ಈ ಕೆಲಸ ಮಾಡುತ್ತಿರುವ ಹೈದ್ರಾಬಾದ್ ಆಫೀಸಿನ ಸಿಬ್ಬಂದಿಗಳ ಪ್ರಕಾರ 'ಕೆಲಸಗಳ್ಳ ನಕಾರಾತ್ಮಕ ಧೋರಣೆಯವನು' ಈ ದೃಷ್ಟಿಕೋನಗಳನ್ನು ಬಿಟ್ಟು ಬೇರೊಂದು ಸನ್ನಿವೇಶದಲ್ಲಿ ನೋಡಿದಾಗ ಆತನ ವ್ಯಕ್ತಿತ್ವದ ಆಶ್ಚರ್ಯಕರವಾದ ಒಂದು ವಿಭಿನ್ನ ಆಯಾಮ ಕಾಣಿಸುತ್ತದೆ.

'ಓಬಳಯ್ಯನ ಸುತ್ತಮುತ್ತ' ಕಥೆ ಪುಟ್‌ಪಾತ್ ಬಳಿ ಸೈಕಲ್ ಮೇಲೆ ಟೀ ಅಂಗಡಿಯನ್ನು ನಡೆಸುವ ಓಬಳಯ್ಯನನ್ನು ಕೇಂದ್ರವಾಗಿಟ್ಟುಕೊಂಡು ಸರ್ವಸಾಕ್ಷಿ ನಿರೂಪಣೆಯಲ್ಲಿ ಹೇಳಿದ್ದುದು. ಮುಖ್ಯ ಘಟನೆ. ಚಿಲ್ಲರೆ ವ್ಯಾಪಾರವನ್ನು ಜಾಗತೀಕರಣಕ್ಕೆ ಒಪ್ಪಿಸಬಾರದೆಂಬ ಪ್ರತಿಭಟನೆ. ಓಬಳಯ್ಯನ ಕುಟುಂಬ ಜೀವನದಲ್ಲಿ ಈ ಸಮಸ್ಯೆಯನ್ನು ಕೇಂದ್ರೀಕರಿಸಿ ನೋಡುವುದರಿಂದ ಕಥೆಗೆ ಒಂದು ಗಟ್ಟಿಯಾದ ನೆಲೆ ಸಿಕ್ಕಿದೆ. ಅಧಿಕೃತತೆ ಬಂದಿದೆ. ಜಾಗತೀಕರಣದ ವಿರೋಧಿ, ಪ್ರಗತಿಪರ ಆಲೋಚಕ ದಿವಾಕರ ಸ್ವಾಮಿ ಓಬಳಯ್ಯನ ಮಗನ ವಿದ್ಯಾಭ್ಯಾಸಕ್ಕೆ ನೆರವಾಗಿ ಅವನ ಇಚ್ಛೆಯ ಪ್ರಕಾರ ಸಾಫ್ಟ್‌ವೇರ್ ಇಂಜಿನಿಯರ್ ಆಗುವಂತೆ ನೋಡಿಕೊಳ್ಳುತ್ತಾನೆ. ಇಂಥ ವೈರುಧ್ಯಗಳು ನಮ್ಮ ನಿತ್ಯ ಜೀವನದಲ್ಲಿ ನಡೆಯುವಂಥವನ್ನು ಲೇಖಕ ಸೂಕ್ಷ್ಮವಾಗಿ ಗಮನಿಸುತ್ತಾನೆ. ಆದರೆ

ಹೀಗೆ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಗುಜರಾತಿ ಹುಡುಗಿಯನ್ನು ಮದುವೆಯಾದ ಮಗ ತಂದೆ ತಾಯಿಯ ಕೈಗೆ ಹತ್ತದೆ ದೂರವೇ ಉಳಿಯಬೇಕಾಗುತ್ತದೆ. ಸ್ವಾಭಿಮಾನಿ ಓಬಳಯ್ಯ ತನ್ನ ಚಿಲ್ಲರೆ ಅಂಗಡಿಯನ್ನು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ. ಕಂಗೆಟ್ಟಿರುವ ಓಬಳಯ್ಯನಿಗೆ ದಿವಾಕರ ಬಾಬು ಮಗ್ಗಲ ಕೂತು ಸಮಾಧಾನಿಸಿದಂತೆ ಭಾಸವಾಗುವಲ್ಲಿ ತುಸು ಫ್ಯಾಂಟಸಿಯ ಸ್ಪರ್ಶ ಇದೆ.

'ಪೂರ್ವನಾಮದ ವಲಸೆ' ಕತೆಯಲ್ಲಿ ದಲಿತ ದೃಷ್ಟಿಕೋನ ಹಾಗೂ ದಲಿತೇತರ ದೃಷ್ಟಿಕೋನಗಳ ತಾಕಲಾಟದಲ್ಲಿ ಸಮೃದ್ಧವಾದ ವಿವರಗಳ ಮೂಲಕ ಕತೆ ಅಷ್ಟಷ್ಟೇ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಸ್ವಾತಂತ್ರ್ಯೋತ್ತರ ಬದುಕಿನಲ್ಲಿ ಆದ ಸ್ಥಿತ್ಯಂತರಗಳಿಂದಾಗಿ ದಲಿತ ಮರಿಸ್ವಾಮಿ ಮುಂಬಯಿಯಂಥ ನಗರದಲ್ಲಿ ಒಬ್ಬ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತ ಒಳ್ಳೆಯ ಸ್ಥಾನಮಾನದಲ್ಲಿದ್ದರೂ ಆಕಸ್ಮಿಕವಾಗಿ ಅವನ ಊರಿನ ಸಮೀಪದವನೇ ಆದ ನಿರೂಪಕ ಕ್ಲಬ್ಬಿನಲ್ಲಿ ಪರಿಚಿತನಾದಾಗ ಅಷ್ಟೇನೂ ಸೌಹಾರ್ದತೆಯನ್ನು ತೋರುವುದಿಲ್ಲ. ಕಾರಣ ಪೂರ್ವ ಬದುಕಿನಲ್ಲಿ ಆತ ಹೀನಾಯವಾಗಿ ಅನುಭವಿಸಿದ್ದನ್ನು ನೆನಪಿಸಿಕೊಳ್ಳಲು ಅವನಿಗೆ ಆಗದು. ಅದೇ ನಿರೂಪಕ ತನ್ನ ಪೂರ್ವಾಪರಗಳನ್ನು ಹೆಮ್ಮೆಯಿಂದ ಹೇಳಿಕೊಳ್ಳಲು ಇಷ್ಟಪಡುತ್ತಾನೆ. ಈ ಎಲ್ಲ ವೈರುಧ್ಯಗಳು ಹಾಗೂ ತಾಕಲಾಟಗಳು ಓದುಗನ ಅನುಭವಕ್ಕೆ ಬರುವಂತೆ ಚಿತ್ರಿತವಾಗಿವೆ.

'ಸಬ್ ಸಬಾಲ್ಟ್ರನ್' ಕಥೆಯು ರಾಜಕಾರಣ ವಸ್ತು ಉಳ್ಳದ್ದು. ಹಿಂದುಳಿದ ವರ್ಗದ ಜನರ ಏಳಿಗೆಗಾಗಿ ದುಡಿದ ದೇವರಾಜ್ ಅರಸ್ ಅವರ ರಾಜಕಾರಣದ ಜೀವನ ಚಿತ್ರಣ ಇಲ್ಲಿದೆ. ಅರಸು ತಮ್ಮ ಮನೆತನಕ್ಕೆ ಉಪಕಾರ ಮಾಡಿದ ಇನ್ನೊಂದು ಮನೆತನದ ಪಳೆಯುಳಿಕೆ ಶೇಷಮ್ಮನನ್ನು ಅವಳ ಮನೆಯಲ್ಲಿಯೇ ಸತ್ಕರಿಸುವ ಮೂಲಕ ಕಥೆಯಲ್ಲಿ ಪ್ರವೇಶಿಸುವ ಅರಸು ದಲಿತ ಚಿನ್ನಯ್ಯನಿಗೆ ಪುರಸಭಾಧ್ಯಕ್ಷ ಸ್ಥಾನಕೊಟ್ಟು, ತಂಗಿಯ ಮದುವೆಗೆ ಹಾಜರಾಗಿ ಅಚ್ಚರಿ ಮೂಡಿಸುತ್ತಾರೆ. ಚಿನ್ನಯ್ಯ ಸವ್ವ ವರ್ಷದ ನಂತರ ಅಧ್ಯಕ್ಷಗಿರಿ ಬಿಟ್ಟುಕೊಡುತ್ತಾನೆ. ಕಥೆ ಇಲ್ಲಿಗೆ ಮುಕ್ತಾಯವಾಗುತ್ತದೆ ಎಂದು ಓದುಗ ನಿರೀಕ್ಷಿಸಿದರು ಚಿನ್ನಯ್ಯ ನಾಗರಿಕ ಸೇವೆಯಲ್ಲಿ ತೊಡಗಿದ್ದು ಅನಂತರ ಅಂಗವಿಕಲರ ಶಾಲೆ ಸೇರಿ ಸಮಾಜ ಸೇವೆ ಮುಂದುವರೆಸುತ್ತಾನೆ. ಶಾಲಾ ಮೇಡಂ ನಾಗರತ್ನಮ್ಮನ ಜೊತೆ ಅತಿ ಸಲುಗೆಯಿಂದ ತಿರುಗಾಡಿ ಜನರ ಬಾಯಿಗೆ ಆಹಾರವಾಗುತ್ತಾನೆ.

ಜಾತಿಯಿಂದ ದಲಿತರಾದರೂ ಸ್ಥಾನಮಾನದಿಂದ ಉನ್ನತ ಮಟ್ಟದಲ್ಲಿರುವ ದಂಪತಿ ಮಾಧವ-ಕೇಶವ ಪ್ರಸಾದರ ಮನೋತೊಳಲಾಟದ ಚಿತ್ರಣ ಕಾಣುವುದು. 'ಮೊದಲ ಅ-ದಲಿತ' ಕಥೆಯಲ್ಲಿ ಮಾದವಿಯ ಮೇಲಾಧಿಕಾರಿಯಾಗಿರುವ ಕಥಾ ನಿರೂಪಕ, ತನ್ನ ಹೆಂಡತಿಯ ಮೂಲಕ, ಮಾಧವಿಗೆ ಅಂಗವಿಕಲ ಸ್ಪಂದನರಹಿತ ಮಗನೊಬ್ಬನಿದ್ದಾನೆ ಎಂದು ಅರಿಯುತ್ತಾನೆ. ಇಂಥ ದೊಡ್ಡ ಸಮಸ್ಯೆ ಇದ್ದರೂ ಈವರೆಗೆ ಅದನ್ನು ತೋರ್ಪಡಿಸದೆ ಠಾಕು-ಠೀಕಾಗಿ ಇರುವ ಮಾಧವಿಯ ವರ್ತನೆ ಕುರಿತು ನಿರೂಪಕ ಅಚ್ಚರಿ ಪಡುತ್ತಾನೆಯಾದರೂ ಕ್ರಮೇಣ ಅವಳು ನಿರೂಪಕನಿಗೆ ತನ್ನ ಮನೆಗೆ ಕರೆದುಕೊಂಡು ಹೋಗಿ ಪರಿಸ್ಥಿತಿ ಸಂಪೂರ್ಣ ತೋರಿಸುತ್ತಾಳೆ.

'ಮಾರ್ಕ್ ಟುಲಿ ಹೇಳಬೇಕಾಗಿ ಬಂದ ಶ್ರೀ(ದಲಿತ) ರಾಮಚಂದ್ರಕತೆ' ತನ್ನ ಸಂಕೀರ್ಣತೆಯಿಂದಾಗಿ ಗಮನ ಸೆಳೆಯುತ್ತದೆ. ಮಾರ್ಕ್ ಟುಲಿ ರಾಮಚಂದ್ರನ ಕತೆಯನ್ನು ಹೇಳಲೇಬೇಕಾಗಿ ಬರುವ ಸಂದರ್ಭವನ್ನು ಸೃಷ್ಟಿಸುವ ಘಟನೆಯೆಂದರೆ ಡಿ.ಸಿ. ಭರತ್‌ಕುಮಾರ ಒಬ್ಬ ಹರಿಜನನನ್ನು ದೇವಸ್ಥಾನವೊಂದರ ಅರ್ಚಕನನ್ನಾಗಿ ನೇಮಿಸುವುದರ ಹಾಗೂ ಹಲವಾರು ಒತ್ತಡಗಳನ್ನು ಪರಿಣಾಮವಾಗಿ ತನ್ನ ನಿರ್ಣಯಗಳನ್ನು ಬದಲಿಸುವುದರ ಸಂಬಂಧದಲ್ಲಿ ನಡೆದ ಚರ್ಚೆಯಲ್ಲಿ ತಾವು ತಾಳುವ ನಿಲುವನ್ನು ಸಮರ್ಥಿಸಿಕೊಳ್ಳುವ ಅವಶ್ಯಕತೆ.

ರಾಮಚಂದನ ಕತೆ ಹೇಳುವ ಮೂಲಕ ಟುಲಿಯವರಿಗೆ 'ಒಂದು ಕತೆನ, ಒಬ್ಬ ಮನುಷ್ಯನನ್ನು ಹೇಗೆ ನೋಡ್ತೆವೋ, ಉಳಿದ ಕತೆಗಳು ಉಳಿದ ಮನುಷ್ಯರನ್ನು ಕೂಡ ಹಾಗೇ ನೋಡ್ತೇವೆ. ಹಾಗೆ ನೋಡ್ತಾ ಇಲ್ಲ ಅಂತ ನಾವು ಅಂದ್ಕೋಬಹುದು ಅಷ್ಟೇ ಒಳ ಮನಸ್ಸಿನ ಕತೆ ಮಾತ್ರ ಬೇರೇನೆ ಆಗಿರುತ್ತೆ' ಎಂಬ ಸತ್ಯವನ್ನು ಸೂಚಿಸುವ ಉದ್ದೇಶವಿದೆ. ನಾಗರಾಜನ ಕತೆಯನ್ನಾಗಲಿ, ರಾಮಚಂದ್ರನ ಕತೆಯನ್ನಾಗಲಿ ಒಬ್ಬ ಹರಿಜನನ ಕತೆ ಎಂದು ಸಾರಾ ಸಗಟಾಗಿ ಹೇಳಿ ಕೈತೊಳೆದುಕೊಳ್ಳುವಂತಿಲ್ಲ. ಅವುಗಳನ್ನು ಚರಿತ್ರೆಯ ಭಾಗವಾಗಿಯೇ ನೋಡಬೇಕಾಗುತ್ತದೆ.

೮. ಹನ್ನೊಂದನೆಯ ಇಂದ್ರಿಯ

ಕೆ. ಸತ್ಯನಾರಾಯಣರವರ 'ಹನ್ನೊಂದನೆಯ ಇಂದ್ರಿಯ' ಕಥಾ ಸಂಕಲನವು ೨೦೧೩ರಲ್ಲಿ ಪ್ರಕಟವಾಗಿದೆ. ಇದರಲ್ಲಿ ಹಿಂದಿನ ಸಂಕಲನಗಳಲ್ಲಿ ಪ್ರಕಟವಾದ ಕೆಲವು ಕಥೆಗಳು ಪ್ರಕಟವಾಗಿವೆ. ಒಟ್ಟು ಈ ಸಂಕಲನದಲ್ಲಿ ಹದಿಮೂರು ಕಥೆಗಳು ಇರುವುದನ್ನು ಕಾಣಬಹುದು. 'ಇಲ್ಲಿ ಸಾವಿನದೆ ಸಂಭ್ರಮ', 'ಸಾವೆ ಮನೆಗೆ ಭೂಷಣ', 'ತೊಟ್ಟಿಲಂಗಡಿಯಲ್ಲಿ ಬೊಂಬು ಕೂಡ ಅಗ್ಗ', 'ಸಾವೆಂಬ ಕತೆಯೊಡನೆ', 'ಮಿಸೆಸ್ ಡೆತ್ ಅಮ್ಮನ ಸಾವು', 'ವರ್ಷಾಂತಿಕ', 'ಕಿಸಗೌತಮಿಗೊಂದು ಕತೆ', 'ಮಸಣದಿ ಪೇಳಿಕೊಂಡ ಮಗನ ಕತೆ', 'ನನ್ನ ಸೊಸೆಯ ಕಾಮನಬಿಲ್ಲು', 'ದೇವರು ಮತ್ತು ಮಾಧವ ಮೆನನ್', 'ಕಮ್ಯುನಿಸ್ಟ್ ರಾಮಭಟ್ಟರ ಜೋಯಿಸ ಪ್ರೀತಿ', 'ಭಟ್ಟರು ಕಳಿಸಿದ ಕತೆ', 'ಇಲಿಚ್ ಮತ್ತು ಮಂತ್ರೋದಯ' ಎಂಬ ಕಥೆಗಳಿವೆ.

'ಸಾವೆಂಬ ಕತೆಯೊಡನೆ' ಎಂಬ ಕಥೆಯಲ್ಲಿ ಯಾರದ್ದೋ ಕತೆ ಹೇಳುತ್ತೇನೆ ಎಂದು ಹೊರಟು ತಮ್ಮ ತಮ್ಮ ಆಸೆಗಳನ್ನು ಮತ್ತು ಭಯಗಳನ್ನೇ ಬಿಚ್ಚಿಟ್ಟ ಕತೆ. ಈ ಕತೆಯಲ್ಲಿ ಮತ್ತೆ ಮೂರು ಕತೆಗಳು ಸೇರಿಕೊಂಡಿವೆ. ಗಾದೆ ಶ್ರೀಕಂಠಯ್ಯ ಹೇಳುವ ವಾರಿಯರ್‌ನ ಸಾವಿನ ಕತೆ. ಅದಕ್ಕೆ ಹೋಲಿಕೆಯಾಗಿ ಅವರೇ ಹೇಳುವ 'ಸಂಸ್ಕಾರ ಕಾದಂಬರಿಯನ್ನು ನೆನಪಿಸುವ ವಾಸುವಿನ ಶವ ಸಂಸ್ಕಾರದ ಕತೆ; ಶ್ರೀಕಂಠಯ್ಯನ ಕತೆಗಳಿಗೆ ಎದಿರೇಟಾಗಿ ಶ್ರೀನಿವಾಸ ಹೇಳುವ ಸುಬ್ಬುಲಕ್ಷ್ಮಿಯ ಕತೆ ಹಾಗೂ ಇವೆಲ್ಲದಕ್ಕೂ ಪೀಠಿಕೆಯಾಗಿ, ಲೇಖಕರು, ಅಸಂಗತ ವಿವರಗಳಲ್ಲಿ ವರ್ಣಿಸುವ ವಾರಿಯರ್ ಶವಯಾತ್ರೆ ಇದು ಕಥೆಯ ಹಂದರ.

'ಮಿಸೆಸ್ ಡೆತ್ ಅಮ್ಮನ ಸಾವು' ಕಥೆಯಲ್ಲಿ 'ಡೆತ್' ಅಮ್ಮ ಎನ್ನುವಾಕೆ ಪ್ರತಿ ಮನೆಯ ಸಾವಿನ ಸಂದರ್ಭದಲ್ಲಿ ಅನಾಮಂತ್ರಿತರಾಗಿ ಬಂದು ಅದರಲ್ಲಿ ಕೊನೆಯವರೆಗೆ ಪಾಲ್ಗೊಳ್ಳುವುದರಿಂದ

ಹಿಡಿದು ಹತ್ತಿರದವರಿಗೆ ಸಾಂತ್ವನ ಹೇಳುವುದರೊಂದಿಗೆ ಅವರು ಮುಂದೆ ಬದುಕಲು ಬೇಕಾದ ಸ್ಥೈರ್ಯವನ್ನು ತುಂಬುತ್ತಿದ್ದ ವ್ಯಕ್ತಿ. ಆದರೆ ಅವರ ಸಾವನ್ನು ಜನ ಸ್ವೀಕರಿಸಿದ ರೀತಿ, ಪ್ರತಿಕ್ರಿಯಿಸಿದ ರೀತಿ ಮಾತ್ರ ಅತ್ಯಂತ ಯಾಂತ್ರಿಕವಾದುದು. ಜನರ ಶೀತಲ ಪ್ರತಿಕ್ರಿಯೆಯನ್ನು ದಾಖಲಿಸುವಾಗ ನಿರೂಪಕನಲ್ಲಿ ಗಾಢವಾದ ವಿಷಾದ ವ್ಯಕ್ತವಾಗುತ್ತದೆ.

'ಮಸಣದಲ್ಲಿ ಪೇಳಿಕೊಂಡ ಮಗನ ಕತೆ'ಯಲ್ಲಿ ಮುದುಕ ಮಸಣದಲ್ಲಿ ನಿಂತು ಹೇಳುವ ನಾವೆಲ್ಲರೂ ಒಂದೊಂದು ಗೂಡಿಗೆ ಸೇರಿದವರು. ಆ ಗೂಡಿಗೆ ನಾವು ಮರಳಿ ಹೋಗುವುದನ್ನು ಕಲಿಯಬೇಕು. ಅದು ಮನೆಯಿರಬಹುದು ಇಲ್ಲವೇ ಸಾವಿನ ನಂತರದ ಮನೆಯಿರಬಹುದು. ಆದರೆ ಗೂಡಿಗೆ ಮರಳಬೇಕಾದ್ದಂತೂ ಅನಿವಾರ್ಯ. ಆದ್ದರಿಂದ ಈ ವಾಸ್ತವವನ್ನು ಗ್ರಹಿಸುವುದು ಮತ್ತು ಅದರಂತೆ ನಡೆದುಕೊಳ್ಳುವುದು ಬದುಕಿಗೆ ಒಂದು ಅರ್ಥಪೂರ್ಣತೆಯನ್ನು ತಂದುಕೊಡುತ್ತದೆ.

'ನನ್ನ ಸೊಸೆಯ ಕಾಮನಬಿಲ್ಲು' ಇದೊಂದು ಸಂತನವನ್ನು ಹಂಬಲಿಸುವ ಹೆಣ್ಣಿನ ಕಥೆ. ಕರುಳ ಬಳ್ಳಿಯ ಸಾವಿನ ಉಪಸ್ಥಿತಿಯಲ್ಲಿ ವಂಶೋದ್ಧಾರಕ್ಕೆ ಮಕ್ಕಳನ್ನು ಪಡೆಯುವ ಬಯಕೆಯ ಅಗತ್ಯಕ್ಕೆ ಫಲವಂತಿಕೆಯನ್ನು ಹೊಂದಬೇಕು ಎನ್ನುವ ಹೆಣ್ಣಿನ ಕಥೆ ಒಬ್ಬನೇ ಮಗ ಅರವಿಂದನ ಅಕಾಲಮೃತ್ಯುವನ್ನು ಹೊಂದಿದಾಗ ಕಥಾನಾಯಕಿಯ ಸೊಸೆ ಗರ್ಭಿಣಿ ಎನ್ನುವುದರ ಅರಿವಿನಿಂದ ಅವಳನ್ನು ಅವಳ ಕರುಳ ಬಳ್ಳಿಯನ್ನು ಸಾಕಿ ಬೆಳೆಸಿ ಕೆಲವು ಕಾಲದ ನಂತರ ಸೊಸೆಯು ಶಾರದ ಬೇರೆ ಮದುವೆಯಾಗುವುದರ ಮೂಲಕ ಹೊಸ ಜೀವನವನ್ನು ರೂಪಿಸಿಕೊಳ್ಳುತ್ತಾಳೆ.

'ಭಟ್ಟರು ಕಳಿಸಿದ ಕಥೆ' ಕತೆಯಲ್ಲಿ ಹರೆಯದ ಮಗನನ್ನು ಕಾಣೆಯಾಗಿ ಕಳೆದುಕೊಂಡ ತಂದೆಯ ತಳಮಳದ ಕಥೆ. ಆ ವ್ಯಕ್ತಿಯೇ ತನ್ನ ಕಥೆ ಹೇಳುವ ಶೈಲಿಯಲ್ಲಿ ನಿಯಮಿತವಾಗಿದೆ. ರಕ್ತಸಂಬಂಧಿಕರಿದ್ದರೂ ಅವರು ಸಮೀಪ ಹಾಗೂ ದೂರವಾಸಿರುವುದರಿಂದ ಸಂಬಂಧಗಳು ಹೇಗೆ ಭಿನ್ನವಾಗುತ್ತವೆ. ಮಕ್ಕಳ ಬಗ್ಗೆ ಹೆತ್ತವರು ಏನು ನಿರೀಕ್ಷಿಸುತ್ತಾರೆ. ಅದು ಎಷ್ಟರ ಮಟ್ಟಿಗೆ ಸಾಧು ಇತ್ಯಾದಿ ಉಚಿತ ಚರ್ಚೆಗಳಿವೆ. ಕತೆಯ ಉದ್ದಕ್ಕೂ ತಂದೆಯ ಒದ್ದಾಟ ಕಾಣುತ್ತದೆ.

'ಕಿಸಾಗೌತಮಿಗೊಂದು ಕತೆ'ಯಲ್ಲಿ ಮೂರು ನಾಲ್ಕು ದಿನಗಳ ಹಿಂದಷ್ಟೇ ಗಂಡನನ್ನು ಕಳೆದುಕೊಂಡ ೨೪ ವರ್ಷದ ತರುಣಿ ಸ್ಮಿತಾ ಇದ್ದಾಳೆ. ಅವಳೀಗ ಎರಡು-ಎರಡೂವರೆ ತಿಂಗಳ ಗರ್ಭಿಣಿ, ಮೊದಲ ಗಂಡು ಮಗುವಿಗೆ ಮುಂದಿನ ಸ್ಕೂಲ್ ಸೀಸನ್‌ಗೆ ಮೂರು ತುಂಬುತ್ತೆ. ಅವಳ ಮಾವ ಸದಾನಂದ್ ಮತ್ತು ಅವರ ತಾಯಿ ಹಣ್ಣು ಹಣ್ಣು ಮುದುಕಿ ಕೂಡ ಕಥೆಯ ಪರಿಸರದಲ್ಲಿದ್ದಾರೆ. ಸ್ಮಿತಾ ತನ್ನ ಹೊಟ್ಟೆಯಲ್ಲಿರುವ ಮಗುವನ್ನು ಉಳಿಸಿಕೊಳ್ಳಬೇಕೆ ಬೇಡವೆ ಎನ್ನುವ ಜಿಜ್ಞಾಸೆ ಕಥೆಯ ಆರಂಭದಲ್ಲಿ ಬರುತ್ತದೆ. ಆದರೆ ಇದೇನು ಕೇಂದ್ರವಲ್ಲ. ಸಾವು ಸ್ಮಿತಾ ಮತ್ತು ಸದಾನಂದ ಇಬ್ಬರ ಎದುರೂ ಬಂದು ನಿಂತಿದೆ. ಬದುಕಿನ ಬೇರೆ ಬೇರೆ ಘಟ್ಟದಲ್ಲಿದ್ದರೂ ಸಾವಿನ ತೀವ್ರತೆ ಅದೇ ಕ್ರಮದ್ದು ಸಂದೀಪನಿಗೆ ಧರ್ಮೋದಕ ಕೊಡುವ ಹಿಂದಿನ ದಿನ ಸ್ಮಿತಾ-ಸದಾನಂದರು, "ಒಬ್ಬರನ್ನೊಬ್ಬರು ಸಂಧಿಸಿದರು ದೃಷ್ಟಿಸಿದರು, ಕಣ್ಣುಗಳು ಮಾತ್ರ ಮಾತನಾಡಿದವು,

ನಾಲಗೆ, ಮನಸ್ಸು, ಹೃದಯ ಎಲ್ಲಾ ಶಕ್ತಿಯೂ ಕಣ್ಣುಗಳಲ್ಲಿಯೆ ಅಡಕವಾಗಿರುವಂತೆ ಮಾತನಾಡಿದರು."[೧೮]

'ವರ್ಷಾಂತಿಕ' ಸತ್ಯನಾರಾಯಣರ ಯಶಸ್ವೀ ಕತೆಗಳಲ್ಲೊಂದು ಈ ಕತೆಯ ಕೇಂದ್ರದಲ್ಲಿ ಒಬ್ಬ ವೃದ್ಧರಿದ್ದಾರೆ. ಅವರ ಸಂಸಾರ ಮಕ್ಕಳು, ಮೊಮ್ಮಕ್ಕಳಿಂದ ತುಂಬಿದ್ದರೂ ಈ ವೃದ್ದರಿಗೆ ತಮ್ಮದೇ ಆದ ರೀತಿಯಲ್ಲಿ ಬದುಕಬೇಕು ಎನ್ನುವ ಹಂಬಲ. ಈ ಹಂಬಲಕ್ಕೆ ಕಾರಣವಾಗುವುದು ತಾವು ಇವರೆಲ್ಲರ ಜೀವನದಲ್ಲಿ ಅಪ್ರಸ್ತುತರಾಗಿದ್ದೇವೆ ಎನ್ನುವ ಭಾವನೆ. ಈ ಹಂಬಲ ಅವರಲ್ಲಿ ಒಂದು ವಿಧವಾದ ವೈರಾಗ್ಯಕ್ಕೆ ಕಾರಣವಾಗುತ್ತದೆ. ಅವರಿಗೆ ಸಂವಾದ ಸಾಧ್ಯವಾಗುವುದು ಲಾಲ್‌ಬಾಗದ ಕೆರೆಯೊಂದರಲ್ಲಿ ಅವರು ದಿನಾಲು ನೋಡುವ ತಮ್ಮ ಪ್ರತಿಬಿಂಬದೊಡನೆ ಮಾತ್ರ.

'ದೇವರು ಮತ್ತು ಮಾಧವ ಮೆನನ್' ಎಂಬ ಕಥೆಯು ದೇವರು ಎಂಬ ಕಲ್ಪನೆಯ ಕುರಿತು ವಿಚಾರ ಮಾಡಲು ಹಚ್ಚುವ ಕಥೆ. ವಿದ್ಯಾರ್ಥಿ ಜೀವನದಲ್ಲಿ ವೈಚಾರಿಕ ಪಂಡಿತರ ಪ್ರಭಾವದಿಂದಾಗಿ ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಖರ ನಾಸ್ತಿಕವಾದವನ್ನು ಮಂಡಿಸಿ, ಬಹುಮಾನಗಳನ್ನು ಪಡೆಯುತ್ತಿದ್ದ ಮಾಧವ ಮೆನನ್. ಅದೇ ವೈಚಾರಿಕತೆಯನ್ನು ಉದ್ದಕ್ಕೂ ಕಾಪಾಡಿಕೊಂಡು, ಯಶಸ್ವೀ ವೃತ್ತಿ ಹಾಗೂ ಸಂಸಾರಿಕ ಜೀವನ ಸಾಗಿಸಿಕೊಂಡು ಬಂದವರು. ಆದರೆ ಮುಪ್ಪಿನಲ್ಲಿ ಒಮ್ಮೆಲೆ ಅಪ್ಪಳಿಸಿ ಹೋದ ಗಂಡಾಂತರಗಳು ಯಾವುದೇ ಅಪಾಯ ಮಾಡದಿದ್ದರೂ, ಅಪಾಯವಾಗದೇ ಇದ್ದದ್ದು ದೇವರ ದಯೆ. ಆದ್ದರಿಂದ ಈಗಲಾದರೂ ಮಾಧವ ಮೆನನ್ ದೇವರನ್ನು ನಂಬಲೇಬೇಕು ಎಂದು ಮನೆಯವರು, ನೆರೆಹೊರೆಯವರು ಹಾಗೂ ಕಚೇರಿ ಸಿಬ್ಬಂದಿಯವರು ಆಡಿಕೊಳ್ಳುವಂತಾಗುತ್ತದೆ.

ನಾಳೆ ಬರೆದ ಕಥೆಗಳು

ನಾಳೆ ಬರೆದ ಕಥೆಗಳು ಕೆ. ಸತ್ಯನಾರಾಯಣರವರ ಅತ್ಯುತ್ತಮ ಕಥಾ ಸಂಕಲನಗಳಲ್ಲಿ ಒಂದು. ಈ ಕಥಾ ಸಂಕಲನವು ೨೦೧೪ರಲ್ಲಿ ಪ್ರಕಟವಾಯಿತು. 'ನಕ್ಸಲ್ ವರಸೆ', 'ಡಾಕ್ಟರ್‌ನ ಹುಚ್ಚುಮಗು', 'ಮಾಸ್ತಿಗನ್ನಡಿ', 'ಬೇಡ! ಬೇಡ!', 'ಫೋರ್ಡ್ ಕಂಪನಿ ಕೆಲಸ', 'ನಜೀರ ಸಾಬು ಚರಿತ್ರೆಯು', 'ಗ್ರಹಾಂಬೆಲ್‌ಗೂ ಕೇಳದ ಕನಸು', 'ಮಧುಗಿರಿ ರಾಮು ಮತ್ತು ಸಾಹಿತಿ ಮುದುಕಪ್ಪ', '೧೦೦೧ನೇ ಕಣ್ಣು', 'ಹೊಸ ಕಾಲದ ಹಿಂಸೆ', 'ನನ್ನ ಸೊಸೆಯ ಕಾಮನಬಿಲ್ಲು', 'ಸೈಕಲ್ ಇನ್ನೊಂದು ಸಾಕು', 'ವಿಕ್ಟೋರಿಯಾ ಮಗ ದೇವಲಿಂಗು' ಎನ್ನುವಂತಹ ಕತೆಗಳಲ್ಲಿ ಹಿಂದೆ ಪ್ರಕಟವಾದಂತಹ ಕತೆಗಳನ್ನು ಈ ಸಂಕಲನವು ಒಳಗೊಂಡಿದೆ.

'ನಕ್ಸಲ್ ವರಸೆ' ಕತೆಯಲ್ಲಿ ಪತ್ರಿಕೆಯೊಂದರ ವಾಚಕರ ವಾಣಿಯಲ್ಲಿ ನಕ್ಸಲ್ ವಾದಿಯೊಬ್ಬನ ಜೀವನವನ್ನು ಹಿನ್ನೆಲೆಯಾಗಿಟ್ಟುಕೊಂಡು ಬರೆದಿದ್ದ ಕಾದಂಬರಿಯ ಆಶಯವನ್ನು ಪ್ರಶ್ನಿಸಿ ಬರೆದ ಪತ್ರ ಈ ಕತೆ ಬಿಚ್ಚಿಕೊಳ್ಳಲು ಕಾರಣವಾಗುತ್ತದೆ. ಆಂಧ್ರದ ಒಂದು ವೈದ್ಯಕೀಯ

ಕಾಲೇಜಿನಲ್ಲಿ ಓದುತ್ತಿದ್ದ ಓರ್ವ ಯುವಕ-ಯುವತಿ ಕಮ್ಯುನಿಸ್ಟ್ ಮನಸ್ಸಿನ ಉಪನ್ಯಾಸಕರಿಂದ ಪ್ರಭಾವಿತರಾಗಿ, ನಕ್ಸಲೈಟ್ ಚಟುವಟಿಕೆಗಳಲ್ಲಿ ತೊಡಗಿ, ಜಮೀನುದಾರರೊಬ್ಬರ ಕೊಲೆಯ ಪ್ರಕರಣದಲ್ಲಿ ಪರೋಕ್ಷವಾಗಿ ಪಾಲ್ಗೊಳ್ಳುತ್ತಾರೆ. ನಂತರ ಜೈಲು ಸೇರಿ ಅಲ್ಲಿಯೇ ಮದುವೆಯಾಗುತ್ತಾರೆ. ಆ ಮೇಲೆ ಖುಲಾಸೆಗೊಂಡು, ವೈದ್ಯಕೀಯ ವೃತ್ತಿ ಆರಂಭಿಸಿ ಬಡವರ ಸೇವೆಯಲ್ಲಿ ತೊಡಗುತ್ತಾರೆ. ಆದರೆ ತಾವು ಮಹಾನ್ ನಕ್ಸಲ್ ವಾದಿಗಳು, ಜೈಲಿಗೆ ಹೋಗಿ ಬಂದವರು. ಹೀಗಾಗಿ ಅವರ ಗೌರವ, ಹಿರಿಮೆ-ಗರಿಮೆ ತಮಗೆ ಸದಾ ಸಲ್ಲಬೇಕು ಎಂಬ ಭ್ರಮೆಯಲ್ಲಿ ಬದುಕುತ್ತಿರುತ್ತಾರೆ.

'ಡಾಕ್ಟರ್‌ನ ಹುಚ್ಚುಮಗು' ಕತೆಯು ಮಾನವೀಯ ನೆಲೆಯಲ್ಲಿಯೇ ತೆರೆದುಕೊಳ್ಳುವುದು. ಪ್ರೀತಿಯ ಮೂಲವನ್ನು ಶೋಧಿಸುವ ಈ ಕತೆ ನಮ್ಮ ಅಂತರಂಗವನ್ನು ಕಲಕಿ ಬಿಡುತ್ತದೆ. ಹುಚ್ಚು ಮಗು ಇಲ್ಲಿ ಮುಖ್ಯ ಪಾತ್ರವಲ್ಲ. ಡಾಕ್ಟರನೇ ಮುಖ್ಯ ಪಾತ್ರವಾಗಿರುವುದರಿಂದ ಇಲ್ಲಿಯೂ ಶೀರ್ಷಿಕೆ ದಾರಿ ತಪ್ಪಿಸುವಂತಿದೆ. ಅಲ್ಲದೆ ಕತೆಯ ಕೊನೆಯ ಭಾಗದಲ್ಲಿ ಸ್ವತಃ ಡಾಕ್ಟರನಿಗೆ ಹುಚ್ಚು ಹಿಡಿದಿದೆಯೇನೋ ಅನಿಸುತ್ತದೆ. ಹಿರಿಯರೆಲ್ಲ ಕೂಡಿ ಚರ್ಚಿಸುವಾಗ ಮಕ್ಕಳ ಮೇಲಿನ ನಮ್ಮ ಪ್ರೀತಿ ತೋರುಗಾರಿಕೆಯದು ಮತ್ತು ಸ್ವಾರ್ಥ ಪ್ರೇರಿತವಾದುದು ಎಂದು ನಿವೃತ್ತ ಡಾಕ್ಟರ್ ವಾದಿಸುತ್ತಾರೆ. ಅವರ ಸ್ವಂತ ಕತೆ ಅದಕ್ಕೆ ಉದಾಹರಣೆಯಾಗಿ ನಿಲ್ಲುತ್ತದೆ.

'ಮಾಸ್ತಿಗನ್ನಡಿ'ಯಲ್ಲಿ ಮಾಂತ್ರಿಕ ವಾಸ್ತವತೆಯ ತಂತ್ರದ ಮುಖಾಂತರ ಮಾಸ್ತಿಯವರ ಸ್ವರ್ಗದಿಂದ ಬೆಂಗಳೂರಿಗೆ ಬಂದು ತಮ್ಮ ಮನೆಯ ಸುತ್ತಮುತ್ತಲ ಪರಿಸರವನ್ನು ವೀಕ್ಷಿಸಿ, ಜನರ ಜೀವನದಲ್ಲಾಗಿರುವ ಸ್ಥಿತ್ಯಂತರವನ್ನು ಕಾಣುವ ಹಾಗೂ ಪ್ರತಿಕ್ರಿಯಿಸುವ ನಿರೂಪಣೆ ಸ್ವಾರಸ್ಯಕರವಾಗಿದೆ. ಕೊನೆಯಲ್ಲಿ ವೆಂಕಟಸಾಮಿಯ ಗೋರಿಯನ್ನು ನೋಡಿದಾಗ ಆತ ನಡೆಸಿದ ಸುಖ ಸಂಸಾರದ ಕುರುಹುಗಳು ಕಾಣಿಸಿ, ಮುದಗೊಳ್ಳುವುದು ಇತ್ಯಾದಿ ಕತೆಯ ಅಂತ್ಯ ಮಾಸ್ತಿಯವರ ಆಳವಾದ ಮಾನವ ಪ್ರೀತಿಯನ್ನು ಸಂಕೇತಿಸುತ್ತದೆ.

'ನಜೀರ್ ಸಾಬು ಚರಿತ್ರೆಯು' ಎಂಬ ಕತೆಯಲ್ಲಿ ಎಂಬತ್ತರ ದಶಕದ ಉತ್ತರಾರ್ಧದಲ್ಲಿ ಗ್ರಾಮೀಣ ಮಂತ್ರಿಯಾಗಿದ್ದ ನಜೀರ್ ಸಾಬ್ ಅವರು ಜಾರಿಗೆ ತಂದ ಜಿಲ್ಲಾ ಮತ್ತು ಮಂಡಲ್ ಪಂಚಾಯತ್ ವ್ಯವಸ್ಥೆಯಿಂದ ಸೀತಾಲಕ್ಷ್ಮಿ ಎಂಬ ಮಹಿಳೆ ಎಸ್.ಎಸ್.ಎಲ್.ಸಿ, ಓದಿ ಹೆಚ್ಚಿನದೇನನ್ನೋ ಸಾಧಿಸಬೇಕೆಂದಿರುವ 'ಸೀತಾಲಕ್ಷ್ಮಿ' ಪಂಚಾಯ್ತಿಯ ಚುನಾವಣೆಯಲ್ಲಿ ಗೆದ್ದು ಸಮಾಜ ಸೇವೆ ಮಾಡುವಂತಹ ಚಿತ್ರಣವನ್ನು ಕಾಣಬಹುದು.

'ವಿಕ್ಟೋರಿಯಾ ಮಗ ದೇವಲಿಂಗು' ಎಂಬ ಕತೆಯಲ್ಲಿ ಕತೆಗಳನ್ನು ಸಂಗ್ರಹಿಸುವ ಯೋಜನೆಯಿಟ್ಟುಕೊಂಡು ಭಾರತಕ್ಕೆ ಬರುವ ಕೇಂಬ್ರಿಡ್ಜ್ ವಿದುಷಿ ಪ್ರೊಫೆಸರ್ ಮಾರ್ಗರೇಟ್ ಮಿಡ್‌ಳಿಗೆ ಕಥನಗಳ ಬಗ್ಗೆ ತನ್ನದೇ ಆದಂತಹ ಸಿದ್ಧಾಂತಗಳಿವೆ. ನಿವೇದಕ ದೇವಲಿಂಗುವಿನ ಪ್ರಸ್ತಾಪ ಮಾಡಿದಾಗ ಮಾರ್ಗರೇಟ್ ಮಿಡ್‌ಳಿಗೆ ಅವನಲ್ಲಿ ಆಸಕ್ತಿ ಹುಟ್ಟುತ್ತದೆ. ಆದರೆ ದೇಶಿಯ ಕಥನಕಾರನಾದ ದೇವಲಿಂಗು ಅವಳೊಡನೆ ಸಹಕರಿಸಲು ಒಪ್ಪುವುದಿಲ್ಲ. ಮಾರ್ಗರೇಟ್ ಮೀಡ್‌ಳಿಗೆ

ಬೇಕಾದ ಕಥನಗಳನ್ನು ಒದಗಿಸಲು ದೇವಲಿಂಗು ಸಿದ್ಧನಿಲ್ಲ. ಆದರೆ ಅವನಿಗೆ ಅವನದೇ ಆದ ಕಥನಗಳಿವೆ. ಈ ಕಥನಗಳನ್ನು ಹೇಳುವಾಗ ಅವನು 'ವಿಕ್ಟೋರಿಯಾ ಮಗ ದೇವಲಿಂಗು' ಎಂಬ ಹೊಸ ವ್ಯಕ್ತಿತ್ವವನ್ನೇ ತನ್ನಲ್ಲಿ ಆವಾಹಿಸಿಕೊಳ್ಳುತ್ತಾನೆ.

'ನನ್ನ ಸೊಸೆಯ ಕಾಮನಬಿಲ್ಲು' ಕತೆಯಲ್ಲಿ ಅತ್ತೆ ಪ್ರತಿನಿಧಿಯಾಗಿದ್ದಾಳೆ. ತನ್ನ ಮಗನನ್ನು ಕಳೆದುಕೊಂಡ ಅತ್ತೆಯೇ ತನ್ನ ಸೊಸೆಗೆ ಬೇರೆ ಮದುವೆ ಮಾಡಿಸುವುದರ ಮೂಲಕ ಹೊಸ ಬದುಕೊಂದನ್ನು ನೀಡುತ್ತಾಳೆ. ಇಲ್ಲಿನ ಅತ್ತೆ ಹೆಣ್ಣಿನ ಸಿದ್ಧ ಮಾದರಿಗೆ ವ್ಯತಿರಿಕ್ತವಾಗಿರುವುದನ್ನು ತೋರಿಸುವುದಲ್ಲದೇ ಮನುಷ್ಯ ಸಂಬಂಧದ ಮಾನವೀಯ ನೆಲೆಯನ್ನು ಎತ್ತಿ ತೋರುತ್ತದೆ. ಅತ್ತೆ ಇಲ್ಲಿ ಪ್ರಪಂಚದ ಪ್ರತೀಕವಾದರೆ ಸೊಸೆ ಗೂಡಿನ ಪ್ರತೀಕ. ಕತ್ತಲೆಯ ಗೂಡಿನೊಳಗೆ ಆಕಾಶದ ಕಾಮನಬಿಲ್ಲು ಮೂಡಿರುವುದನ್ನು ಈ ಕತೆಯಲ್ಲಿ ಕಾಣಬಹುದು.

'ಬೇಡ! ಬೇಡ! ಫೋರ್ಡ್ ಕಂಪನಿ ಕೆಲಸ' ಕತೆಯು ರಾಜಕಾರಣಿಗಳು ಹಾಗೂ ಮಠಾಧೀಶರ ಬೆಂಬಲಿತ ಬಂಡವಾಳಶಾಹಿಯ ವಿಜೃಂಭಣೆಯಿಂದ ಆರಂಭವಾಗುವ ಕಥೆ. ಆ ಕಂಪನಿಯ ಒಬ್ಬ ಸಾಮಾನ್ಯ ಕೆಲಸಗಾರ 'ಅಂಗಮುತ್ತು'ವಿನ ಸುತ್ತ ಗಿರಕಿ ಹೊಡೆಯುತ್ತದೆ. ಮೊದಲು ಟೆನಿಸ್ ಕೋಚ್ ಆಗಿದ್ದ ಅವನು ಮೇಲ್ದರ್ಜೆಯ ಜನರೊಡನೆ ಬೆರೆಯುತ್ತ ಸ್ವಚ್ಛಂದವಾಗಿ ಗೌರವದಿಂದ ಇದ್ದ. ಅದು ಬಿಟ್ಟು ದೊಡ್ಡ ಕಂಪನಿಗೆ ಸೇರಿದಾಗ ತಾನು ಕಂಪನಿಯ ಲಕ್ಷ್ಮಣ ರೇಖೆ ದಾಟಲಾರೆನೆಂದು ಮನವರಿಕೆಯಾಗಿ ಕಸಿವಿಸಿಯಾಗುತ್ತದೆ. ಕಂಪನಿಯ ಟೆನಿಸ್ ಕೋರ್ಟ್ ಇದ್ದರೂ ಇವನು ಅಲ್ಲಿ ಆಡುವ ಹಾಗಿಲ್ಲ! ಅದು ಕೇವಲ ಅಧಿಕಾರಿಗಳಿಗೆ! ಸಮಾನಾಂತರವಾಗಿ ಅವನ ಹೆಂಡತಿಯ ಮನೋರಂಗ ಕಂಪನಿ ಆಕರ್ಷಣೆ, ಅಲ್ಪ ಕಾಣಿಕೆಗಳ ಆಶೆ. ಗಂಡನನ್ನು ಅರ್ಥಮಾಡಿಕೊಳ್ಳದೆ ಉಡಾಫೆಯಿಂದ ವರ್ತಿಸುವುದು ಚೆನ್ನಾಗಿ ಚಿತ್ರಿತವಾಗಿದೆ.

ಅಮೆರಿಕನ್ ಮನೆ

ಅಮೆರಿಕನ್ ಮನೆ ಕೆ. ಸತ್ಯನಾರಾಯಣರ ಅತ್ಯುತ್ತಮ ಕಥಾ ಸಂಕಲನಗಳಲ್ಲಿ ಒಂದು. ಇದು ೨೦೧೬ರಲ್ಲಿ ಪ್ರಕಟವಾಯಿತು. ಇದರಲ್ಲಿ ಒಟ್ಟು ಹತ್ತು ಕಥೆಗಳಿವೆ. 'ಅಮೆರಿಕನ್ ಮನೆ', 'ಬರೆದನು ಕತೆಯ ಯಾಕೂಬ್ ನಲಗೊಂಡ', 'ವಿಷಣ್ಣಶೋಧ', 'ಕಾರ್ಲ್‌ಮಾರ್ಕ್ಸ್ ನಂಜಮ್ಮ', 'ಒಂದರ ನಂತರ ಎರಡೆಂಬುದು ನಿಜವೆ?', 'ವಿಲೋಮವೋ ಅನುಲೋಮವೋ', 'ಸ್ವರ್ಗದ ಸ್ವಭಾವ', 'ನಿಜಕಾರಣ', 'ಪುರಾತನ ಸೆಕ್ಯೂಲಾರ್ ಪ್ರೇಮ ಪ್ರಕರಣ', 'ಹೀಗಿಲ್ಲಿ ಅಮೆರಿಕಾ'.

ಅಮೆರಿಕನ್ ಮನೆ ಕತೆಯಲ್ಲಿ 'ಕಸ್ತೂರ್ ವೇದತ್ತೆ' ಎನ್ನುವ ಪಾತ್ರ ತುಂಬಾ ವಿಶಿಷ್ಟವಾದಾದು. ಹಾಗೂ ದುಡಿಯುವ ಮಹಿಳೆಯ ಕೌಟುಂಬಿಕ ಜೀವನವನ್ನು ಆಗುಹೋಗುಗಳನ್ನು ಚಿತ್ರಿಸಲಾಗಿದೆ. ಈ ಕತೆಯಲ್ಲಿ ವೇದತ್ತೆಯ ಪಾತ್ರವನ್ನು ಕೇಂದ್ರೀಕರಿಸಿ ರಚನೆ ಮಾಡಲಾಗಿದೆ. ಭಾರತದಿಂದ ಅಮೆರಿಕಾಕ್ಕೆ ಹೋಗಿ Citizenship ಪಡೆದುಕೊಂಡು Religious Warkers ಆಗಿ ಹರಿಕತೆಯನ್ನು ಹೇಳುವುದಲ್ಲದೇ, ಮನೆಯಲ್ಲಿಯೇ ಚಕ್ಕುಲಿ, ನಿಪ್ಪಟ್ಟು, ಕೋಡುಬಳೆಗಳನ್ನು ಮಾಡಿಕೊಂಡು

ಇರ್ವಿಂಗ್ ವಿಲ್ಲಾದ ಕಟ್ಟಡಗಳ ಒಂದು ಮಹಡಿಯಲ್ಲಿ ತನ್ನ ಸಂಸಾರದ ನೌಕೆಯನ್ನು ಸಾಗಿಸುತ್ತಾಳೆ. "ನಾವು ದಿನನಿತ್ಯ ಬದುಕುವ, ದುಡಿಯುವ, ಸಂಪಾದನೆ ಮಾಡುವ ಜಾಗವೇ ನಮ್ಮ ದೇಶ. ಅಲ್ಲಿಯ ಬದುಕೇ ನಮ್ಮ ನಿಜವಾದ ಬದುಕು. ಇದನ್ನು ನಮ್ಮವರು ಒಪ್ಪಿಕೊಳ್ಳುವುದೇ ಇಲ್ಲ. ಅದನ್ನು ಒಪ್ಪಿಕೊಳ್ಳುವ ತನಕ ನಾವು ಇಲ್ಲಿ ಸಮಾನ ನೆಲೆಯಲ್ಲಿ ಬದುಕಲು ಸಾಧ್ಯವೂ ಆಗುವುದಿಲ್ಲ. ಅಲ್ಲಿಯ ಮನೆಯೆನ್ನುವುದು ಹಿಂದೆ ಬಿಟ್ಟ ಭ್ರಮೆ. ಮನೆಯೆನ್ನುವುದು ಇದ್ದರೂ ಒಪ್ಪಿಕೊಳ್ಳಲಾಗದ ಇನ್ನೊಂದು ಭ್ರಮೆ"[೧೯] ಎನ್ನುವ ಮಾತು ಬದುಕಿನ ಚಿತ್ರಣವನ್ನು ಮೂಡಿಸುತ್ತದೆ.

'ಹೀಗಿಲ್ಲಿ ಅಮೆರಿಕಾ' ಕತೆಯಲ್ಲಿ ಅಮೆರಿಕೆಯ ಆಕರ್ಷಣೆಯಲ್ಲಿ ಹುಟ್ಟಿಕೊಂಡ ನವ ವಸಾಹತುವಾದದ ಸಂದರ್ಭ. ತಮ್ಮ ಮಗಳು ಸಾವಿತ್ರಿ ಅಮೆರಿಕೆಯಲ್ಲಿ ದುಡಿಯುತ್ತಿರುವ ಇಂಜಿನಿಯರನ್ನು ಮದುವೆಯಾಗಿ ಅಮೆರಿಕನ್ ಸಾವಿತ್ರಿಯಾದುದು ಶಂಕರರಾಯರಿಗೆ ಅಭಿಮಾನದ ವಿಷಯ. ಆದರೆ ಅಮೆರಿಕೆಯಲ್ಲಿದ್ದರೂ ಸೊಸೆಗೆ ಹಣದ ಆಸೆಗಾಗಿ ಬರೆ ಹಾಕುವಂಥ ಭಾರತದ ದುಷ್ಟ ಸಾಮಾಜಿಕ ಆಚರಣೆಗಳಲ್ಲಿ ತೊಡಗಿದ ಸಾವಿತ್ರಿಯ ಪತಿ ಹಾಗೂ ಅತ್ತೆ ಮಾವಂದಿರಿಂದಾಗಿ ಅವರ ಅಮೆರಿಕನ್ ಕನಸು ನುಚ್ಚು ನೂರಾಗುತ್ತದೆ. ಸಾವಿತ್ರಿ ಭಾರತದ ರಾಯಭಾರೀ ಕಚೇರಿಯ ಸಹಾಯದಿಂದ ಅಮೆರಿಕೆಯಿಂದ ಪಾರಾಗಿ ಬಂದು ಶಿಕ್ಷಣವನ್ನು ಮುಂದುವರೆಸಿ ಸ್ಕೂಲ್ ಟೀಚರ್ ಆಗಿ ಜೀವನೋಪಾಯಗಳನ್ನು ಕಂಡುಕೊಳ್ಳುವ ಘಟನೆ ಈ ಕತೆಯಲ್ಲಿ ಚಿತ್ರಿತವಾಗಿದೆ.

'ಕಾರ್ಲ್‌ಮಾರ್ಕ್ಸ್ ನಂಜಮ್ಮ' ಕಥೆಯು ಯಾವುದೇ ಐಡಿಯಾಲಜಿಯ ಅನುಯಾಯಿಯಾದರೂ, ನಿತ್ಯ ಬದುಕಿನ ಜನರ ಜೊತೆಗಿನ ಸಾವಯವ ಸಂಬಂಧದ ಅಗತ್ಯವನ್ನು ಒತ್ತಿಹೇಳುತ್ತದೆ. ಮಾರ್ಕ್ಸ್‌ವಾದದ ಉತ್ತಮ ಭವಿಷ್ಯ ಕಥಾ ಪಾತ್ರ ಈಗಲ್‌ಟನ್‌ರಿಗೆ ಸಾಮಾನ್ಯರಲ್ಲಿ ಸಾಮಾನ್ಯಳಾದ ಮನೆಕೆಲಸದಾಕೆ ನಂಜಮ್ಮನಲ್ಲಿ ಕಾಣುತ್ತದೆ ವಿನಃ ಅವರ ಪುಸ್ತಕಗಳನ್ನು ಬೇರೆ ಬೇರೆಯಾಗಿ ಅನುವಾದ ಮಾಡಿದ ಮಾರ್ಕ್ಸ್‌ವಾದಿ ಕಾರ್ಯಕರ್ತರಿಂದಲ್ಲ. ತನ್ನ ಬದುಕನ್ನು ಕಟ್ಟಿಕೊಳ್ಳಲು ತಾನಿದ್ದ ಸನ್ನಿವೇಶದಲ್ಲಿ ಕೊರಗದೆ ತಮ್ಮ ಮುಂದಿನ ಪೀಳಿಗೆಯ ಜನರ ಉತ್ತಮ ಸ್ಥಿತಿಯ ಬಗೆಗೆ ಆಶಾವಾದ ಹೊಂದಿದ ನಂಜಮ್ಮನಿಂದ ಮಾರ್ಕ್ಸ್‌ವಾದದ ಭವಿಷ್ಯ ಕುರಿತಾಗಿ ಹೊಸ ಚಿಂತನೆಯೇ ಈಗಲ್‌ಟನ್‌ಗೆ ಹೊಳೆದುಬಿಡುತ್ತದೆ. ಕಣ್ಣು ತೆರೆದಿದ್ದರೆ, ನೋಡುವ ಮನಸ್ಸಿದ್ದರೆ ಎಲ್ಲರೂ ಈಗಲ್‌ಟನ್ ಆಗಬಹುದು. ಇಲ್ಲದಿದ್ದರೆ ಇರುವ ವಿಚಾರವನ್ನು ಅನುವಾದ ಮಾಡಬಹುದಷ್ಟೇ ವಿನಃ ಹೊಸ ಚಿಂತನೆ ಬೆಳೆಸಲು ಸಾಧ್ಯವಿಲ್ಲ ಎನ್ನುವುದು ಕಥೆಯ ಆಶಯವಾಗಿದೆ.[೨೦]

'ಬರೆದನು ಕತೆಯ ಯಾಕೂಬ್ ನಲಗೊಂಡ' ಕತೆಯಲ್ಲಿ ಭಾರತೀಯ ಸಾಮಾಜಿಕ ಸನ್ನಿವೇಶದಲ್ಲಿ ವಿವಿಧ ರೀತಿಯ ಜನಾಂಗದ ಜನರು ವಾಸಮಾಡುತ್ತಿದ್ದಾರೆ. ಆದರೆ ಮನುಷ್ಯರನ್ನು ಕಪ್ಪು ಬಿಳುಪಿನ ಆಚೆಗೆ ನೋಡಲಾರದ ಸ್ಥಿತಿಗೆ ಬರಲಾಗುತ್ತಿದೆ. ಯಾರಲ್ಲಿ ಏನು ಮಾತನಾಡಬೇಕು ಎನ್ನುವ ಭಯ ಕಾಡುತ್ತಿರುವ ಸಂದರ್ಭ, ಹೇಳುವ ಮಾತನ್ನು ಹೇಗೆ ಹೇಳಬೇಕು ಎನ್ನುವುದೇ

ತಿಳಿಯದಾಗುತ್ತಿದೆ. ಒಂದು ಸಣ್ಣ ವಿಷಯ ಆಗಬಹುದು, ಒಂದು ಮಾತು ಆಗಬಹುದು. ಅದು ನೂರಾರು ಜೀವಗಳನ್ನೇ ತೆಗೆದುಕೊಂಡು ಬಿಡುತ್ತಿರುವ ಸಂದರ್ಭವನ್ನು ಕಾಣಬಹುದು. ಇಷ್ಟೆಲ್ಲದರ ನಡುವೆಯೂ ಬದುಕನ್ನು ಸಹಜವಾಗಿ ಸ್ವೀಕರಿಸುತ್ತಿರುವ ಜನರು ಇದ್ದಾರೆ. ಈ ಎರಡನ್ನು ಈ ಕತೆಯಲ್ಲಿ ಚಿತ್ರಿಸಲಾಗಿದೆ. ಮನೆಯ ಪ್ರಸಾದವನ್ನು ಮುಸ್ಲಿಂ ಯುವಕನಿಗೆ ಅಳುಕಿಲ್ಲದೆ ನೀಡಿ, ಇಸ್ಲಾಂ ದೇವಧೂತರನ್ನು ಹುಡುಕಲೂ ಸಹಾಯ ಮಾಡು ಎನ್ನುವ ಕಥಾ ನಿರೂಪಕರ ತಾಯಿಯ ಚಿತ್ರಣ ಇವತ್ತಿನ ಸಂದರ್ಭಕ್ಕೆ ಬೇಕಾಗಿರುವ ಮನಸ್ಥಿತಿಯಾಗಿದೆ.[೨೧]

'ವಿಷಣ್ಣ ಶೋಧ' ಕತೆಯಲ್ಲಿ ಸನ್ಯಾಸಿಯೊಬ್ಬನ ಮಠದ ದಿನನಿತ್ಯದ ವ್ಯವಹಾರಿಕತೆ, ದೈನಿಕತೆ, ಮಠದ ಪ್ರಭಾವವನ್ನು ವಿಸ್ತರಿಸುವ ಮತ್ತು ಅದನ್ನು ಸಾಂಸ್ಥೀಕರಿಸುವ ಪ್ರಯತ್ನಗಳು ಹೇಗೆ ಚೈತನ್ಯ ವಿಕಾಸಕ್ಕೆ ಉಪಾದಿಯಾಗಿ ಕಾಡುವ ಸಂದರ್ಭವನ್ನು ಸೃಷ್ಟಿಸಿಬಿಡುತ್ತದೆ ಎನ್ನುವ ಸಂಗತಿಯನ್ನು ಮಂಡಿಸುತ್ತದೆ. ಈ ಕತೆಯಲ್ಲಿ ಬರುವ ಶರ್ಮಿಳಾ ಮತ್ತು ಗೌರಿ ಪಾತ್ರಧಾರಿಗಳು ಲೌಕಿಕರ ದೃಷ್ಟಿಯಲ್ಲಿ ಆತ್ಮ ವಿಕಾಸಕ್ಕೆ ಸ್ವಾಮಿಗಳಷ್ಟು ಪಾತ್ರರಾಗಿರದಿದ್ದರೂ, ಅವರಲ್ಲಿ ಸಹಜವಾಗಿ ಎದ್ದಿರುವ ಜಿಜ್ಞಾಸೆಗಳು ಸ್ವಾಮೀಜಿಯಲ್ಲಿ ಸ್ವ ಜಿಜ್ಞಾಸೆಯನ್ನು ಹುಟ್ಟುಹಾಕುವಷ್ಟು ಪಕ್ವವಾಗಿರುತ್ತವೆ. ಸನ್ಯಾಸಿ ಬದುಕಿನ ಕಾಮದಿಂದಾಚೆಗಿನ ಅನೇಕಾನೇಕ ಸಾಧ್ಯತೆಯನ್ನು ಈ ಕತೆಯು ಶೋಧಿಸುವಂತೆ ಮಾಡುತ್ತದೆ.

'ನಿಜ ಕಾರಣ' ಕತೆ ಆಧುನಿಕ ಸಾಮಾಜಿಕ ಜಾಲತಾಣದ ಯುಗದಲ್ಲಿ ಏರ್ಪಡುತ್ತಿರುವ ಸಂವಾದದ ಸ್ವರೂಪ, ವ್ಯಕ್ತಿತ್ವಗಳ ಸಂಕೀರ್ಣ ರಚನೆ ಹಾಗೂ ವ್ಯವಸ್ಥೆಯನ್ನು ಮಾಡುತ್ತದೆ. ಯಾವುದೇ ವಿಷಯದ ಬಗೆಗೆ ಆಳವಾಗಿ ಯೋಚಿಸದೇ ಆ ಕ್ಷಣಕ್ಕೆ ಪ್ರತಿಕ್ರಿಯಿಸುವ ಜಗತ್ತಿನ ಎಲ್ಲಾ ವಿಷಯದ ಬಗ್ಗೆ ತನ್ನದೇ ತೀರ್ಮಾನ ಮತ್ತು ಸಲಹೆ ಕೊಡಲು ಉತ್ತೇಜಿತರಾಗಿರುವ ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯವಾಗಿರುವ ಜನ ಸಮುದಾಯದ ಗುಂಪಿನ ಸ್ವರೂಪವನ್ನು ಮಾರ್ಮಿಕವಾಗಿ ಈ ಕಥೆ ಚಿತ್ರಿಸುತ್ತದೆ.

ಇವರ ಕತೆಗಳಲ್ಲಿ ನವ್ಯೋತ್ತರ ಅತ್ಯಾಧುನಿಕ ಜಗತ್ತಿನ ವೈವಿಧ್ಯಮಯ ವಾಸ್ತವಗಳು, ಮಾಸ್ತಿ ಪರಂಪರೆಯ ಸರಳ, ಆಪ್ತ, ನಿಧಾನ ಶ್ರುತಿಯ ಸೌಮ್ಯ ಶೈಲಿಯಲ್ಲಿ ಮೈತಾಳಿವೆ. ಕತೆಗಳಲ್ಲಿ ತಂತ್ರವೈವಿಧ್ಯ, ಪ್ರಯೋಗಶೀಲತೆ ಸಾಕಷ್ಟಿದ್ದರೂ ಅವು ಸುಖವಾಗಿ ಓದಿಸಿಕೊಂಡು ಹೋಗುತ್ತವೆ. ಕತೆಗಳಲ್ಲಿ ಲೇಖಕನೂ ನಿರೂಪಕನಾಗಿ ಹಾಗೂ ಒಮ್ಮೊಮ್ಮೆ ಪಾತ್ರವಾಗಿ ಪಾಲುಗೊಳ್ಳುತ್ತಾ, ಕ್ರಮೇಣ ಓದುಗರೂ ಕತೆ ನೀಡುವ ಅನುಭವದಲ್ಲಿ ಒಂದಾಗುವಂತೆ ಮಾಡುವ ವಿಶೇಷ ಕೌಶಲವಿದೆ. ಆವೇಶ, ಆಕ್ರೋಶ, ನಾಟಕೀಯತೆ, ಭಾವುಕತೆಯಾಗಲೀ ಕಥಾ ಶಿಲ್ಪದ ಬಿಗಿಬಂಧವಾಗಲೀ ಇಲ್ಲಿ ಇಲ್ಲ. ಆದರೆ ಕತೆಗಳು ಎಲ್ಲೂ ಸಪ್ಪೆಯಾಗುವುದಿಲ್ಲ. ಲೇಖಕರ ಅನುಭವ ಪ್ರಪಂಚದ ವಿಸ್ತಾರ, ಆಳ, ವೈವಿಧ್ಯ, ಸಮಕಾಲೀನತೆ, ಅಧಿಕೃತತೆ, ಪ್ರಾಮಾಣಿಕತೆ, ಸೂಕ್ಷ್ಮ ವಿವರಗಳ ಸಮೃದ್ಧಿ ಮುಂತಾದ ಗುಣಗಳು ಓದುಗನ ಮನಸ್ಸನ್ನು ಆಳವಾಗಿ ಕಲಕುವುದಲ್ಲದೆ, ಚಿಂತನೆಯನ್ನು ಆತ್ಮವಿಮರ್ಶೆಯನ್ನು ಪ್ರೇರಿಸುವಂತೆ ಕತೆಗಳು ಸಾಗುತ್ತವೆ.

ಇಂದು ಅನೇಕರು ಬದುಕುತ್ತಿರುವ ಮಧ್ಯಮ ದರ್ಜೆಯ ಮಾಮೂಲಿ ಸಾಮಾನ್ಯ ಬದುಕನ್ನು ಸತ್ಯನಾರಾಯಣ ಅವರ ಕಥೆಗಳಲ್ಲಿ ಕಂಡದ್ದು ಕಂಡ ಹಾಗೆ ತೋರಿಸಿಕೊಡುತ್ತಾರೆ. ಬದುಕು ಕಥೆಗಳಲ್ಲಿ ಹಾಗೆ ಕಾಣಿಸಿಕೊಂಡು ಅವು ಇರುವುದೇ ಹಾಗೇ ಎಂಬ ತಿಳಿವಳಿಕೆಯನ್ನು ಅರಿವಿಗೆ ತರುವಲ್ಲಿ ಹೆಚ್ಚಿನ ಕಥೆಗಳು ಕೊನೆಗೊಳ್ಳುತ್ತವೆ.

ಅಡಿ ಟಿಪ್ಪಣಿ

೧. ಸತ್ಯನಾರಾಯಣ ಕೆ., 'ನಿಮ್ಮ ಮೊದಲ ಪ್ರೇಮದ ಕವಿತೆ', (ಕಥಾಸಂಕಲನ), ಪುಟ–೧೬.

೨. ಸತ್ಯನಾರಾಯಣ ಕೆ., 'ನಿಮ್ಮ ಮೊದಲ ಪ್ರೇಮದ ಕವಿತೆ', (ಕಥಾಸಂಕಲನ), ಪುಟ–೧೫೦–೧೦೬.

೩. ಸತ್ಯನಾರಾಯಣ ಕೆ., 'ನಿಮ್ಮ ಮೊದಲ ಪ್ರೇಮದ ಕವಿತೆ', (ಕಥಾಸಂಕಲನ), ಪುಟ–೪೨.

೪. ಸತ್ಯನಾರಾಯಣ ಕೆ., 'ನಿಮ್ಮ ಮೊದಲ ಪ್ರೇಮದ ಕವಿತೆ', (ಕಥಾಸಂಕಲನ), ಪುಟ–೪೮.

೫. ಅದೇ, ಪುಟ–೧೨೫.

೬. ಸತ್ಯನಾರಾಯಣ ಕೆ., 'ವಿಕ್ಟೋರಿಯಾ ಮಗ ದೇವಲಿಂಗು', (ಕಥಾಸಂಕಲನ), ಪುಟ–೧.

೭. ಸತ್ಯನಾರಾಯಣ ಕೆ., 'ಹಳೆಯ ಕಾಲದ ಹೊಸ ಕತೆ', (ಕಥಾಸಂಕಲನ), ಪುಟ–೧೪.

೮. ಅದೇ, ಪುಟ–೧೦೪.

೯. ಅದೇ, ಪುಟ–೮೪.

೧೦. ಅದೇ, ಪುಟ–೪೧.

೧೧. ಅದೇ, ಪುಟ–೫೧.

೧೨. ಸತ್ಯನಾರಾಯಣ ಕೆ., 'ನಕ್ಸಲ್ ವರಸೆ', (ಕಥಾಸಂಕಲನ), ಪುಟ–೭೮.

೧೩. ಅದೇ, ಪುಟ–೧೦೪.

೧೪. ಸತ್ಯನಾರಾಯಣ ಕೆ., 'ಹೆಗ್ಗುರುತು', (ಕಥಾಸಂಕಲನ), ಪುಟ–೫೧.

೧೫. ಅದೇ, ಪುಟ–೧೦೩.

೧೬. ಅದೇ, ಪುಟ–೧೧೫.

೧೭. ಸತ್ಯನಾರಾಯಣ ಕೆ., 'ಪ್ರಸಿದ್ಧನಾಮಾ', ಪುಟ–೭೧.

೧೮. ಸತ್ಯನಾರಾಯಣ ಕೆ., 'ಹನ್ನೊಂದನೆಯ ಇಂದ್ರಿಯ', (ಕಥಾಸಂಕಲನ), ಪುಟ–೮೪.

೧೯. ಸತ್ಯನಾರಾಯಣ ಕೆ., 'ಅಮೆರಿಕನ್ ಮನೆ', (ಕಥಾಸಂಕಲನ), ಪುಟ–೩೪.

೨೦. ಅದೇ, ಮುನ್ನುಡಿಯಿಂದ.

೨೧. ಅದೇ, ಮುನ್ನುಡಿಯಿಂದ.

❖❖❖

ಅಧ್ಯಾಯ : ಮೂರು

ಕೆ. ಸತ್ಯನಾರಾಯಣ'ರವರ ಕಥೆಗಳ ವೈಶಿಷ್ಟ್ಯತೆ

ಅಧ್ಯಾಯ: ಮೂರು

ಕೆ. ಸತ್ಯನಾರಾಯಣ'ರವರ ಕಥೆಗಳ ವೈಶಿಷ್ಟ್ಯತೆ

ಮೂವತ್ತು ವರ್ಷಗಳಿಂದ ಸತ್ಯನಾರಾಯಣ ಸಾಹಿತ್ಯ ಕೃಷಿಯಲ್ಲಿ ನಿರಂತರವಾಗಿ ತೊಡಗಿದ್ದಾರೆ. ಕಥೆ, ಕಾದಂಬರಿ, ಸಾಹಿತ್ಯ, ವಿಮರ್ಶೆ ಪ್ರಬಂಧ ಅಂಕಣ ಬರಹ ಹಾಗೂ ಪ್ರವಾಸ ಕಥನಗಳನ್ನು ವೈವಿಧ್ಯಮಯವಾಗಿ ಬರೆದಿದ್ದಾರೆ. ಕನ್ನಡ ಪ್ರದೇಶಗಳಿಂದ ಹಲವಾರು ವರ್ಷಗಳು ಹೊರಗೆ ಉಳಿದಾಗಲೂ ಕನ್ನಡ ಭಾಷೆಗೆ ನಿಷ್ಠವಾಗಿ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಸಹಜವಾಗಿ ದತ್ತವಾದ ಸಾಹಿತ್ಯಿಕ ಪ್ರತಿಭೆಯನ್ನು ಜೀವನೋಪಾಯದ ಅಗತ್ಯಗಳಿಗಾಗಿ ಸ್ಥಾನಮಾನ ಮತ್ತು ಕೀರ್ತಿ ಗಳಿಸುವ ಸಾಧನವಾಗಿ ಬಳಸದ ಅವರಿಗೆ ಬರವಣಿಗೆಯ ದೈನಿಕವನ್ನು ಸಹ್ಯವಾಗಿಸುವ, ಸುಂದರವಾಗಿಸುವ ಮತ್ತು ಸಾಮಾಜಿಕ ಅಸ್ತಿತ್ವದ ತಾತ್ವಿಕತೆಯನ್ನು ಶೋಧಿಸುವ ಪರಿಕರವಾಗಿ ಕಂಡಿದೆ. ಪ್ರೀತಿಯನ್ನು, ವಿಚಾರಗಳನ್ನು, ಭಾವನೆಗಳನ್ನು ಹಂಚಿಕೊಳ್ಳುವುದರಿಂದಲೂ ಕೂಡ ಈ ಜಗತ್ತು ವಿಸ್ತಾರವಾಗುತ್ತದೆ, ಸುಂದರವಾಗುತ್ತದೆ ಎಂಬುದು ಸಾಹಿತ್ಯದ ಬಗೆಗಿನ ಅವರ ಘೋಷಿತ ನಿಲುವು.

ಕಥಾ ರಚನೆಯ ಶೈಲಿ, ತಂತ್ರ ಮತ್ತು ವಸ್ತು

ಕೆ. ಸತ್ಯನಾರಾಯಣರವರ ಪ್ರಥಮ ಕಥಾ ಸಂಗ್ರಹ 'ನಿಮ್ಮ ಮೊದಲ ಪ್ರೇಮದ ಕಥೆ'ಯ ಕತೆಗಳಲ್ಲಿ ಭಾರತೀಯ ಕಥನ ಪರಂಪರೆಗೆ ಪರಿಚಿತವಾದ ಮೌಖಿಕ ಕಥನ ಶೈಲಿಯನ್ನೆ ಅಲವಡಿಸಿಕೊಂಡಿದ್ದಾರೆ. ಹಾಗೂ ಅದರ ಅಂಗಗಳನ್ನೆ ಬಳಸಿಕೊಂಡಿದ್ದಾರೆ. ಹಾಗೂ ಕತೆಗಳಲ್ಲಿ ಕಥೆ ಹಾಗೂ ವ್ಯಾಖ್ಯಾನ ಬೇರೆ ಬೇರೆಯಾಗಿಯೇ ಕಾಣಿಸಿಕೊಳ್ಳುವುದು ಅವರ ಕತೆಗಳು ದೀರ್ಘ ಕಾಲ ಶಿಥಿಲವಾಗಿರುವುದಕ್ಕೆ ಕಾರಣವಾಗಿರಬಹುದು ಎಂದೆನಿಸುತ್ತದೆ. ಅರ್ಥಪೂರ್ಣ ಬದುಕನ್ನು ಕಾಣುವ, ಕಂಡದ್ದನ್ನು ಪ್ರಸ್ತುತಗೊಳಿಸುವ ಸಂದಿಗ್ಧ ಸಂಕಷ್ಟಗಳ ಬಗ್ಗೆ ಮಾಸ್ತಿ ಚಿಂತಿಸಿದವರು ಸತ್ಯನಾರಾಯಣ ಅವರು ಒಂದು ಅರ್ಥದಲ್ಲಿ ಮಾಸ್ತಿಯಿಂದ ಪ್ರಭಾವಿತರಾದವರು. ಇನ್ನೊಂದು ಅರ್ಥದಲ್ಲಿ ಅವರು ಮಾಸ್ತಿಯ ಕಥನ ಪರಂಪರೆಯನ್ನು ಮುಂದುವರಿಸುವವರೂ ಆಗಿದ್ದಾರೆ.

ಕೆ. ಸತ್ಯನಾರಾಯಣ ಕನ್ನಡದಲ್ಲಿ ಕಥನ ಕಲೆಯನ್ನು ಗಂಭೀರವಾಗಿ ತೆಗೆದುಕೊಂಡಿರುವ ಸಮಕಾಲೀನ ಲೇಖಕ. ತಮ್ಮ ಕತೆ ಹಾಗೂ ಕಾದಂಬರಿಗಳ ಮೂಲಕ ಅವರು ನಮ್ಮ ಕಾಲದ ಬದುಕನ್ನು ವಿಶಿಷ್ಟವಾಗಿ ಗ್ರಹಿಸುವ ಕೆಲಸವನ್ನು ಮಾಡುವುದಲ್ಲದೆ ಕಥನ ತಂತ್ರಗಳಲ್ಲಿಯೇ ಗಂಭೀರವಾದ ಪ್ರಯೋಗಗಳನ್ನು ಮಾಡುತ್ತಿರುವವರು ಕೆ. ಸತ್ಯನಾರಾಯಣ. ಇವರ ಕತೆಗಳಲ್ಲಿ ಒಬ್ಬ ನಿರೂಪಕ ತನ್ನ ಪರಿಚಯದ ಪರಧಿಯೊಳಗೆ ಬರುವ ವ್ಯಕ್ತಿಗಳ ಕತೆಗಳನ್ನು ನಿರೂಪಿಸುತ್ತಾ ಹೋಗುತ್ತಾನೆ.

ಕೆಲವು ಕತೆಗಳಲ್ಲಿ ನಿರೂಪಕ ಒಬ್ಬ ಮುಖ್ಯ ಪಾತ್ರವಾಗಿಯೂ ಕತೆಯಲ್ಲಿ ಭಾಗವಹಿಸುತ್ತಾನೆ. ಇನ್ನು ಕೆಲವು ಕತೆಗಳಲ್ಲಿ ನಿರೂಪಕ ಪಾತ್ರವಾಗಿ ಬರುವುದಿಲ್ಲವಾದರೂ ಕತೆಯ ಬೆಳವಣಿಗೆಯನ್ನು ಗಮನಿಸಿ ನಮಗೆ ಹೇಳುವುದಕ್ಕೋಸ್ಕರವಾಗಿ ಹಲವಾರು ಸನ್ನಿವೇಶಗಳಲ್ಲಿ ಪ್ರವೇಶ ಪಡೆಯುತ್ತಾನೆ. ಸತ್ಯನಾರಾಯಣರ ಕತೆಗಳಲ್ಲಿ ನಮ್ಮ ಕಾಲದ ಅಂದರೆ ಆಧುನಿಕ ಬದುಕಿನ ಪ್ರಸ್ತುತ ಸನ್ನಿವೇಶಗಳಿರುತ್ತವೆ. ಸ್ವತಃ ನಿರೂಪಕನ ಪರಿಚಯದ ಪರಿಧಿಯೊಳಗೆ ಬರುವ ವ್ಯಕ್ತಿಗಳ ಕತೆಗಳು ಎನ್ನುವ ಸೂಚನೆಯಿಂದಲೇ ಇದು ಸ್ಪಷ್ಟವಾಗುತ್ತದೆ. ಸಾಹಿತಿಯ ಜವಾಬ್ದಾರಿಯಿರುವುದು ಪ್ರಸ್ತುತವನ್ನು ಪರಿಶೀಲಿಸುವುದರಲ್ಲಿ ಎಂದು ಸತ್ಯನಾರಾಯಣರು ನಂಬಿರುವುದು ಅವರ ಎಲ್ಲಾ ಕೃತಿಗಳಲ್ಲಿ ಸ್ಪಷ್ಟವಾಗುತ್ತದೆ. ಆಧುನಿಕ ಬದುಕನ್ನು ಎಲ್ಲಿ ಹಿಡಿಯಬೇಕು, ಹೇಗೆ ಗ್ರಹಿಸಬೇಕು ಎನ್ನುವುದರ ಹುಡುಕಾಟವೇ ಸತ್ಯನಾರಾಯಣರ ಸಾಹಿತ್ಯ ಯಾತ್ರೆಯ ಗುರಿಯಾಗಿದೆ.

ಕಥೆ ಬರೆಯುವ ಸಂದರ್ಭದಲ್ಲಿ ನೋಡಿದ್ದು, ಕೇಳಿದ್ದು, ತಿಳಿದದ್ದು, ಹೊಳೆದದ್ದು ಎಲ್ಲವನ್ನು ಬರೆಯುತ್ತಾರೆ. ವ್ಯಕ್ತಿ, ಜನ, ಸಮಾಜ ಯಾವುದನ್ನು ಮರೆಮಾಚಲು ಬಯಸುತ್ತಾರೋ ನೇರವಾಗಿ ಅಲ್ಲಿಗೆ ಕೈಹಾಕಿ ಬೆಚ್ಚಿಸುವ ಲೇಖಕರು ಹಲವು ಕತೆಗಳಲ್ಲಿ ಸೂಚ್ಯವಾಗಿ ಹೇಳಬೇಕೆಂಬ ದೃಷ್ಟಿಯಿಂದ ಕನಸುಗಳಿಗೆ ಮೊರೆ ಹೋಗುತ್ತಾರೆ. ಅದು ಸುಪ್ತ ಮನಸ್ಸನ್ನು ಅನಾವರಣಗೊಳಿಸುವ ಅವರ ಕ್ರಮ. ಸತ್ಯನಾರಾಯಣ ಅವರ ಕಿರು ಕತೆಗಳು ಲೇಖಕನೊಬ್ಬ ತನ್ನ ಹೆಗಲೇರಿರುವ ಕಥನಶೈಲಿ ಮತ್ತು ಕಾಣುವ ಬಗೆಯನ್ನು ಕೊಡವಿ ಹೊಸ ರೀತಿಯಲ್ಲಿ ನೋಡುವ ಕಾಣುವ ಬಗೆಯನ್ನು ಅನ್ವೇಷಿಸುವ ಧೀರ ಪ್ರಯತ್ನ.

ಸತ್ಯನಾರಾಯಣರ ಕತೆಗಳನ್ನು ಸುಲಭದಲ್ಲಿ ಸಂಕ್ಷಿಪ್ತಗೊಳಿಸಿ ಹೇಳಲು ಬರುವುದಿಲ್ಲ. ಅವುಗಳ ಧೋರಣೆ ಏನು ಎಂದು ಸ್ಪಷ್ಟ ಮಾತುಗಳಲ್ಲಿ ವಿವರಿಸುವುದು ಕಷ್ಟವೇ ಧೋರಣೆಯೊಂದನ್ನು ಮೊದಲು ನಿರ್ಧರಿಸಿಕೊಂಡು ಅದರ ಅಳತೆಗೆ ಸರಿಯಾಗಿ ಈ ಕತೆಗಾರ ತನ್ನ ಕತೆ ರೂಪಿಸುವುದಿಲ್ಲ. ಅವರ ಕತೆಗಳಲ್ಲಿ ಕತೆ ಹೇಳುವವರು, ಕೇಳುವವರು ಮತ್ತು ಕಥನದ ಸಂದರ್ಭಗಳು ಕತೆಯಷ್ಟೇ ಪ್ರಧಾನವಾಗಿವೆ. ಕತೆ ಓದಿ ಮುಗಿಸಿದ ಮೇಲೆ ಅದು ಯಾರ ಕತೆ ಮತ್ತು ಯಾರ ಗ್ರಹಿಕೆಗೆ ಅನುಗುಣವಾದ ಕತೆ ಎಂಬ ಗೊಂದಲಗಳು ಶುರುವಾಗಿ, ನಮ್ಮ ನೆನಪಿನಲ್ಲಿ ಕತೆ ಹಲವು ಬಣ್ಣಗಳನ್ನು ಪಡೆದುಕೊಳ್ಳುತ್ತದೆ. ಯಾರೋ ಯಾರಿಗೋ

ಹೇಳಿದ ಕತೆಯನ್ನು ಈಗ ನಾನು ನಿಮಗೆ ಹೇಳುತ್ತಿದ್ದೇನೆ ಎಂಬ ಅವರ ತಂತ್ರ ಪುರಾಣಗಳಷ್ಟು ಹಳೆಯದು.

ಸತ್ಯನಾರಾಯಣರು ತಮ್ಮದೇ ದಾರಿಯನ್ನು ಹುಡುಕಿಕೊಂಡು ಅತಿಯಾಗಿ ಅತಿಕ್ರಮಣ ಮಾಡದವರು. ಕತೆಯ ಶರೀರದಲ್ಲಿ ಇದು ತಮ್ಮದು ಎನ್ನುವ ಗುರುತುಗಳನ್ನು ಇಡಲು ಬಲ್ಲವರು. ಕತೆಯನ್ನು ತಾವಷ್ಟೇ ಹೇಳದೆ ಹಲವರ ಕೈಲಿ ಹಲವು ಕತೆಗಳನ್ನು ಹೇಳಿಸುವುದರ ಮೂಲಕ ತನಗೂ ಕಥೆಗೂ ಅಗತ್ಯವಾದ ದೂರವನ್ನು ಉಳಿಸಿಕೊಳ್ಳುವವರು. ಹಾಗೆಯೇ ಕಥೆಗಳಿಂದಲೇ ಲಭ್ಯವಾಗುವ ಅರಿವಿನ ಪರಿಕರಗಳನ್ನು ಓದುಗ ಬಳಸದೇ ಹೋಗಿ ಬಿಡುವನೆಂದು ಗುಮಾನಿ ಪಡುವವರು. ಸಮಾಜದ ಒಳಿತಿಗಾಗಿ ನಿಸ್ವಾರ್ಥ ದುಡಿಯುವ ಜನರ ಬಗ್ಗೆ ಸತ್ಯನಾರಾಯಣ ಅಪಾರ ಗೌರವ ಉಳಿಸಿಕೊಳ್ಳುತ್ತಾರೆ.

ಕೆ. ಸತ್ಯನಾರಾಯಣ ಅವರ ಕಥೆಗಳಲ್ಲಿ ಮಾಸ್ತಿಯವರ ಛಾಯೆಯನ್ನು ಗುರುತಿಸುವ ಪ್ರಯತ್ನದಂತೆ ಅವರನ್ನು 'ಮಾಸ್ತಿಯವರ ಉತ್ತರಾಧಿಕಾರಿ' ಎಂದು ಕರೆಯುವ ಅತಿರೇಕವೂ ಕೂಡ ಕನ್ನಡ ವಿಮರ್ಶಾ ಪರಂಪರೆಯಲ್ಲಿ ಕಂಡುಬಂದಿದೆ. ಮಾಸ್ತಿಯವರಂತೆ ಸತ್ಯನಾರಾಯಣ ಅವರು ಕೂಡ ಕಥನದಲ್ಲಿ ಯಾರಿಂದಲೋ ಕೇಳಿದ, ಎಲ್ಲಿಯೋ ಗ್ರಹಿಸಿದ ಸಂಗತಿಗಳನ್ನು ಕಥೆಯಾಗಿಸಿದ ತಂತ್ರಗಾರಿಕೆಯನ್ನು ಬಳಸಿಕೊಳ್ಳುತ್ತಾರೆ ಎನ್ನುವುದು ಇಂತಹ ಗ್ರಹಿಕೆಗೆ ಮುಖ್ಯ ಕಾರಣ. ಇದರ ಜೊತೆಗೆ ಮಾಸ್ತಿಯವರಂತೆ ಸತ್ಯನಾರಾಯಣ ಅವರ ಕಥೆಗಳಲ್ಲಿಯೂ ವಿವರಗಳ ಸೂಕ್ಷ್ಮದಲ್ಲಿಯೇ ಕಥೆ ಕಟ್ಟುವ ಪ್ರಯತ್ನವಿದ್ದಂತೆ ಅಪಾರ ಜೀವನ ಪ್ರೀತಿಯ ಸೆಲೆ ಕೂಡ ಕಥೆಗಳಲ್ಲಿ ಕಾಣುತ್ತದೆ.

ಸತ್ಯನಾರಾಯಣ ಅವರದು ಕೌಟುಂಬಿಕ ಚೌಕಟ್ಟಿನಲ್ಲಿಯೇ ಜಗತ್ತಿನ ವಿಶಾಲತೆಯನ್ನು ಕಂಡುಕೊಳ್ಳುವ ಕಥೆಗಳು. ಇಲ್ಲಿ ವ್ಯಕ್ತಿಗತ ಸಂಬಂಧಗಳಲ್ಲಿ ಆಗುವ ಬದಲಾವಣೆಗಳು ಸಾಮಾಜಿಕ ನೆಲೆಯ ಅರ್ಥವಂತಿಕೆಯನ್ನು ಪಡೆದುಕೊಳ್ಳುತ್ತವೆ. ಹಾಗೆಂದು ಸತ್ಯನಾರಾಯಣ ಪಾತ್ರಗಳನ್ನು ರೂಪಕಗಳ ಮಾದರಿಯಲ್ಲಿ ಬೆಳೆಸುವುದಿಲ್ಲ. ಅವರಿಗೆ ಇತಿಹಾಸವನ್ನು ಹೇಳುವಲ್ಲಿ ಆಸಕ್ತಿ ಇದೆ. ಸಣ್ಣ ಸಣ್ಣ ವಿವರಗಳನ್ನು ಹಿಡಿದಿಡುವ ತಾಳ್ಮೆ ಇದೆ. ಸಂಬಂಧಗಳ ಅರಿವಿದೆ. ಇವೆಲ್ಲದರ ಮೂಲಕ ಕಥೆ ಕಟ್ಟುವ ಅವರಿಗೆ ಓದುಗರು ಕಥೆಗಳ ವಿವರಗಳಲ್ಲಿ ಕಳೆದು ಹೋಗುವುದು ಬೇಡ. ಎಲ್ಲಿಯು ಅದಕ್ಕಾಗಿ ಭಾವುಕ ಸನ್ನಿವೇಶಗಳನ್ನು ಸೃಷ್ಟಿಸುವುದಿಲ್ಲ. ಜೊತೆಗೆ ಬೌದ್ಧಿಕ ಭಾರವನ್ನು ಹೇರುವುದಿಲ್ಲ. ಕಥೆ ಹೇಳುತ್ತಲೇ ಅವರು ಮಧ್ಯಪ್ರವೇಶದ ಮೂಲಕ ವೈಚಾರಿಕ ನೆಲೆಗಳು ಉಳಿದುಕೊಳ್ಳುವಂತೆ ನೋಡಿಕೊಳ್ಳುತ್ತಾರೆ. ಅವರ ಬರವಣಿಗೆಯಲ್ಲಿ ಚೆಲುವಿದೆ. ವಿವರಗಳಲ್ಲಿ ಕುಶಲತೆ ಇದೆ. ಆದರೆ ಬೌದ್ಧಿಕ ನೆಲೆಗಳ ಕುರಿತು ಸ್ಪಷ್ಟತೆ ಇದೆ.

ಸತ್ಯನಾರಾಯಣ ಅವರ ಕಥೆಗಳು ಹೆಚ್ಚು ಮಂಡ್ಯದ ಸುತ್ತಮುತ್ತ ನಡೆಯುತ್ತವೆ. ಬಾಲ್ಯದ ನೆನಪಿನ ಪ್ರಾದೇಶಿಕ ವಿವರಗಳನ್ನು, ತಾವು ಕರ್ನಾಟಕದಲ್ಲೇ ಹೆಚ್ಚು ಅವಧಿ ಇಲ್ಲದೇ ಇದ್ದಾಗ್ಯೂ

ಅಚ್ಚುಕಟ್ಟಾಗಿ ಎಲ್ಲ ಸೂಕ್ಷ್ಮ ವಿವರಗಳೊಂದಿಗೆ ನೀಡಬಲ್ಲರು. ಕೆಳ, ಮಧ್ಯಮ ವರ್ಗದ ಎಲ್ಲೋ ಕೆಲವೊಮ್ಮೆ ಬ್ರಾಹ್ಮಣ ಕುಟುಂಬವೇ ಪ್ರಾತಿನಿಧಿಕವಾಗಿ ಕಂಡರೂ ಎಲ್ಲ ವರ್ಗದವರೂ ಇವರ ಕಥೆಗಳಲ್ಲಿ ಕಂಡುಬರುತ್ತಾರೆ.

ಸತ್ಯನಾರಾಯಣ ಅವರ ಕಥೆಗಳಲ್ಲಿ ಕಂಡುಬರುವ ಅನುಭವ ಬಹುಮುಖಿ ಸಮಾಜದಲ್ಲಿ ಕಂಡುಬರುವ ಚಲನಶೀಲತೆಯ ಜೊತೆ ಜೊತೆಯಲ್ಲೇ ಇರುವ ತವಕ ತಲ್ಲಣ ಸಂದಿಗ್ಧತೆ, ತಾಪತ್ರಯಗಳು, ಲೇಖಕರ ತಾತ್ವಿಕತೆಯನ್ನೇ ಹಿಡಿದು ಹೇಳುವುದುದಾದರೆ ದಿನನಿತ್ಯದ ಸಾಮಾನ್ಯ ಬದುಕೇ ಎಲ್ಲಕ್ಕಿಂತ ಮೌಲಿಕವಾದದ್ದು. ಇವರ ಕಥೆಗಳಲ್ಲಿ 'ತನ್ಮಯತೆ' ಸಂಯಮಕ್ಕಿಂತ ಜಾಗೃತತೆಯ ಗುಣವೇ ಹೆಚ್ಚು. ಈ ಜಾಗೃತತೆಯ ಪ್ರತಿನಿಧಿಯಾಗಿ ನಿರೂಪಕ ಕಂಡುಬರುತ್ತಾನೆ. ತನ್ನ ಅಭಿಪ್ರಾಯಗಳಿಗೆ ತಾನು ಕಾಣಿಸುತ್ತಿರುವ ಸತ್ಯದ ಬಗ್ಗೆ ಸಂದೇಹವುಂಟಾದಾಗ 'ಪರ್ಯಾಯ ಪಾತ್ರ'ವನ್ನು ತರುವುದುಂಟು.

ಬಾಲ್ಯದ ನೆನಪಲ್ಲಿ ಇಂದಿನ ಬದುಕನ್ನು ಪರೀಕ್ಷಿಸುವುದು, ಹಿಂದಿನ ನೆನಪಲ್ಲಿ ಇಂದನ್ನು ಅರ್ಥಮಾಡಿಕೊಳ್ಳಲು ಹೆಣಗುವುದು ಸತ್ಯನಾರಾಯಣ ಅವರ ಶೋಧದ ಮುಖ್ಯವಾದೊಂದು ಎಳೆ. ಕಥೆ ಹೇಳುವುದು ಮತ್ತು ಕಥೆಯೊಳಗೆ ಒಂದು ಕತೆ ಕೇಳುವುದು ಎರಡೂ ಕೂಡ ಸತ್ಯನಾರಾಯಣ ಅವರಿಗೆ ಬದುಕಿನ ಮೂಲ ಸತ್ಯ ಯಾವುದು ಎಂಬುದರ ನಿರಂತರ ಹುಡುಕಾಟದ ಒಂದು ಸಾಧನ. ಇಂದು ಅನೇಕರು ಬದುಕುತ್ತಿರುವ ಮಧ್ಯಮ ದರ್ಜೆಯ ಮಾಮೂಲಿ ಸಾಮಾನ್ಯ ಬದುಕನ್ನು ಸತ್ಯನಾರಾಯಣ ಅವರ ಕಥೆಗಳಲ್ಲಿ ಕಂಡದ್ದು ಕಂಡ ಹಾಗೆ ತೋರಿಸಿಕೊಡುತ್ತಾರೆ. ಬದುಕು ಕಥೆಗಳಲ್ಲಿ ಹಾಗೆ ಕಾಣಿಸಿಕೊಂಡು ಅವು ಇರುವುದೇ ಹಾಗೇ ಎಂಬ ತಿಳಿವಳಿಕೆಯನ್ನು ಅರಿವಿಗೆ ತರುವಲ್ಲಿ ಹೆಚ್ಚಿನ ಕಥೆಗಳು ಕೊನೆಗೊಳ್ಳುತ್ತವೆ.

ಕಥೆಗಳಲ್ಲಿ ಸ್ತ್ರೀ ಪಾತ್ರಗಳ ಚಿತ್ರಣ

ಕೆ. ಸತ್ಯನಾರಾಯಣರವರ ಹಲವು ಕತೆಗಳ ಕೇಂದ್ರ ಪಾತ್ರಗಳು ಮತ್ತು ಅನುಭವಗಳು ಹೆಣ್ಣು ಮಕ್ಕಳದೇ ಆಗಿರುವುದು ಕುತೂಹಲಕರವಾದ ಸಂಗತಿ. ಸಾವಿತ್ರಿ, ಸಾವಿತ್ರಿಬಾಯಿ, ಗಾಯತ್ರಿ, 'ಕಸ್ತೂರಿಬಾಯಿ', ವಾಣಿ ಇನ್ನೊಂದು ಸೈಕಲ್ ಬಯಸುವ ಕುಸುಮ ಹೀಗೆಯೇ ಹಲವು ಹೆಣ್ಣುಗಳ ಅಂತರಂಗವು ಈ ಕಥೆಗಳಲ್ಲಿ ಶೋಧಿತವಾಗಿದೆ. ಅಷ್ಟೇಕೆ, ಇವರ ಇತರ ಕಥೆ ಕಾದಂಬರಿಗಳಲ್ಲಿಯೂ ಈ ಸ್ತ್ರೀ ಅನುಭವದ ಬಗೆಗಿನ ಆಸಕ್ತಿಯನ್ನು ಕಾಣಬಹುದು. ಈ ಹೆಣ್ಣು ಮಕ್ಕಳನ್ನು ಗಂಡಸರು ಕಾಣುವ, ಬಯಸುವ, ನಡೆಸಿಕೊಳ್ಳುವ ಬಗೆಗಳನ್ನು ಗುರುತಿಸಿದಾಗಲೂ, ಪರಮನಃ ಪ್ರವೇಶದ ಮೂಲಕ ಅವರ ಮನೋಬಿಂಬಗಳನ್ನು ಗ್ರಹಿಸಲು ಸತ್ಯನಾರಾಯಣ ಪ್ರಯತ್ನಿಸಿದ್ದಾರೆ. ಇವರು ವೈಭವೀಕರಣಗೊಂಡ ತ್ಯಾಗಮೂರ್ತಿಗಳಲ್ಲ. ಪುರುಷ ಪಾತ್ರಗಳ ಅಗತ್ಯಕ್ಕೆ ತಕ್ಕಂತೆ ರೂಪಿತವಾದ ಏಕ ಆಯಾಮದ ಗೊಂಬೆಗಳು ಅಲ್ಲ. ಲೈಂಗಿಕ ಶೋಷಣೆಗೆ ಒಳಗಾದ ಶೋಷಿತೆಯರೂ ಮಾತ್ರವೇ ಅಲ್ಲ. ಸನ್ನಿವೇಶದ ಹಿಡಿತದಲ್ಲಿ ಅಸಹಾಯಕರಾಗಿ

ನಲುಗುವಾಗಲೂ ಅವರಲ್ಲಿ ಹೊಸ ಕನಸುಗಳು ಚಿಗುರುತ್ತಿರುತ್ತವೆ. ಗೌರಿ, ವೆಂಕಟಲಕ್ಷ್ಮಿ, ಸಾವಿತ್ರಿ ಹೀಗೆಯೇ ಹಲವಾರು ಈ ಮಾತಿಗೆ ನಿದರ್ಶನಗಳು.

'ನಜೀರ ಸಾಬು' ಕಥೆಯ ಸೀತಾಲಕ್ಷ್ಮಿಯ ಆಶೆ, ಆಕಾಂಕ್ಷೆಗಳು, ಸಹಜವೂ ನ್ಯಾಯವೂ ಆಗಿರುವಂತಹವು. ಆದರೆ ೮೦ರ ದಶಕದಲ್ಲಿ ಕೂಡ, ಕರ್ನಾಟಕದ ಸಣ್ಣ ಊರೊಂದರಲ್ಲಿ ಅವು ಸ್ವಲ್ಪ ಅಡ್ಡಾದಿಡ್ಡಿಯಾಗಿ ಮತ್ತು ಧಿಮಾಕಿನದ್ದಾಗಿ ಕಾಣುತ್ತವೆ. ಸೀತಾಲಕ್ಷ್ಮಿ ಹೇಗೋ ಹೊಸ ಕಾಲವನ್ನು ಆಸೆ ನಿರೀಕ್ಷೆಗಳಿಂದ ಬಾಚಿ ತಬ್ಬಿಕೊಂಡವಳು. ಆದರೆ ಅವಳು ಮದುವೆಯಾಗಿ ಬಂದು ಸೇರಿದ ಬಿಸಲವಾಡಿ ಕೂಡ ಬದುಲಾಗುತ್ತದೆ. ತನ್ನ ಛಾತಿಯಿಂದ ಸೀತಾಲಕ್ಷ್ಮಿ ಆ ಊರನ್ನು ಸಂಬಾಳಿಸಿಕೊಂಡು ಹೋಗುವಂತೆ ಅದು ಕೂಡ ಅವಳನ್ನು ಸಂಬಾಳಿಸಿಕೊಂಡು ಹೋಗುತ್ತದೆ. ಕಥೆಯಲ್ಲಿ ಸೀತಾಲಕ್ಷ್ಮಿಯ ಆಶೆಗಳನ್ನು ವರ್ಣಿಸುತ್ತಲೇ ಅವಳ ಚೈತನ್ಯಭರಿತ ವ್ಯಕ್ತಿತ್ವವನ್ನು ಚಿತ್ರಿಸುವ ಈ ಭಾಗದ ವಿವರಗಳನ್ನು ಇಲ್ಲಿ ಗಮನಿಸಬಹುದು.

"ತೆಳ್ಳಗೆ ಬೆಳ್ಳಗೆ ಸಪೂರವಾಗಿದ್ದ ಚೂಟಿ ಸ್ವಭಾವದ ಹುಡುಗಿ ಸೀತಾಲಕ್ಷ್ಮಿ ಯಾವ ಕತೆ ಪುಸ್ತಕ ಓದಲಿ, ಯಾವ ಭಾಷಣ ಕೇಳಲಿ, ಚೆನ್ನಾಗಿರೋ ಒಂದು ಗಂಡು ಹೆಣ್ಣಿನ ಜೋಡಿ ಎದುರಿಗೆ ನೋಡಲಿ, ತಾನೂ ಯಾಕೆ ಹಾಗಿರಬಾರದು ಅಂದುಕೊಳ್ಳೋಳು. ಮನಸ್ಸು ಮಾಡಿದರೆ ಹಾಗಿರೋಕೆ ಸಾಧ್ಯ ಅಂತ ಅವಳ ಛಾತಿಯ ಸ್ವಭಾವನೂ ಹೇಳುತ್ತಿತ್ತು. ಸಂಗೀತ ಹೇಳಿಸ್ಕೋತೀನಿ, ಸೈಕಲ್ ಕಲಿತೀನಿ, ಟೈಪಿಂಗ್ ಕಲಿತೀನಿ, ಒಂದೇ ಎರಡೇ ಅವಳು ಮಾಡ್ತೀನಿ ಅಂತ ಹೇಳ್ತಾ ಇದ್ದದ್ದು. ಆದರೆ ಅವಳೊಬ್ಬಳೇ ಮಗಳಲ್ಲವಲ್ಲ ಕಪನೀಪತಯ್ಯನಿಗೆ"[೧] ಸೀತಾಲಕ್ಷ್ಮಿ ಕಪನೀಪತಯ್ಯನ ಸಾಲು ಹೆಣ್ಣುಮಕ್ಕಳಲ್ಲಿ ಒಬ್ಬಳಾದ್ದರಿಂದ ಮಾತ್ರ ಅವಳ ಆಶೆ ತಿಕ್ಕಲುತನದ್ದಾಗಿ, ಸ್ವಲ್ಪ ಗಂಡು ಬೀರಿತನದ್ದಾಗಿ ಕೂಡ ಕಾಣುವುದು.

ಎಂಭತ್ತರ ದಶಕದ ಉತ್ತರಾರ್ಧದಲ್ಲಿ ಗ್ರಾಮೀಣ ಮಂತ್ರಿಯಾಗಿದ್ದ ನಜೀರ್‌ಸಾಬ್ ಅವರು ಜಾರಿಗೆ ತಂದ ಜಿಲ್ಲಾ ಮತ್ತು ಮಂಡಲ್ ಪಂಚಾಯತ್ ವ್ಯವಸ್ಥೆ ಸೀತಾಲಕ್ಷ್ಮಿಯ ಬದುಕನ್ನು ಬದಲಿಸುತ್ತದೆ. ಮಂಡಲ್ ಪಂಚಾಯತ್ ಚುನಾವಣೆಯಲ್ಲಿ ಗೆದ್ದತಂಹ ಸೀತಾಲಕ್ಷ್ಮಿ ಸಾರ್ವಜನಿಕ ಕೆಲಸಗಳಲ್ಲಿ ಹೆಚ್ಚಿನ ಸಮಯ ವಯ್ಯಿಸಲು ಪ್ರಾರಂಭಿಸಿ ತನ್ನ ಪ್ರಭಾವವನ್ನು ಬೆಳೆಸಿಕೊಳ್ಳುತ್ತಾಳೆ. ಸರ್ಕಾರಿ ಅಧಿಕಾರಿಗಳ ಮೆಚ್ಚುಗೆಯನ್ನು ಪಡೆಯುತ್ತಾಳೆ. ಆದರೆ ಇದ್ಯಾವುದು ಅವಳ ಗಂಡನನ್ನು ಪ್ರಭಾವಿಸುವುದಿಲ್ಲ. ಒಮ್ಮೆ ಅವಳು ಶಸ್ತ್ರಚಿಕಿತ್ಸೆಗಾಗಿ ನಗರದ ಆಸ್ಪತ್ರೆಗೆ ಸೇರಿದಾಗ ಅವರಿಬ್ಬರು ಹತ್ತಿರ ಬರುವ ಸನ್ನಿವೇಶ ಒದಗುವ ಹಂತದಲ್ಲಿ ಕತೆಕೊನೆಗೊಳ್ಳುತ್ತದೆ. ಈ ಕತೆಯಲ್ಲಿ ಸೀತಾಲಕ್ಷ್ಮಿಯ ವ್ಯಕ್ತಿತ್ವದ ಚಿತ್ರಣ, ಅವಳ ನಗರವಾಸಿ ನಡವಳಿಕೆಗಳು ಹಳ್ಳಿಯಲ್ಲಿ ಮೂಡಿಸುವ ಸಂಚಲನ, ಅವಳ ವ್ಯವಹಾರ ಕುಶಲತೆ ಮುಂತಾದ ವಿಷಯಗಳನ್ನು ಬಹಳ ಸ್ವಾರಸ್ಯಕರವಾಗಿ ಚಿತ್ರಿಸಲಾಗಿದೆ.

೧೯ನೇ ಶತಮಾನದ ಉತ್ತರಾರ್ಧದಲ್ಲಿ ಬದುಕಿ, ಸಾಂಪ್ರದಾಯಿಕ ಮೇಲ್ಜಾತಿ ಸಮಾಜದ ವಿರುದ್ಧ ಸೆಟೆದು ನಿಂತು, ಹೆಂಗಸರ ಯಜಮಾನಿಕೆಯ ಪ್ರತಿರೋಧ ಇಂದಿಗೂ ಮಾದರಿಯಾಗಿ

ಉಳಿದಿರುವುದು ಪಂಡಿತಾ ರಾಮಾಬಾಯಿಯವರ ಜೀವನವನ್ನು ಹಿನ್ನೆಲೆಯಾಗಿಟ್ಟುಕೊಂಡು ಬರೆದ ಕತೆ 'ಅ-ಪಂಡಿತಾ ರಮಾಬಾಯಿ'-೧೯೯೮. ಕಥಾ ನಾಯಕಿ ಧನಲಕ್ಷ್ಮಿಯದು ಪಂಡಿತಾ ರಮಾಬಾಯಿಯವರ ಬದುಕಿಗೆ ಉಲ್ಟ ಆಗಿರುವ ಬದುಕು. ತಮಿಳುನಾಡಿನಲ್ಲಿ ಕೆಳಜಾತಿ ಎಂದು ಪರಿಗಣಿಸಲ್ಪಟ್ಟ ನಾಡರ್ ಜಾತಿಯ ತಂದೆ ಮಿಲಿಟರಿ ಸೇರಿ ಜಾತಿ ಸಮಾಜದ ಕಟ್ಟುಪಾಡುಗಳಿಂದ ತಪ್ಪಿಸಿಕೊಂಡವರು. ಕ್ರಿಶ್ಚಿಯನ್ ಆಗಿ ಮತಾಂತರಗೊಂಡು, ಇಂಗ್ಲೀಷ್ ರೀತಿ-ರಿವಾಜುಗಳನ್ನು ಬೆಳೆಸಿಕೊಂಡು, ಒಬ್ಬ ಕ್ರಿಶ್ಚಿಯನ್ ನರ್ಸನ್ನು ಮದುವೆಯಾದವರು.

ಅವರ ಒಬ್ಬಳೇ ಮಗಳು ಧನಲಕ್ಷ್ಮಿ ಜಾತಿ ಸಮಾಜದ ಬಿಸಿತಟ್ಟದ ವಾತಾವರಣದಲ್ಲಿ ಬೆಳೆದು ಎಂ.ಬಿ.ಎ. ಮಾಡುವಾಗ ಬ್ರಾಹ್ಮಣನಾದ ಶ್ರೀನಿವಾಸನನ್ನು ಪ್ರೇಮಿಸಿ ಮದುವೆಯಾಗುವುದರ ಮೂಲಕ ಜಾತಿ ಸಮಾಜದ ಕಟುತ್ವದ ಅನುಬವ ಪಡೆಯುವವಳು. ಸ್ವೈರಣೆಯಿಂದ ಬ್ರಾಹ್ಮಣ ಸಂಪ್ರದಾಯದ ಆಚಾರ-ವಿಚಾರ ಕಲಿತು ಬ್ರಾಹ್ಮಣರನ್ನು ಮೀರಿಸುವ ಬ್ರಾಹ್ಮಣಳಾಗಿ, ಅತ್ತೆಯ ವಿಶ್ವಾಸ ಸಂಪಾದಿಸಿ, ಎರಡು ಮಕ್ಕಳ ತಾಯಿಯಾಗುತ್ತಾಳೆ. ಆದರೆ ಮಗ ಶ್ರೀನಿವಾಸನ್ ಕ್ಯಾನ್ಸರ್ ರೋಗಕ್ಕೆ ತುತ್ತಾಗಿದ್ದಕ್ಕೂ, ಆತ ಧನಲಕ್ಷ್ಮಿಯನ್ನು ಮದುವೆಯಾಗಿದ್ದಕ್ಕೂ ಸಂಬಂಧ ಕಲ್ಪಿಸಿ ಅತ್ತೆ ಅವರ ಕುಟುಂಬವನ್ನು ದೂರ ಮಾಡುತ್ತಾರೆ. ಧನಲಕ್ಷ್ಮಿ ಅದನ್ನು ನುಂಗಿಕೊಂಡು ಸಂಪ್ರದಾಯಸ್ಥೆಯಾಗಿಯೇ ಬದುಕು ಮುಂದುವರೆಸುತ್ತಾರೆ.

'ಮುದುಕಿ ಹೇಳಿದ ಸರ್ ಎಂ.ವಿ. ಕಥೆ'ಯು ಎಂ.ವಿ. ಅವರ ಸ್ಮರಣೆಯ ನೆಪದಲ್ಲಿ ಊರಿನ ಗತಿಯನ್ನು ಹಿಡಿಯುತ್ತದೆ. ಸಭೆಯಲ್ಲಿ ಭಾಗಮ್ಮನ ಪ್ರವೇಶವಾಗಿ ಅವಳ ಬದುಕಿನೊಂದಿಗೆ ಬೆಳೆಯುತ್ತದೆ. ಒಳಗಿನ ತಂತಿಯನ್ನು ಸವರುತ್ತದೆ. ಭಾಗಮ್ಮ ದಿವಾನರನ್ನು ಕಾಣಲು ಹೂಡುವ ಹೂಟ ನವಿರು ಹಾಸ್ಯದ ನಗೆ ತಂದರೂ ಆ ನಗೆಯ ಕೊನೆಯ ತರಂಗ ನಿಲ್ಲುವಾಗ್ಗೆ ಮಾಡುವುದು ಅವಳ ಪಡಿಪಾಟಲು ಆ ಬಗ್ಗೆ ಅಯ್ಯೋ ಅನ್ನಿಸುವ ಅವಳ ದೀನಾವಸ್ಥೆ, ಅವಳ ದೀನಾವಸ್ಥೆ ತಂದ ಕಳವಳ ಕರಗುವುದು, ಅವಳು ಹತ್ತು ರೂಪಾಯಿ ಮನಿಯಾರ್ಡರ್ ಪಡೆದು ಕೆಸ್ತೂರಿನ ಸಂತೆಯಲ್ಲಿ ರಾಗಿಕಲ್ಲು ತೆಗೆದುಕೊಂಡು ಬಂದ ನಂತರ.

ಭಾಗಮ್ಮ ತನ್ನ ಗಂಡ ತಿಪ್ಪಯ್ಯನ ಉಸಾಬರಿಗಳಿಂದ ನಷ್ಟ ಅನುಭವಿಸಿ ನೊಂದವಳು. ಆ ನೋವನ್ನು ಹಂಚಿಕೊಳ್ಳಲು ಅವಳಿಗಿದ್ದ ಒಂದೇ ಆಸರೆ ಬೀಸೋಕಲ್ಲು. ಅದು ಹೋದ ಮೇಲೆ ಅವಳಲ್ಲಿ ಉಳಿಯೋದು ಅಸಹಾಯಕತೆ. ಈ ಅಸಹಾಯಕತೆಯನ್ನು ಅವಳು ನೀಗಿಕೊಳ್ಳೋದು ಬೀಸುವ ಕಲ್ಲನ್ನು ಪಡೆದ ಮೇಲೆಯೂ ಈ ಹಿಂದಿನ, ಆ ಮುಂದಿನ ಅವಳ ಗೊಣಗು, ಗೋಳಾಟ ಅವಳದ್ದೇ ಪ್ರಾರಬ್ಧ ಅನ್ನಿಸಿದರೂ ಅದರ ಧ್ವನಿಯ ಎರಚು ಸಮಾಜದ ಮೇಲೆಯೇ ಆದರೆ ಅದು ಹೊರಬೀಳುವುದು ಬೀಸುವ ಕಲ್ಲಿನ ತಿರುಗು ಶಬ್ದದ ಮೂಲಕವಷ್ಟೇ.

ಬೀಸೋಕಲ್ಲು ಭಾಗಮ್ಮನ ಬದುಕಿನ ಗತಿಗೆ ಎಷ್ಟು ಮುಖ್ಯವಾಗಿತ್ತೋ ತನ್ನ ಎದೆಗುಂದಿ ತೋಡಿಕೊಳ್ಳಲು ಆಪ್ತ ಸಂಗತಿಯಾಗಿ ಅಷ್ಟೇ ಮುಖ್ಯವಾಗುತ್ತದೆ. ಇದನ್ನು ಮರಳಿ ಪಡೆಯಲು

ಕಾರಣರಾದ ವಿಶ್ವೇಶ್ವರಯ್ಯನವರಲ್ಲಿ ಅವಳದು ತುಂಬು ಕೃತಜ್ಞತೆ. "ವಿಶ್ವೇಶ್ವರಯ್ಯನವರು ಇಡೀ ಭೂಮಿಗೆ ದಿವಾನರಾಗಬೇಕು, ಆಗ್ತಾರೆ. ಅವರ ಖಾಯಿಲೆ ತಾಯಿಗೆ ಸತ್ತು ಸ್ವರ್ಗ ಸಿಗುತ್ತೆ. ವಿಶ್ವೇಷ್ವರಯ್ಯನವರಿಗೆ ಹೊಸ ಸಂಸಾರ ಬರುತ್ತೆ. ಮನೆ ತುಂಬಾ ಗಂಡು ಮಕ್ಕಳಾಗುತ್ತೆ."[೨]

'ನಿಜ ಕವಲು' ಕತೆಯಲ್ಲಿ ರಾತ್ರಿ ಬಸ್ಸಿನಲ್ಲಿ ಕಂಡಕ್ಟರ್ ಆಗಿ ಕೆಲಸ ಮಾಡುತ್ತಿರುವ ರಾಜಮ್ಮ ತನ್ನ ನೌಕರಿಯಲ್ಲಿರುವ ಕಷ್ಟ, ಕಿರುಕುಳ ಶೋಷಣೆಗಳನ್ನು ಸಹಿಸುತ್ತಾ ಜತೆಗೆ ಮನೆವಾರ್ತೆಯ ಸಮಸ್ಯೆಗಳನ್ನು ದಿಟ್ಟತನದಿಂದ ನಿಭಾಯಿಸುತ್ತಾ ಬದುಕನ್ನು ಕಟ್ಟಿಕೊಳ್ಳುವ ಪರಿ ಮನಮುಟ್ಟುವಂತೆ ಮೂಡಿಬಂದಿದೆ. "ರಾತ್ರಿಯಿಡೀ ಬಸ್ಸಿನಲ್ಲಿ ದುಡಿದು, ದಣಿದು ಮನೆಗೆ ಬಂದಾಗ, ಗಂಡ ಮತ್ತು ಮಗ ಗೊರಕೆ ಹೊಡೆಯುತ್ತಿರುತ್ತಾರೆ. ಹೊರಗಡೆ ಬಾಗಿಲಿನ ಚಿಲಕಕ್ಕೆ ಸಿಕ್ಕಿಸಿರುವ ಹಾಲಿನ ಪ್ಯಾಕೆಟ್ಟನ್ನು ಕೂಡ ತೆಗೆದಿಟ್ಟಿರುವುದಿಲ್ಲ"[೩] ಎನ್ನುವಂಥ ಆಕೆಯ ಮಾತುಗಳು ದುಡಿಯುವ ಮಹಿಳೆಯ ಸ್ಥಿತಿಯನ್ನು ಸಮರ್ಥವಾಗಿ ಸಂಕೇತಿಸುತ್ತದೆ.

ಕಂಡಕ್ಟರ್ ರಾಜಮ್ಮನ ವ್ಯಕ್ತಿತ್ವದ ನಿಜದಲ್ಲಿ ಆಧುನಿಕ ಬದುಕಿನ ಕವಲು ನಮಗೆ ಕಾಣುವುದು. ಆಕೆ ಒಬ್ಬ ಗಟ್ಟಿವಾಣಗಿತ್ತಿ, ಧೈರ್ಯದಿಂದ ತನ್ನ ವೃತ್ತಿ ಮತ್ತು ಸಂಸಾರದ ಆತಂಕಗಳನ್ನು ಎದುರಿಸುತ್ತಿದ್ದಾಳೆ. ಸಮರ್ಥವಾಗಿ ನಿರ್ವಹಿಸುತ್ತಿದ್ದಾಳೆ. ಆರಂಭದಲ್ಲಿ ನಿರೂಪಕನಿಗೆ ರೇಗುವ, ಡಿಪ್ಪೋ ಸುಪರಿಡೆಂಟ್‌ಗೇ ದಬಾಯಿಸುವ ರಾಜಮ್ಮ ಕಠಿಣ ನಿಲುವು ಸಡಿಲಾಗುತ್ತ ನಿರೂಪಕನೊಂದಿಗೆ ಮಾತಾಡುತ್ತ ತನ್ನ ಬದುಕನ್ನು ತೆರೆಯುತ್ತಾಳೆ. ಆಕೆಯ ಬದುಕಿನ ಅನಾವರಣದಲ್ಲಿ ದುಡಿಯುವ ಮಹಿಳೆಯ ದೈನಂದಿನ ಹೋರಾಟದ ಸ್ವರೂಪ ತಿಳಿದುಬರುತ್ತದೆ.

'ನನ್ನ ಸೊಸೆಯ ಕಾಮನಬಿಲ್ಲು' ಕಥೆಯ ಕಥೆಯು, ಸಂತಾನದ ಸಾತತ್ಯವನ್ನು ಹಂಬಲಿಸುವ ಹೆಣ್ಣಿನ ಕಥೆಯು ಹೌದು. ಕರುಳ ಬಳ್ಳಿಯ ಸಾವಿನ ಉಪಸ್ಥಿತಿಯಲ್ಲಿ ವಂಶೋದ್ಧಾರಕ್ಕೆ ಮಕ್ಕಳನ್ನು ಪಡೆಯುವ ಸಂಭೋಗ ಬಯಕೆಯೂ ಅದಕ್ಕೆ ಅಗತ್ಯವಾದ ಫಲವಂತಿಕೆಯ ಕುರುಹಾದ ಮುಟ್ಟು–ರಕ್ತಸ್ರಾವಗಳ ಚಿತ್ರಣವು ಆಕೆಯ ಮಾತುಗಳಲ್ಲಿ ಕಂಡುಬರುತ್ತವೆ. ಒಬ್ಬನೇ ಮಗ ಅರವಿಂದನನ್ನು ಅಕಾಲಮೃತ್ಯು ಕೊಂಡೊಯ್ದುಬಿಟ್ಟಾಗ ಕಥಾನಾಯಕಿ ಅನುಭವಿಸುವುದಿದು. ಆದರೆ ಸೊಸೆ ಗರ್ಭಿಣಿ ಎನ್ನುವುದರ ಅರಿವಿನಿಂದ ಈ ವಿದ್ಯಮಾನಗಳೆಲ್ಲ ಕಥೆಯ ಭಿತ್ತಿಯಿಂದ ಆಚೆ ಹೋಗಿಬಿಡುತ್ತವೆ. ಹುಟ್ಟಿನಿಂದ ಸಾವನ್ನು ಮೀರುವ ಅಂತಃಪಠ್ಯವೊಂದು ಇಲ್ಲಿ ಪ್ರತ್ಯಕ್ಷವಾಗಿ ಬಿಡುತ್ತದೆ.

ಆಕೆಯ ಸೊಸೆ ಕರಾವಳಿ ಕಡೆಯ ಶಾರದಾ ಅವಳು ಮಗುವನ್ನು ಹೆತ್ತುಕೊಡುತ್ತಾಳೆ. ಅದು ಸತ್ತವನ ಸ್ಮೃತಿಯ ನೆಪವಾಗಿ ಅರವಿಂದ ಎಂದೇ ಹೆಸರುಗೊಂಡದ್ದು. ಬಳಿಕ ದೂರದ ಗೋವೆಗೆ ಕೆಲಸಕ್ಕೆ ಹೋಗುತ್ತಾಳೆ. ಶಾರದಾ ಅವಳ ದುಃಖದ ಹೃದಯ ಹೊಸ ಆತ್ಮೀಯರಿಗಾಗಿ ಹುಡುಕುತ್ತದೆ. ಅದವಳಿಗೆ ದೊರೆಯುವುದು ಕೂಡ. ಆ ಮದುವೆಗೆ ಆಕೆ ಹೋಗುತ್ತಾರೆ. ಆದರೆ ಆಕೆಯ ಗಂಡ ತನಗದು ಸಮ್ಮತವಾದರೂ ತಾನು ಅಷ್ಟು ನಿರ್ಲಿಪ್ತನಲ್ಲ ಎಂಬ ಕಾರಣ

ಕೊಟ್ಟು ಉಳಿದು ಬಿಡುತ್ತಾರೆ. ಕಥೆಯನ್ನು ಅನುಭವಿಸುವವ ಕತೆಯ ಹಿಂದಿನ ವೇದನೆಯನ್ನು ಅನುಭವಿಸುವುದಿಲ್ಲ ಎನ್ನುವ ಅಭಿಪ್ರಾಯವೊಂದು ಇಲ್ಲಿ ಪುನರುಕ್ತಗೊಳ್ಳುತ್ತದೆ. ಆ ನೋವಿನ ಬದಲಿಗೆ ಬದುಕು ಇಟ್ಟುಕೊಂಡಿರುವ ಮಾರ್ದವತೆಯ ರಂಗುಗಳು ಶಾರದಾ ತನ್ನ ಅತ್ತೆಗೂ, ಅತ್ತೆ ನಿರೂಪಕನಿಗೂ ಕೊಟ್ಟಿದ್ದು. ಬದುಕನ್ನು ಕುರಿತು ಕಥೆಗಾರ ಸತ್ಯನಾರಾಯಣ ರೂಪಿಸಿಕೊಂಡಿರುವ ಮನೋಧರ್ಮವೂ ಇಂಥದ್ದೇ.

'ಮೊದಲ ಆ ದಲಿತ' ಕತೆಯ ಮುಖ್ಯ ಪಾತ್ರ ಮಾಧವಿ ದಲಿತ ಮಹಿಳೆ. ತನಗೆ ದಕ್ಕಬೇಕಾದ ಹಕ್ಕುಗಳೆಲ್ಲವನ್ನು ಸಾಂವಿದಾನಿಕವಾಗಿ ಪಡೆದವಳು. ಆದರೆ ಅವಳ ವ್ಯಕ್ತಿತ್ವ ಚಲನಶೀಲವಾಗಿ ಬೆಳೆಯುತ್ತಲೇ ಹೋದದ್ದು ಮಾನವ ಸಹಜ ಸಂಶೋಧನೆಯ ಆಕಾಂಕ್ಷೆಗಳಿಂದ ಆಧುನಿಕ ಜೀವನಕ್ರಮ ಆತ್ಮ ಸ್ಥೈರ್ಯದ ನಿಲುವು, ಸ್ತ್ರೀ ಸೌಂದರ್ಯದ ಬಗೆಗಿನ ಸಮಕಾಲೀನ ಕಲ್ಪನೆಗಳಿಗೆ ಸ್ಪಂದನ ಪ್ರಕೃತಿ ಸಹಜವಾದ ಮಾತೃತ್ವದ ಹಂಬಲ. ಕುಟುಂಬದ ಜವಾಬ್ದಾರಿ, ಮಾನಸಿಕವಾಗಿ ಅಸ್ವಸ್ಥನಾಗಿರುವ ಮಗನನ್ನು ಕಾರುಣ್ಯದಿಂದ ಕಾಪಾಡಬೇಕಾದ ಕ್ಯಾಥೋಲಿಕ್ ಸಂವೇದನೆಯನ್ನು ಬಯಸುವ ಮಾತೆಯ ಪಾತ್ರ ಈ ಎಲ್ಲವನ್ನು ಆಕೆ ನಿಭಾಯಿಸಬಲ್ಲಳು. ಸಮಾಜದಲ್ಲಿ ಒಳಸುಳಿಗಳಲ್ಲಿ, ಕುಹಕಗಳಲ್ಲಿ ಸುಲಭವಾಗಿ ಸಿಕ್ಕಿಹಾಕಿಕೊಳ್ಳಬಹುದಾಗಿದ್ದರೂ ಅವೆಲ್ಲವನ್ನು ಮೀರಿ ಕೇವಲ ದಲಿತ ಮಹಿಳೆಯ ಪ್ರತಿನಿಧಿಯಾಗದೆ ತನ್ನ ಕಾಲದ ಎಲ್ಲ ಮನುಷ್ಯರ ಮಾದರಿಯಂತೆ ಕಾಣಬಲ್ಲಳು.

ಸಮಾಜದಲ್ಲಿ ಈಗಾಗಲೇ ಸ್ಥಾನಮಾನಗಳನ್ನು ಗಳಿಸಿಕೊಂಡಿರುವವರಿಗೆ ಇರುವ ಹಾಗೆ ಸಮಾನತೆಯ ಪರಿಕಲ್ಪನೆಗಳಲ್ಲಾಗಲೀ, ಆಚರಣೆಗಳಲ್ಲಾಗಲೀ, ಪಡೆಯುವುದರಲ್ಲಾಗಲೀ ಅವಳಿಗೆ ಪೂರ್ವಗ್ರಹಗಳಿಲ್ಲ. ಸಂಕೋಚಗಳಿಲ್ಲ. ಸಾಮಾಜಿಕ ಬದಲಾವಣೆಯಲ್ಲಿ ಗಂಡ ಬೌದ್ಧಿಕವಾಗಿ ಮಾತ್ರ ಸಮಾನತೆಯನ್ನು ಅರಸುತ್ತಿದ್ದರೆ, ಇವಳು ಲೌಕಿಕತೆಯಲ್ಲಿ ಮತ್ತು ಅಂತರಂಗದ ಬದುಕಿನಲ್ಲಿ ಎರಡರಲ್ಲೂ ಸಮನತೆಯ ಮೌಲ್ಯವನ್ನು ಕಾಣಿಸುವವಳು. ದಲಿತರನ್ನು, ಮಹಿಳೆಯರನ್ನು ವರ್ಗಗಳಾಗಿ, ಸಮುದಾಯದಲ್ಲಿ ಬೇರೆಯಾಗಿಯೇ ನೋಡುವಂತೆ ಒತ್ತಾಯಿಸುವ ಸಮಾಜದ ಮಿತಿಗಳ ಕಡೆಗೆ ಸತ್ಯನಾರಾಯಣರವರು ಈ ಕತೆಯಲ್ಲಿ ನಮ್ಮ ಗಮನ ಸೆಳೆಯುತ್ತಾರೆ.

'(ನನ್ನ ಕಥೆಗೆ) ಇನ್ನೊಬ್ಬ ವೇಶ್ಯೆಯ ಪ್ರಶಸ್ತಿ' ಎಂಬ ಕತೆಯಲ್ಲಿ ಹುಲಿಯೂರು ದುರ್ಗದ ಹದಿಹರೆಯದ ಲಕ್ಷ್ಮಿ ತನ್ನ ಕುಡುಕ ಅಪ್ಪನಿಂದ ಅಲಕ್ಷಿಸಲ್ಪಟ್ಟು ಸ್ವತಃ ಮಾವನಿಂದಲೇ ಕೊಲ್ಕತ್ತಾದಲ್ಲಿ ವೇಶ್ಯಾವೃತ್ತಿಗೆ ದೂಡಲ್ಪಡುತ್ತಾಳೆ. ಅಲ್ಲಿಂದ ತಪ್ಪಿಸಿಕೊಂಡು ಅದೇ ಊರಿನಲ್ಲಿ ಪೊಲೀಸ್ ಅಧಿಕಾರಿಯೊಬ್ಬರ ಮನೆಗೆಲಸಕ್ಕೆ ಸೇರಿದಾಗ ಲೇಖಕರ ಕಾದಂಬರಿಯನ್ನು ಅವಳು ಆಸಕ್ತಿಯಿಂದ ಓದುತ್ತಾಳೆ. ಹಾಗೂ ಲೇಖಕರಿಗೆ ಪತ್ರವನ್ನು ಬರೆಯುತ್ತಾಳೆ.

ಗದಗಿನ ಸುಜಾತಾ ಹೈಸ್ಕೂಲು ಓದುತ್ತಿದ್ದಾಗ, ಸಹವಾಸ ದೋಷದಿಂದಾಗಿ ತಪ್ಪು ಹಾದಿ ಹಿಡಿದು ನಂತರ ಎಷ್ಟೇ ಪ್ರಯತ್ನ ಪಟ್ಟರೂ ಬಂಧುಬಳಗದವರೇ ಸರಿ ಹಾದಿಗೆ ಬರಲು

ಬಿಡುವುದಿಲ್ಲ. ಹೀಗಾಗಿ ಮೊರಬದ ಸಾಹುಕಾರನ ಇಟ್ಟುಕೊಂಡ ಹೆಂಡತಿಯಾಗುತ್ತಾಳೆ. ಇವಳು ಲೇಖಕರ ಕಾದಂಬರಿಗಳನ್ನು ಓದಿ ಪತ್ರ ಬರೆಯುತ್ತಾಳೆ. ಲೇಖಕರು ಈ ಇಬ್ಬರು ವೇಶ್ಯೆಯರ ಪ್ರಶಸ್ತಿ ಪಡೆದುಕೊಂಡೆ ಎಂದು ಹೇಳಿಕೊಳ್ಳುತ್ತ ಅವರ ಬಾಳನ್ನು ಇಣುಕಿ ಅಲ್ಲಿನ ಶೋಷಣೆಗಳನ್ನು ಪರಿಚಯಿಸುತ್ತಾರೆ.

"ಮುಂಬೈನಲ್ಲಿ ಈಚೆಗೆ ವೇಶ್ಯೆಯರ ಹಾವಳಿ ಹೆಚ್ಚಾಗಿದೆ. ಹೀಗಾಗಲು ರಾತ್ರಿ ಹೋಟೆಲ್ ಮತ್ತು ಬಾರ್‌ಗಳಲ್ಲಿ ಸೇವೆಗೈಯುವ, ನೃತ್ಯ ಮಾಡುವ ಹರೆಯದ ಹುಡುಗಿಯರೇ ಕಾರಣ ಎಂದು ಹೊಸ ತರುಣ ಗೃಹಮಂತ್ರಿಗೆ ಅನಿಸಿ, ಇನ್ನು ಮುಂದೆ ರಾತ್ರಿ ಹತ್ತು ಗಂಟೆಯ ನಂತರ ಇತರ ಸೇವೆ ಚಟುವಟಿಕೆಗಳನ್ನು ನಿಷೇಧಿಸಬೇಕು"[೪] ಎಂದು '(ನನ್ನ ಕಥೆಗೆ) ಇನ್ನೊಬ್ಬ ವೇಶ್ಯೆಯ ಪ್ರಶಸ್ತಿ' ಎಂಬ ಕಥೆ ಆರಂಭ ಮಾಡುತ್ತ ಬೇರೆ ಬೇರೆ ಕಾರಣಗಳಿಂದ ಹೆಣ್ಣುಮಕ್ಕಳು ವೇಶ್ಯಾವೃತ್ತಿಗೆ ದೂಡಲ್ಪಡುತ್ತಾರೆ ಎಂದು ಹಳೆಯ ವಸ್ತುವನ್ನು ತಮ್ಮ ಅನುಭವಕ್ಕೆ ಬಂದ ಹಾಗೆ ಚಿತ್ರಿಸಿದ್ದಾರೆ.

'ಚಿಕ್ಕತಾಯಿ' ಕಥೆಯಲ್ಲಿ ಒಬ್ಬ ಹಿರಿಯ ಅಧಿಕಾರಿಯಾದ ನಿರೂಪಕ ಈ ಕತೆಯನ್ನು ನಿರೂಪಿಸುತ್ತಾನೆ. ಗುಡ್ಡಗಾಡಿನ ಬುಡಕಟ್ಟಿಗೆ ಸೇರಿದ ಆದರೆ ಕ್ರಿಶ್ಚಿಯನ್ ಆಗಿ ಮತಾಂತರವಾಗಿದ್ದ ಜೆ.ಪಿ. ಎಂಬ ಯುವತಿ ತನ್ನ ಆಫೀಸರನ ಲೈಂಗಿಕ ಚೇಷ್ಟೆಗಳಿಂದ ಬೇಸತ್ತು ಬೇರೆ ವಿಭಾಗಕ್ಕೆ ವರ್ಗ ಬಯಸಿದರೆ ಹಿರಿಯ ಅಧಿಕಾರಿ ಆ ಆಫೀಸರನ್ನೇ ದೂರದ ಊರಿಗೆ ವರ್ಗಮಾಡಿಬಿಡುತ್ತಾನೆ. ಆದರೆ ತನ್ನನ್ನು ಸತಾಯಿಸುತ್ತಿದ್ದ ಆಫೀಸರನ ಕೌಟುಂಬಿಕ ತಾಪತ್ರಯಗಳನ್ನು ಬಲ್ಲ ಜೆ.ಪಿ. ತನ್ನನ್ನು ಬೇರೆ ವಿಭಾಗಕ್ಕೆ ವರ್ಗ ಮಾಡಿದರೆ ಸಾಕು, ಆಫೀಸರನ ವರ್ಗ ರದ್ದು ಮಾಡುವಂತೆ ಹಿರಿಯ ಅಧಿಕಾರಿಯನ್ನು ಕೈಮುಗಿದು ಕೇಳಿಕೊಳ್ಳುತ್ತಾಳೆ. ಆಕೆಗೆ ಮುಯ್ಯಿ ಅಥವಾ ಸೇಡಿನ ಅವಕಾಶ ಸಿಕ್ಕಾಗಲೂ ಆಕೆ ಕಾರುಣ್ಯವನ್ನು ತೋರುವಂಥವಳು. 'ಚಿಕ್ಕತಾಯಿ' ಎಂಬ ಶೀರ್ಷಿಕೆ ಇಲ್ಲಿ ಔಚಿತ್ಯವನ್ನು ಕಂಡುಕೊಳ್ಳುತ್ತದೆ.

ಈ ಚಿಕ್ಕ ತಾಯಿ ಮಾಸ್ತಿಯವರ ಹಳೆಯ ಕಾಲದ ಚಿಕ್ಕವ್ವ ಅಲ್ಲ. ತನ್ನ ಕಿರಿಯ ಮಲ ಮಗನನ್ನು ಅತ್ಯಂತ ಪ್ರೀತಿಯಿಂದ ಜೋಪಾನ ಮಾಡುತ್ತಿದ್ದ ಚಿಕ್ಕವ್ವನಿಗೆ ಹಿರಿಯ ಮಲಮಗ ತನ್ನ ಲೈಂಗಿಕ ತೃಷೆಯನ್ನು ವ್ಯಕ್ತಪಡಿಸಿದಾಗ ಆಕೆಗೆ ಯಾವ ನೆರವು ಇಲ್ಲದ ಸಂದರ್ಭದಲ್ಲಿ, ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಆದರೆ ಸತ್ಯನಾರಾಯಣ ಜೆ.ಪಿ. ಎಂಬ ಆಧುನಿಕ ಯುವತಿ ಸಮಸ್ಯೆಯನ್ನು ಉಪಾಯದಿಂದ ಎದುರಿಸುತ್ತಲೆ ಎದುರಾಳಿಗೆ ಕ್ಷಮೆ ಮತ್ತು ಕರುಣೆ ತೋರಿಸುವಂಥ ವಾತ್ಸಲ್ಯಮಯಿ. ಆಕೆಯ ನಡವಳಿಕೆ, ಕ್ರಿಯೆಯ ಮೂಲಕವೇ ತಾಯ್ತನವನ್ನು ಲೇಖಕ ಹೊಳೆಯಿಸುತ್ತಾರೆ.

'ಇನ್ನೊಂದು ಸೈಕಲ್ ಸಾಕು' ಕತೆಯ ಕುಸುಮ ಇವಳಿಗೆ ಬುಧವಾರದಿಂದ ಶುಕ್ರವಾರದವರೆಗೆ ಗಂಡ ಮಕ್ಕಳ ಊಟ, ತಿಂಡಿ, ಕ್ಯಾರಿಯರ್, ನೀರು ಹಿಡಿಯುವ, ಶಾಲೆಗೆ ಹಾಜರಾಗುವ

ಕೆಲಸದ ಜೊತೆಗೆ ಸೈಕಲ್ ಇಲ್ಲದೆ ಬಸ್ಸು ಹಿಡಿಯುವ ಕೆಲಸ. ಅವಳ ಹೊರಗಿನ ದುಡಿಮೆ, ಮೈಲುಗಟ್ಟಲೆ ಸೈಕಲ್ ತುಳಿದು ಶಾಲೆಗೆ ದುಡಿಯಲು ಹೋಗುವ ಹುಮ್ಮಸ್ಸು, ಈ ಎಲ್ಲವೂ ಒಂದು ರಿಚುಯೆಲ್ ಎನ್ನುವಂತೆ ದಾಖಲುಗೊಂಡಿದೆ. 'ಸದ್ಯಕ್ಕೆ ಇನ್ನೊಂದು ಸೈಕಲ್ ತೆಗೆದುಕೊಳ್ಳಬೇಕೆಂದು ಅವಳ ಕನಸು. ವಾರದ ಮೂರು ದಿನಗಳಲ್ಲಿ ಅವಳ ಮಗ ತೆಗೆದುಕೊಂಡು ಹೋಗಿ ಬಿಡುವುದರಿಂದ ಅವಳು ಸೈಕಲ್ಲಿನಿಂದ ವಂಚಿತಳಾಗುತ್ತಾಳೆ. ಅವಳ ದುಡಿಮೆಯ ಬಗೆಗಿನ ಪ್ರೀತಿಯ ಪ್ರತೀಕ ಈ ಸೈಕಲ್. ಕೆಳ ಮಧ್ಯಮ ವರ್ಗದ ಅವಳಿಗೆ ಸೈಕಲ್ಲಿನ ಕನಸು ಮಾತ್ರ ಕಾಣಲು ಸಾಧ್ಯವಿದೆ. ಇದು ಸ್ವಾತಂತ್ರ್ಯದ ಪ್ರತೀಕ ಕೂಡ.

ಅವಳ ಈ ಸ್ವಾತಂತ್ರ್ಯದ ಪ್ರೀತಿಯನ್ನು ಮನೆಯಾಚೆಯ ದುಡಿಮೆಯ ಪ್ರೀತಿಯನ್ನು "ಮತ್ತೆ ಸೈಕಲ್ ಹತ್ತಿ ಪೆಡಲ್ ಒತ್ತಿದರೆ ಕುಸುಮಳಿಗೆ ಅದೆಷ್ಟೋ ಖುಷಿ. ಮಾಗಡಿ ಕ್ರಾಸ್, ಹೊಸಹಳ್ಳಿ ರಸ್ತೆ, ಎಲ್ಲವು ಒಂದರ ಹಿಂದೆ ಒಂದು ಬಂದು ಹಿಂದೆ ಹೋಗುತ್ತಲೇ ಇರುತ್ತವೆ. ಅವಳಿಗೆ ಅದು ಯಾವುದೂ ಗೊತ್ತಾಗುವುದಿಲ್ಲ. ಅವಳಾಯಿತು ಅವಳ ಸೈಕಲ್ ಸವಾರಿಯಾಯಿತು. ಅಷ್ಟೊಂದು ಏಕಾಗ್ರತೆ, ಅಷ್ಟೊಂದು ತನ್ಮಯತೆ ಅವಳದು ಎಷ್ಟೆಂದರೆ ಸೈಕಲ್ ಹೊಡೆಯುತ್ತಿರುವ ವ್ಯಕ್ತಿ ತಾನೇ ಎಂಬುದು ಕೂಡ ತಿಳಿಯದಷ್ಟು, ಆದರೂ ಅವಳ ಏದುಸಿರು ಮಾತ್ರ ಅವಳಿಗೆ ಆಗಾಗ್ಗೆ ಕೇಳಿಸುತ್ತಿರುತ್ತದೆ."[೫]

ಅವಳಿಗೆ ಸ್ವಾತಂತ್ರ್ಯ ತಂದುಕೊಟ್ಟಿರುವುದು ದುಡಿಮೆಯ ಸಾಧನವಾಗಿರುವ ಸೈಕಲ್. ದುಡಿಮೆ ಮಾತ್ರ ಹೆಣ್ಣಿಗೆ ಸ್ವಾತಂತ್ರ್ಯ ತಂದುಕೊಡಬಲ್ಲದು ಎಂಬುದನ್ನು ಇದು ಸಾರುತ್ತದೆ. ಅಲ್ಲದೆ ಈ ಸೈಕಲ್ ತನಗೆ ಇಷ್ಟ ಬಂದ ರೀತಿಯಲ್ಲಿ ತನ್ನದೇ ಸಮಯಕ್ಕೆ, ಯಾವ ನಿರ್ಬಂಧವೂ ಇಲ್ಲದಂತೆ ಚಲಿಸುವ ಸ್ವಾತಂತ್ರ್ಯವನ್ನು ಕುಸುಮಳಿಗೆ ದೊರಕಿಸಿಕೊಟ್ಟಿದೆ.

ಕಥೆಗಳಲ್ಲಿ ಸಾವಿನ ಚಿತ್ರಣ

ಬದುಕನ್ನು ಕುರಿತ ಯಾವ ವ್ಯಾಖ್ಯಾನವೂ ನಿಜದಲ್ಲಿ ಸಾವನ್ನು ಕುರಿತ ವ್ಯಾಖ್ಯಾನವು ಹೌದು. ಬದುಕನ್ನು ಪ್ರೀತಿಸಬೇಕು ಎನ್ನುವುದರ ಅರ್ಥ ಸಾವನ್ನು ಘನತೆಯಿಂದ ಒಪ್ಪಬೇಕು ಎನ್ನುವುದೇ ಅಪ್ರಜ್ಞಾಪೂರ್ವಕವಾಗಿ ಎಲ್ಲ ಮನುಷ್ಯ ಜೀವಿಗಳ ಒಳಗೂ ಸಾವನ್ನು ಕುರಿತಂತೆ ಇರಬಹುದಾದ ಆತಂಕ, ನಿರಾಕರಣೆಯ ಭಾವ, ಅದನ್ನು ಮತ್ತೆ ಮತ್ತೆ ಹಿನ್ನೆಲೆಗೆ ತಳ್ಳುವ ಪ್ರಯತ್ನ ಒಪ್ಪಿಕೊಳ್ಳುವಾಗಲೂ ಸಾಮಾನ್ಯವಾಗಿ ಅನುಸರಿಸುವ ವಿಧಿತತ್ವ ಈ ಎಲ್ಲವುಗಳನ್ನು ಬಿಟ್ಟು ಸಾವಿನ ಬಗ್ಗೆ ಚಿಂತಿಸುವುದೂ ಮಾತನಾಡುವುದು ಒಂದು ಚೇತೋಪಹಾರಿಯಾದ ಅನುಭವವಾಗಬಲ್ಲದು ಎನ್ನುವುದಕ್ಕೆ ಸತ್ಯನಾರಾಯಣರ ಕತೆಗಳು ಅತ್ಯುತ್ತಮ ಉದಾಹರಣೆಗಳಾಗಿವೆ.

'ಸಾವೆಂಬ ಕತೆಯೊಡನೆ' ಕಥೆಯಲ್ಲಿ ಪ್ರಸಿದ್ಧರ, ಸಾಮಾನ್ಯರ ಸಾವಿದೆ. ಈ ಇಬ್ಬರ ಸಾವಿನ ಕಥಾ ಚಿತ್ರಗಳು ಮೂಡುವುದು ಗಾದೆ ಶ್ರೀಕಂಠಯ್ಯ, ನಿರೂಪಕನ ಗೆಳೆಯ ಶ್ರೀನಿವಾಸರ ಗ್ರಹಿಕೆಯ ಕಣ್ಣು ಮತ್ತು ಮಾತುಗಳ ಮೂಲಕ, ಈ ಕಣ್ಣುಗಳ ಮನಸ್ಸು ಹಾಗೂ ಮಾತು

ಸಹಜವಾಗಿಯೆ ಒಂದಲ್ಲ. ಶ್ರೀಕಂಠಯ್ಯ ಹೇಳುವ ಸಾವಿನ ಕಥೆಗಳಲ್ಲಿ ಸತ್ತ ಮೇಲೂ ನಾಲಕ್ಕು ಜನರ ಬಾಯಲ್ಲಿ ಇರುವಂತಾಗಬೇಕು ಅನ್ನುವ ಜಾನಪದರ ಆಶಯ ಕಂಡರೆ, ಶ್ರೀನಿವಾಸ ಹೇಳುವ ಸಾವಿನ ಕತೆಯಲ್ಲಿ ಸಾವನ್ನು ಸುಖ ಮಾಡುವ, ಇಲ್ಲವೆ ಸಲೀಸು ಮಾಡುವ ಉದ್ದೇಶಿತ ಪ್ರಯತ್ನ ಕಾಣುತ್ತದೆ.

ಶ್ರೀಕಂಠಯ್ಯ ಕಥೆಯಲ್ಲಿ ಹೆಚ್ಚಾಗಿ ಸಾವಿನ ಮೂಲಕವಾದ ಕಥೆಗಳಲ್ಲಿ ಬದುಕಿನ ಒಂದು ತಿಳುವಳಿಕೆಯನ್ನು, ತನ್ಮೂಲಕ ಹುಟ್ಟುವ ಒಂದು ನೀತಿಯನ್ನು ಹುಡುಕಿದರೆ, ಶ್ರೀನಿವಾಸ ಸಾವಿನ ರೀತಿಗೆ ತನ್ನ ಮೂಗಿಗೆ ನೇರವಾದ ಒಂದು ಮಾದರಿಯನ್ನು ರೂಪಿಸಲು ಹವಣಿಸುತ್ತಾನೆ. ಈ ಎರಡೂ ಅರ್ಥವಿಲ್ಲದ್ದು ಅನ್ನಿಸಿ ಬಿಡುತ್ತಲೆ ಸಾವಿನ ನಿಗೂಢತೆಯನ್ನು ಗುಂಗಾಗಿ ಉಳಿಸುತ್ತದೆ.

ಸಾವಿನ ಮೂಲಕ ಲೌಕಿಕ ಬದುಕನ್ನು ಶೋಧಿಸುವ ಪ್ರಯತ್ನದಲ್ಲಿ ಕೆಲವೊಮ್ಮೆ ಅವರು ವಾಸ್ತವತೆಯ ಮಿತಿಗಳನ್ನು ಮೀರಿ, ನಿತ್ಯದ ಬದುಕಿನ ಜಂಜಾಟಗಳಿಂದಲೆ ಅನುಭಾವದ ಮಿಂಚನ್ನು ಬೆಳಗಲು ಪ್ರಯತ್ನಿಸುತ್ತಾರೆ. ಸಾವಿನ ಹಿನ್ನೆಲೆಯಲ್ಲಿ ಕತೆ ವಾಸ್ತವವದಲ್ಲಿ ಪ್ರಾರಂಭವಾಗಿ ಕೆಲವೊಮ್ಮೆ ಮಾಂತ್ರಿಕ ವಾಸ್ತವತೆಗೆ ಹತ್ತಿರವಾದ ಶಕ್ತಿಯನ್ನು ಪಡೆಯುತ್ತದೆ. 'ಮಸಣದಿ ಪೇಳಿಕೊಂಡ ಮಗನ ಕತೆ'ಯಲ್ಲಿ ಬರುವ ಮುದುಕಪ್ಪ ಸ್ಮಶಾನದಲ್ಲಿ ಆಕಸ್ಮಿಕವಾಗಿ ಕಂಡು ಅಲ್ಲೆ ಒಂದು ಬದುಕಿನ ಕತೆ ಬಿಚ್ಚಿಟ್ಟಾತ. ಆ ಪಾತ್ರ ವಾಸ್ತವ ತರ್ಕದಿಂದ ಬಿಡಿಸಿಕೊಂಡು ಮಾಂತ್ರಿಕ ವಾಸ್ತವದಂತೆ ಬಿಚ್ಚಿಕೊಳ್ಳುತ್ತದೆ. ಸಾವಿನಲ್ಲಿ ಕಾಣುವ ಬದುಕಿನ ಪ್ರತಿಬಿಂಬ ಹಾಗೂ ಬದುಕಿನ ಮೇಲೆ ಕವಿಯುವ ಸಾವಿನ ನೆರಳು ಒಂದು ಇನ್ನೊಂದರ ಮುಖಾಮುಖಿಯಲ್ಲಿ ಅನುಭಾವದ ಶಕ್ತಿಯನ್ನು ಸೂಚಿಸುತ್ತದೆ.

ಬದುಕನ್ನು ಕುರಿತು ಬರೆಯುವ ಕಥೆಗಳಲ್ಲಿ ಸಾವಿನ ಕಂಪನ ಕೇಳಿಸುತ್ತದೆ. "ಮಿಸೆಸ್ ಡೆತ್ ಅಮ್ಮನ ಸಾವು" ಕಥೆಯ ಉದ್ದಕ್ಕೂ ಇರುವುದು ಸಾವಿನ ವಿವರಗಳೇ ಆದರೆ ಅಲ್ಲಿ ಕಾಣುವುದು ಅಪ್ಪಟ ಜೀವನ ಪ್ರೀತಿ ಸಾವಿನ ಸಂದರ್ಭದಲ್ಲೆಲ್ಲಾ ನೆರವಾದ ಸಾವಿತ್ರಿಬಾಯಿಯವರ ವ್ಯಕ್ತಿತ್ವದಲ್ಲಿ ಕಾಣುವುದು ಇಂತಹ ಜೀವನ ಪ್ರೀತಿಯನ್ನೇ. ಅವರ ಸಾವನ್ನು ಊರಿನವರು ಸುಲಭವಾಗಿ ಮರೆತುಬಿಟ್ಟರು ಎನ್ನುವಲ್ಲಿ ಇರುವುದು ವ್ಯಂಗ್ಯವಲ್ಲ ಎಲ್ಲ ಸಾವನ್ನು ಲೋಕ ಹೀಗೆ ಮರೆತು ಬಿಡುವುದು ವಾಸ್ತವ. ಅಲ್ಲಿ ಇರಬೇಕಾದ ಜೀವನ ಪ್ರೀತಿಯ ಗೈರು ಹಾಜರಿಯನ್ನು ಸಾವಿತ್ರಮ್ಮನವರ ಸಾವು ಧ್ವನಿಸುತ್ತದೆ.

ಅವರು ಸಾವಿನ ಹಿಂದಿನ ದಿನ ಲೋಟದಲ್ಲಿ ಅರ್ಧ ನೀರು ಕುಡಿದು ಬಿಟ್ಟಿದ್ದು ಹಾಗೇ ಇತ್ತಂತೆ. "ಆಕೆ ಬೆಳಿಗ್ಗೆ ಎದ್ದು ಆ ನೀರನ್ನು ಕುಡಿಯುತ್ತಿದ್ದರೆ ಅಥವಾ ಹಿಂದಿನ ದಿನದ ನೀರು ಎಂದು ಅಂತ ಅವರು ಮಲಗಿದ್ದ ರೂಮಿನ ಕಿಟಕಿಯಾಚೆ ಚೆಲ್ಲುತ್ತಿದ್ದರೆ, ಗೊತ್ತಿಲ್ಲ. ಅವರು ಕುಡಿಯಲಿ ಕುಡಿಯದೇ ಹೋಗಲಿ, ಅವರು ಮಾತ್ರವೇ ಕುಡಿಯಬಹುದಾಗಿದ್ದ ನೀರು ಅದು"[೬] ಎನ್ನುವಂತಹ ವಿವರಗಳಲ್ಲಿ ಸತ್ಯನಾರಾಯಣ ತಮ್ಮ ಗ್ರಹಿಕೆಗಳನ್ನು ಹೇಗೆ ಸಮಗ್ರವೂ, ಸ್ವಯಂಪೂರ್ಣವೂ ಆಗುವಂತೆ ನೋಡಿಕೊಂಡಿದ್ದಾರೆ ಎನ್ನುವುದನ್ನು ಗಮನಿಸಬಹುದು.

'ಕಿಸಾಗೌತಮಿಗೊಂದು ಕತೆ'ಯಲ್ಲಿ ಮೂರು ನಾಲ್ಕು ದಿನಗಳ ಹಿಂದಷ್ಟೇ ಗಂಡನನ್ನು ಕಳೆದುಕೊಂಡ ೨೪ ವರ್ಷದ ತರುಣಿ ಸ್ಮಿತಾ ಇದ್ದಾಳೆ. ಅವಳೀಗ ಎರಡು ಎರಡೂವರೆ ತಿಂಗಳ ಗರ್ಭಿಣಿ. ಮೊದಲ ಗಂಡು ಮಗುವಿಗೆ ಮುಂದಿನ ಸ್ಕೂಲ್ ಸೀಸನ್‌ಗೆ ಮೂರು ತುಂಬುತ್ತೆ. ಅವಳ ಮಾವ ಸದಾನಂದ ಮತ್ತು ಅವರ ತಾಯಿ ಹಣ್ಣು ಹಣ್ಣು ಮುದುಕಿ ಕೂಡ ಕಥೆಯ ಪರಿಸರದಲ್ಲಿದ್ದಾರೆ. ಸ್ಮಿತಾ ತನ್ನ ಹೊಟ್ಟೆಯಲ್ಲಿರುವ ಮಗುವನ್ನು ಉಳಿಸಿಕೊಳ್ಳಬೇಕೆ ಬೇಡವೆ ಎನ್ನುವ ಜಿಜ್ಞಾಸೆ ಕಥೆಯ ಆರಂಭದಲ್ಲಿ ಬರುತ್ತದೆ. ಆದರೆ ಇದೇನು ಕೇಂದ್ರವಲ್ಲ. ಇಲ್ಲಿ ಕೌಟುಂಬಿಕ ವಿಘಟನೆಯ ಹಲವು ನೆಲೆಗಳಿವೆ. ಸಾವು ಸ್ಮಿತಾ ಮತ್ತು ಸದಾನಂದ ಇಬ್ಬರ ಎದುರೂ ಬಂದು ನಿಂತಿದೆ. ಬದುಕಿನ ಬೇರೆ ಬೇರೆ ಘಟ್ಟದಲ್ಲಿದ್ದರೂ ಸಾವಿನ ತೀವ್ರತೆ ಅದೇ ಕ್ರಮದ್ದು. ಸಂದೀಪನಿಗೆ ಧರ್ಮೋದಕ ಕೊಡುವ ಹಿಂದಿನ ದಿನ ಸ್ಮಿತಾ ಸದಾನಂದರು, "ಒಬ್ಬರನ್ನೊಬ್ಬರು ಸಂಧಿಸಿದರು, ದೃಷ್ಟಿಸಿದರು, ಕಣ್ಣುಗಳು ಮಾತ್ರ ಮಾತನಾಡಿದವು, ನಾಲಗೆ, ಮನಸ್ಸು ಹೃದಯ ಎಲ್ಲಾ ಶಕ್ತಿಯೂ ಕಣ್ಣುಗಳಲ್ಲಿಯೆ ಅಡಕವಾಗಿರುವಂತೆ ಮಾತನಾಡಿದರು"[೭] ಎನ್ನುವಲ್ಲಿ ಸತ್ಯನಾರಾಯಣ ಕಾವ್ಯಾತ್ಮಕ ನೆಲೆಯಲ್ಲಿ ತಲುಪುತ್ತಾರೆ.

ಇನ್ನೊಬ್ಬರ ಸಾವಿನ ಮೂಲಕ ತಮ್ಮ ಗ್ರಹಿಕೆ ರೂಪುಗೊಂಡಿರುವುದನ್ನು ಒಪ್ಪಿಕೊಳ್ಳುತ್ತಲೆ ಸಾವಿನ ಬಗ್ಗೆ ತಮಗೆ ಎಲ್ಲಾ ಗೊತ್ತಿದೆ ಎಂಬ ಭ್ರಮೆಯಿಲ್ಲದಿರುವುದನ್ನು ಅವರು ಒಪ್ಪಿಕೊಂಡಿದ್ದಾರೆ. ಸಾವು ನಮಗೆ ಬೇಕಾಗಿರಲಿ ಬೇಡದ್ದಾಗಲೀ ಅದೊಂದು ಕಹಿ ವಾಸ್ತವ. ಅದನ್ನು ಬದುಕಿನ ಕೊನೆಯೆಂದು ನೇತ್ಯಾತ್ಮಕವಾಗಿಯೂ ಬದುಕಿನ ಆರಂಭವೆಂದು ಇತ್ಯಾತ್ಮಕವಾಗಿಯೂ ಗ್ರಹಿಸಲು ಸಾಧ್ಯವಿದೆ. ಪದೇ ಪದೇ ತಾವು ಮಧ್ಯ ವಯಸ್ಸನ್ನು ದಾಟುತ್ತಿರುವುದನ್ನು ಹೊಸ ಗೆಳೆತನ ಸಾಧ್ಯವಿಲ್ಲದ ಸ್ಥಿತಿಯನ್ನು ಉಲ್ಲೇಖಿಸುತ್ತಾರೆ. ತಮ್ಮ ತಂದೆಯ, ತಾಯಿಯ, ಹತ್ತಿರದ ಬಂಧುಗಳ, ಗೆಳೆಯರ ಸಾವನ್ನು ಹತ್ತಿರದಿಂದ ನೋಡಿದಾಗ ಉಂಟಾದ ಭಾವನೆಗಳನ್ನು ತೋಡಿಕೊಳ್ಳುವಾಗ ಅವರ ಸಾವಿನ ಎಚ್ಚರ ಎನ್ನುವುದು ಪ್ರಕಟವಾಗುತ್ತದೆ.

ವ್ಯಕ್ತಿಯ ಸಾವು ಕುಟುಂಬದ ಮೇಲೆ ಬೀರುವ ಪರಿಣಾಮ, ಆಪ್ತ ವಲಯದವರನ್ನು ಅದು ತಟ್ಟುವ ಪರಿ. ಸಮುದಾಯವು ಸಾವನ್ನು ಎದುರಿಸುವ ಪರಿ ಹೀಗೆ ಹಲವು ಬಗೆಗಳಲ್ಲಿ ಸಾವಿನ ಸಾನಿಧ್ಯ ಕೊಡುವ ದರ್ಶನಗಳು, ಬದುಕಿನ ಸ್ವರೂಪವೇ ಬದಲಾಗಿಬಿಡುವ ಸನ್ನಿವೇಶಗಳನ್ನು ಸತ್ಯನಾರಾಯಣರು ಅಪಾರ ಸೂಕ್ಷ್ಮತೆಯಲ್ಲಿ ಚಿತ್ರಿಸುತ್ತಾರೆ. ಸಾವನ್ನು ಕುರಿತ ಭಯ, ಆಸೆ, ಅಮೂರ್ತ ನೆಲೆಯಲ್ಲಿ ತರ್ಕಕ್ಕೆ ಸಿಗದ ಸಾವಿನ ಮುನ್ಸೂಚನೆಗಳು, ಸಾವಿನ ಜೊತೆ ಮನುಷ್ಯರು ನಡೆಸುವ ಅನುಸಂಧಾನಗಳು ಇವೆಲ್ಲವನ್ನು ಇವರ ಬರಹಗಳು ತನ್ಮಯತೆಯಲ್ಲಿ ಚಿತ್ರಿಸುತ್ತವೆ.

ಸಾವಿನ ನೆರಳು ನಮ್ಮ ಬದುಕನ್ನು ಆವರಿಸುತ್ತದೆ ಎನ್ನುವ ರೂಢಿಗತ ದೃಷ್ಟಿಕೋನವನ್ನು ಇವರ ಕಥೆಗಳು ತಲೆಕೆಳಗಾಗಿಸುತ್ತವೆ. ಸಾವಿನ ಸಾಕ್ಷಾತ್ಕಾರಕ್ಕಾಗಿ ನಡೆಸುವ ನಿತ್ಯನೂತನ ಹವಣಿಕೆಯಂತೆ, ಸನ್ನಾಹದಂತೆ ಬದುಕು ಕಾಣಿಸುತ್ತದೆ. ಸಾವೇ ಕೇಂದ್ರವಾಗಿ, ಕಾರಣವಾಗಿ,

ಪ್ರಚೋದಕವಾಗಿ ಮುಂದೊಡಗಾಗಿ ಮನುಷ್ಯ ಸಂಬಂಧಗಳ ಚೌಕಟ್ಟನ್ನು ಪಲ್ಲಟಿಸುವ ಸನ್ನಿವೇಶಗಳನ್ನು ಈ ಬರಹಗಳು ಮತ್ತೆ ಮತ್ತೆ ಸೃಷ್ಟಿಸುತ್ತವೆಯಷ್ಟೇ. ಆ ಸನ್ನಿವೇಶಗಳು ಮನುಷ್ಯರಲ್ಲಿ ತರುವ ಅಯಾಚಿತವಾದ ಅಂತಃಕರಣದ ಸೆಲೆಗಳನ್ನು ಗುರುತಿಸುವುದು ಈ ಬರಹಗಳ ಮೂಲ ಉದ್ದೇಶವೋ ಎನಿಸುವಷ್ಟು ಉತ್ಕಟವಾಗಿ ಸತ್ಯನಾರಾಯಣರು ಈ ಪ್ರಯತ್ನವನ್ನು ಮುಂದುವರಿಸುತ್ತಾರೆ.

ಬದುಕಿನ ಶಕ್ತಿಗೂ, ಸೌಂದರ್ಯಕ್ಕೂ ತಳಹದಿಯೇ ಸಾವು. ಸಾವನ್ನು 'ಪ್ರಸನ್ನ ಸಮ್ಮತಿ'ಯಲ್ಲಿ ಒಪ್ಪುವುದೆಂದರೆ ಬದುಕಿಗೆ, ಅದು ನಮಗೆ ಕೊಡುವ, ಕೊಟ್ಟಿರುವ ಅಪೂರ್ಣ ಅವಕಾಶಕ್ಕೆ ಸಲ್ಲಿಸುವ ಗೌರವ ಮತ್ತು ಕೃತಜ್ಞತೆ. ಪ್ರಾಕೃತಿಕ ಕರಾರೊಂದನ್ನು ಸತ್ಯಸ್ಥಿತಿಯೊಂದನ್ನು ಒಪ್ಪಿ ಆರಂಭವಾಗಿರುವ ಬದುಕಿನ ಪ್ರಯಾಣ ಸಾವಿನ ಕಾರಣಕ್ಕಾಗಿ ಎಲ್ಲಿ ಬೇಕಾದರೂ ಮುಗಿಯಬಹುದಾದದ್ದು. ಸೋಲು–ಗೆಲುವು, ಕಾಲ–ಅಕಾಲ, ಸಾರ್ಥಕ–ವ್ಯರ್ಥ ಈ ಎಲ್ಲ ಮಾನದಂಡಗಳನ್ನು ಮೀರಿದ ಅನುಭವವೇ ಮೂಲಧಾತುವಾದ ಬದುಕಿನಲ್ಲಿ ಅದರಿಂದ ನಾವು ಪಡೆಯಬಹುದಾದದ್ದನ್ನು ನಿರ್ಧರಿಸುವುದು ನಮ್ಮ ದೃಷ್ಟಿಕೋನ. ನಮ್ಮ ವೈಯಕ್ತಿಕ ಸುಖ–ದುಃಖಗಳನ್ನು, ಲಾಭ–ನಷ್ಟಗಳನ್ನು ಮೀರಿ ಆನಂದಿಸಬಹುದಾದ ಸಾಧ್ಯತೆಯೊಂದು, ವಿಸ್ತಾರವೊಂದು ಬದುಕಿಗಿದೆ.

ಸಾವು ಮನುಷ್ಯನ ಮಿತಿಯ ಸಂಕೇತ ಎನ್ನುವುದನ್ನು ಈ ಕಥನಗಳು ನಿರಾಕರಿಸುತ್ತವೆ. ಸಾವು ಬದುಕಿನ ಕನ್ನಡಿಯಾಗಿ, ಗುರುವಾಗಿ, ಸಖ–ಸಖಿಯರಾಗಿ ಕೊನೆಗೆ ಕರುಣಿಸುವ ದೈವವಾಗಿ ಹೀಗೆ ಹಲವು ಪಾತ್ರಗಳಲ್ಲಿ ಅನಾವರಣಗೊಳ್ಳುತ್ತಾ ಹೋಗುವ ಸಾವು ಹೆದರಿಸುವ ಗುಮ್ಮನಾಗದೆ, ಒಪ್ಪಿಕೊಳ್ಳಬೇಕಾದ ದುರಂತವಾಗದೆ ಕಾಯ್ದುಕೊಳ್ಳಬೇಕಾದ ಸ್ನೇಹದಂತೆ ಗೋಚರಿಸುತ್ತಾ ಹೋಗುತ್ತದೆ.

ದಲಿತ ಪಾತ್ರ ಚಿತ್ರಣ

ಭಾರತದಲ್ಲಿ ದಲಿತರ, ಬುಡಕಟ್ಟು ಜನಾಂಗಗಳ, ಹಿಂದುಳಿದ ವರ್ಗಗಳ ಮಹಿಳೆಯ ಮೇಲಿನ ಸಂಘಟಿತ ಕ್ರೌರ್ಯ ಇನ್ನೊಂದು ರೀತಿಯದ್ದು. ಇವು ಎಲ್ಲಿ ಹೇಗೆ ಹುಟ್ಟಿತು ಯಾರು ಈ ಚರಿತ್ರೆಗೆ ಮೂಲವಾಗಿ ಕಾರಣರಾದವರು ಎಂದು ನಿಖರವಾಗಿ ಹೇಳುವುದು ಕಷ್ಟ. ಈ ಚರಿತ್ರೆಯ ವಾರಸುದಾರಿಕೆಯನ್ನು ಒಪ್ಪಿಕೊಳ್ಳಲು ಸಮಾಜದ ಯಾವ ವರ್ಗವೂ ತಯಾರಿರುವುದಿಲ್ಲ. ಆದ್ದರಿಂದಲೇ ಅದರಿಂದುಂಟಾದ ಅಸಮಾನತೆಯನ್ನು ಸರಿಪಡಿಸಿಕೊಳ್ಳುವುದರಲ್ಲಿ ಕಾಣುವ ಸಾಮೂದಾಯಿಕ ಉದಾಸೀನ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸ್ಥಾನಮಾನಗಳಿಗೆ ಹಾತೊರೆಯುವ ವರ್ಗಗಳಿಗೆ ಅದು ಅಸಂಗತ.

ಈ ಸಂದರ್ಭದಲ್ಲಿಯೇ ಒಟ್ಟು ಸಮುದಾಯದ ಅಮೂರ್ತ ಆದರ್ಶಕ್ಕಿಂತ ವ್ಯಕ್ತಿ ವಿಶಿಷ್ಟವಾದ ನೈತಿಕತೆಯ ಗಟ್ಟಿತನದ ಅಗತ್ಯ ಹೆಚ್ಚು. ಈ ತಾತ್ವಿಕ ನೆಲೆಯಲ್ಲಿಯೇ ಸತ್ಯನಾರಾಯಣರ ಕತೆಗಳು

ಮಂಡಿತವಾಗುವುದು. ಸಮುದಾಯದ ಆದರ್ಶಗಳು ಸಂವಿಧಾನದ ಮೂಲಕ ಅಭಿವ್ಯಕ್ತವಾಗಿದ್ದರೂ ವೈಯಕ್ತಿಕ ನೆಲೆಯಲ್ಲಿ ನೈತಿಕವಾಗಿ ಎಲ್ಲಾ ವರ್ಗದ ಜನರು ಸಾಮಾಜಿಕ ಬದಲಾವಣೆಗಳನ್ನು ಒಪ್ಪಿಕೊಳ್ಳದೇ ಹೋದರೆ ಜಾತಿ ವರ್ಗಗಳ ತಾರತಮ್ಯ ವ್ಯವಸ್ಥೆ ಮುಂದುವರಿಯುತ್ತಲೇ ಹೋಗಬಹುದಾದ ಅಪಾಯಗಳನ್ನು ಸತ್ಯನಾರಾಯಣ ಸೂಕ್ಷ್ಮವಾಗಿ ದಾಖಲಿಸುತ್ತಾರೆ.

'ಪೂರ್ವನಾಮದ ವಲಸೆ' ಕತೆಯಲ್ಲಿ ದಲಿತ ದೃಷ್ಟಿಕೋನ ಹಾಗೂ ದಲಿತೇತರ ದೃಷ್ಟಿಕೋನಗಳ ತಾಕಲಾಟದಲ್ಲಿ ಸಮೃದ್ಧವಾದ ವಿವರಗಳ ಮೂಲಕ ಕಥೆ ಅಷ್ಟಷ್ಟೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಸ್ವಾತಂತ್ರ್ಯೋತ್ತರ ಬದುಕಿನಲ್ಲಿ ಆದ ಸ್ಥಿತ್ಯಂತರಗಳಿಂದಾಗಿ ದಲಿತ ಮರಿಸ್ವಾಮಿ ಮುಂಬಯಿಯಂಥ ನಗರದಲ್ಲಿ ಒಬ್ಬ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತ ಒಳ್ಳೆಯ ಸ್ಥಾನಮಾನದಲ್ಲಿದ್ದರೂ ಆಕಸ್ಮಿಕವಾಗಿ ಅವನ ಊರಿನ ಸಮೀಪದವನೇ ಆದ ನಿರೂಪಕ ಕ್ಲಬ್ಬಿನಲ್ಲಿ ಪರಿಚಿತನಾದಾಗ ಅಷ್ಟೇನು ಸೌಹಾರ್ದತೆಯನ್ನು ತೋರುವುದಿಲ್ಲ. ಕಾರಣ ಪೂರ್ವ ಬದುಕಿನಲ್ಲಿ ಆತ ಹೀನಾಯವಾಗಿ ಅನುಭವಿಸಿದ್ದನ್ನು ನೆನಪಿಸಿಕೊಳ್ಳಲು ಅವನಿಗೆ ಆಗದು. ಅದೇ ನಿರೂಪಕ ತನ್ನ ಪೂರ್ವಾಪರಗಳನ್ನು ಹೆಮ್ಮೆಯಿಂದ ಹೇಳಿಕೊಳ್ಳಲು ಇಷ್ಟಪಡುತ್ತಾನೆ. ಈ ಎಲ್ಲ ವೈರುಧ್ಯಗಳು ಹಾಗೂ ತಾಕಲಾಟಗಳು ಓದುಗನ ಅನುಭವಕ್ಕೆ ಬರುವಂತೆ ಚಿತ್ರಿತವಾಗಿದೆ.

ಕೊಪ್ಪ ಮರಿಸ್ವಾಮಿ ಅಲಿಯಾಸ್ ಕೆ.ಎಂ. ಸ್ವಾಮಿ ತಾನು ದಲಿತನೆಂಬ ಕಾರಣಕ್ಕೆ ತನ್ನ ಮೂಲವನ್ನು ಎಲ್ಲಿಯೂ ಹೇಳಿಕೊಳ್ಳುತ್ತಿರಲಿಲ್ಲ. ಅದೇ ಕಾರಣಕ್ಕೆ ಯಾರೊಂದಿಗೂ ಹೆಚ್ಚಾಗಿ ಬೆರೆಯುತ್ತಿರಲಿಲ್ಲ. ತಮ್ಮ ಊರಿನ ವ್ಯಕ್ತಿಯನ್ನು ಆತ ಸರಿಯಾಗಿ ಮಾತನಾಡಿಸುತ್ತಿರಲಿಲ್ಲ. ನಿರೂಪಕ ಮುಂಬಯಿಯಲ್ಲಿ ಉನ್ನತ ಉದ್ಯೋಗದಲ್ಲಿರುವವ, ತನ್ನಂತಹವರ ಕ್ಲಬಿನಲ್ಲಿ ತನ್ನದೇ ಊರಾದ ಕೊಪ್ಪ (ಮಂಡ್ಯ ಜಿಲ್ಲೆ)ದ ಹೆಸರನ್ನು ತನ್ನ ಹೆಸರಿನ ಜೊತೆಗೆ ಹೊಂದಿರುವವನಾದ ಕೆ.ಎಂ. ಸ್ವಾಮಿ ಎಂಬುವನ ಪೂರ್ವಪರವನ್ನು ತಿಳಿಯುವ ಪ್ರಯತ್ನ ಮಾಡುತ್ತಾನೆ. ಮೊದಲು ತನಗೆ ಕೊಪ್ಪದ ಯಾರು ಪರಿಚಯವಿಲ್ಲ, ನಿರೂಪಕನ ಜತೆಗೂ ಆತ್ಮೀಯತೆ ಬೆಳೆಸುವುದು ಇಷ್ಟವಿಲ್ಲ ಎಂದು ಬಿಗುಮಾನದಿಂದಿದ್ದ ಸ್ವಾಮಿ ನಿಧಾನವಾಗಿ ತನ್ನ ಬಾಲ್ಯವನ್ನು ತನ್ನ ಆದಿ ಕರ್ನಾಟಕ ಜಾತಿಯ ಕಾರಣವಾಗಿ ತಾನು ಅನುಭವಿಸಿದ್ದ ಸಂಕಟಗಳನ್ನು ಅದನ್ನು ಮೀರಲು ಮಾಡಿದ ಪ್ರಯತ್ನಗಳನ್ನು ಕಂತುಕಂತಾಗಿ ಬಿಚ್ಚಿಡುತ್ತಾನೆ.

ಕೊನೆಯ ಭಾಗದಲ್ಲಿ ಸ್ವಾಮಿ ಹೇಳುವ ಮಾತುಗಳು "ಬಾಲ್ಕನಿ ನೋಡಬನ್ನಿ ಎಷ್ಟೊಂದು ವಿಶಾಲವಾಗಿದೆ. ಹೋಗಿ ನಿಂತರೆ ಎಲ್ಲವೂ ಮರೆತು ಹೋಗುತ್ತೆ... ಬಾಲ್ಕನಿಯಲ್ಲಿ ನಿಂತರೆ ವಿಶಾಲವಾದ ಆಕಾಶ ಕೈಗೆ ಸಿಗುವ ಹಾಗಿರುತ್ತದಲ್ಲ ಈ ರೀತಿ ನಮ್ಮ ಕೈಗೇ ಸಿಗುವ ಆಕಾಶವನ್ನು ಬೇಕೆಂದಾಗ ಬೇಕೆಂದಷ್ಟು ನೋಡಲು ಸಾಧ್ಯವಾಗುವುದು ಕೂಡ ಒಂದು ನಿರಂತರ ಬೋನಸ್... ಅಲ್ಲವೇ"[೮] ಇದು ಕತೆಯ ಆಶಯವನ್ನು ರೂಪಕವಾಗಿ ಗ್ರಹಿಸುವ ಲೇಖಕರ ತಂತ್ರ. ಕೆ. ಸತ್ಯನಾರಾಯಣ ರೂಪಕಗಳನ್ನು ಸೃಷ್ಟಿಸುವ ಮೂಲಕ ತಮ್ಮ ಕತೆಗಳನ್ನು

ಗ್ರಹಿಸಬೇಕಾದ ನೆಲೆಗಳನ್ನು ಸೂಚಿಸುತ್ತಾರೆ. ಸ್ವಾಮಿಯ ಮುಂಬಯಿಯ ಪ್ಲ್ಯಾಟ್ ಮತ್ತು ಅದರ ವಿಶಾಲವಾದ ಬಾಲ್ಕನಿ ಒಂದು ರೂಪತ. ದಲಿತರ ಬಿಡುಗಡೆಯ ಒಂದು ಸಾಧ್ಯತೆಯನ್ನು ಇದು ವಾಸ್ತವವಾಗಿಯೂ ರೂಪಕವಾಗಿಯೂ ಗ್ರಹಿಸುವ ಕಾರಣ ಒಂದು ಅದ್ಭುತವಾದ ಕಥನ ಕ್ರಮವನ್ನು ಈ ಕತೆಯಲ್ಲಿ ಕಾಣಬಹುದು.

ಜಾತಿಯಿಂದ ದಲಿತರಾದರೂ ಸ್ಥಾನಮಾನದಿಂದ ಉನ್ನತಮಟ್ಟದಲ್ಲಿರುವ ದಂಪತಿ ಮಾಧವಿ-ಕೇಶವ ಪ್ರಸಾದರ ಮನೋತೊಳಲಾಟದ ಚಿತ್ರಣ ಕಾಣುವುದು. 'ಮೊದಲ ಅ-ದಲಿತ' ಕಥೆಯಲ್ಲಿ ಮಾಧವಿಯ ಮೇಲಾಧಿಕಾರಿಯಾಗಿರುವ ಕಥಾ ನಿರೂಪಕ. ತನ್ನ ಹೆಂಡತಿಯ ಮೂಲಕ, ಮಾಧವಿಗೆ ಅಂಗವಿಕಲ ಸ್ಪಂದನರಹಿತ ಮಗನೊಬ್ಬನಿದ್ದಾನೆ ಎಂದು ಅರಿಯುತ್ತಾನೆ. ಇಂಥ ದೊಡ್ಡ ಸಮಸ್ಯೆ ಇದ್ದರೂ ಈವರೆಗೆ ನಿರೂಪಕ ಅಚ್ಚರಿ ಪಡುತ್ತಾನೆಯಾದರೂ ಕ್ರಮೇಣ ಅವಳು ನಿರೂಪಕನಿಗೆ ತನ್ನ ಮನೆಗೆ ಕರೆದುಕೊಂಡು ಹೋಗಿ ಪರಿಸ್ಥಿತಿ ಸಂಪೂರ್ಣ ತೋರಿಸುತ್ತಾಳೆ.

ಮಾಧವಿ ವ್ಯಕ್ತಿತ್ವ ಹೇಳುತ್ತ "ಹೆಂಗಸರ ಸ್ವಭಾವದಂತೆ ಮೃದು ಸ್ವಭಾವದವಳಲ್ಲ, ಧ್ವನಿ ಕೂಡ ಗೊಗ್ಗರೇ ಬರಸೇ" ಎನ್ನುತ್ತಾರೆ.˜ ಈ ನಿರೀಕ್ಷೆ ಏಕೆ ಎಂದು ಆಶ್ಚರ್ಯವೆನಿಸುತ್ತದೆ. ಲೈಂಗಿಕತೆಯ ಕುರಿತು ಕುತೂಹಲರಾಗಿ ಆರೋಗ್ಯಪೂರ್ಣ ಚರ್ಚೆ ಇಲ್ಲಿದೆ. ಇನ್ನೊಂದು ಕಡೆ ಲೇಖಕರು ದಲಿತ ಮಕ್ಕಳು ಮೆರಿಟ್ ಕೋಟಾದಲ್ಲಿ ಸೀಟು ಪಡೆಯುವಂತಾದರೆ ಇನ್ನು ಏಕೆ ಮುಂದುವರೆಯಬೇಕು ಎಂದು ಪ್ರಶ್ನಿಸುತ್ತಾರೆ. ಎಲ್ಲೋ ಒಂದಿಬ್ಬರು ಹೀಗೆ ಪ್ರತಿಭಾವಂತರಿರಬಹುದು. ಆದರೆ ಬಹುತೇಕ ಸಾಮಾನ್ಯರ ಗತಿ ಏನು?

'ಕೋನ' ಕತೆಯಲ್ಲಿ ಇಂದಿನ ಮೀಸಲಾತಿ ಮತ್ತು ಮತಾಂತರಗಳ ಗೊಂದಲಮಯ ಹಿನ್ನೆಲೆಯಲ್ಲಿ ವ್ಯಕ್ತಿಯೊಬ್ಬನ ನಿಜವ್ಯಕ್ತಿತ್ವದ ಸಮಗ್ರ ಸ್ವರೂಪವನ್ನು ಶೋಧಿಸುವ ಪ್ರಯತ್ನವಿದೆ. ಇಲ್ಲಿ ರವೀಂದ್ರಕುಮಾರ್ ಎಂಬ ಅಧಿಕಾರಿ, ಅವನ ಸಹಾಯಕ ದಲಿತ ಶಿವಸ್ವಾಮಿ ಮತ್ತು ಸಂಗಡಿಗರ ದೃಷ್ಟಿಯಲ್ಲಿ ಆತ 'ಗ್ರೇಟ್ ಮ್ಯಾನ್' 'ನಮ್ಮ ಕಮ್ಯುನಿಟಿ ಹುಡುಗರಿಗೆಲ್ಲ ಬಹಳ ಮುಂದೆ ತಂದಿದ್ದಾರೆ ಸಾರ್' ಆದರೆ ವರ್ಗವಾಗಿ ಹೈದ್ರಾಬಾದಿಗೆ ಬಂದಿರುವ ಆತನ ಹೊಸ ಸಿಬ್ಬಂದಿಗೆ ಆತ 'ಕೆಲಸಗಳ್ಳ' 'ನಕಾರಾತ್ಮಕ ಧೋರಣೆಯವ' ರವೀಂದ್ರಕುಮಾರ ದಲಿತ ಎಂಬ ಕಾರಣಕ್ಕೆ ನಕಾರಾತ್ಮಕ ಧೋರಣೆಯವ ಎಂಬುದನ್ನು ನಿರೂಪಕ ಒಪ್ಪುವುದಿಲ್ಲ.

ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ತೆಲುಗು ಮಾದಾರ ಬಾಬಿ ಎಂಬ ಇಲಾಖೆಯ ಡ್ರೈವರ್‌ನ ನೇಮಕಾತಿಯ ವ್ಯಾಜ್ಯದಲ್ಲಿ, ನಿರೂಪಕ ಕಚೇರಿಯ ಪರವಾಗಿ ಬುಡಕಟ್ಟು ಎಂದು ನಮೂದಿತವಾಗಿದ್ದ ರೆಡ್ಡಿ ಪರವಾಗಿ ವಾದಿಸುವ ಪ್ರಸಂಗ ಬಂದರೆ ಬಾಬಿಯ ಪರವಾಗಿ ರವೀಂದ್ರಕುಮಾರ್ ವಾದಿಸಬೇಕಾಗುತ್ತದೆ. ಅದಕ್ಕೆ ಬೇಕಾದ ಸಕಲ ಸಿದ್ಧತೆ ಮಾಡಿಕೊಂಡು ರವೀಂದ್ರಕುಮಾರ್ ವಾದಿಸಿದ್ದರಿಂದಾಗಿ ಆತ ಕಾಲೋನಿಯಲ್ಲಿ ಒಬ್ಬ ಮಿಲಿಟಂಟ್ ದಲಿತ ಎಂಬ ಬ್ರಾಂಡ್ ಆಗಿ ಕಾಣಿಸಿಕೊಂಡಿದ್ದ.

‘ಮಾರ್ಕ್‌ಟುಲಿ ಹೇಳಬೇಕಾಗಿ ಬಂದ ಶ್ರೀ(ದಲಿತ) ರಾಮಚಂದ್ರ ಕತೆ’ ತನ್ನ ಸಂಕೀರ್ಣತೆಯಿಂದಾಗಿ ಗಮನ ಸೆಳೆಯುತ್ತದೆ. ಮಾರ್ಕ್ ಟುಲಿ ರಾಮಚಂದ್ರನ ಕತೆಯನ್ನು ಹೇಳಲೇಬೇಕಾಗಿ ಬರುವ ಸಂದರ್ಭವನ್ನು ಸೃಷ್ಟಿಸುವ ಘಟನೆಯೆಂದರೆ ಡಿ.ಸಿ. ಭರತಕುಮಾರ ಒಬ್ಬ ಹರಿಜನನನ್ನು ದೇವಸ್ಥಾನವೊಂದರ ಅರ್ಚಕನನ್ನಾಗಿ ನೇಮಿಸುವುದರ ಸಂಬಂಧದಲ್ಲಿ ನಡೆದ ಚರ್ಚೆಯಲ್ಲಿ ತಾವು ತಾಳುವ ನಿಲುವನ್ನು ಸಮರ್ಥಿಸಿಕೊಳ್ಳುವ ಅವಶ್ಯಕತೆ. “ಯಾವುದು ಸರಿ, ಯಾವುದು ತಪ್ಪು ಅಂತ ನಿರ್ಧಾರ ಮಾಡಿದ ತಕ್ಷಣವೇ ಮನಸ್ಸು ಯೋಚನೆ ಮಾಡೋದನ್ನ, ಗ್ರಹಿಸೋದನ್ನ ನಿಲ್ಲಿಸಿಬಿಡುತ್ತೆ” ಅದರ ಈ ನಿಲುವನ್ನು ಕತೆಯ ನಿವೇದಕನೂ ಸೇರಿದಂತೆ ಉಳಿದವರು ಪ್ರಶ್ನಿಸುತ್ತಾರೆ. “ಸರಿತಪ್ಪಿನ ಕಲ್ಪನೆಯೇ ಇಲ್ಲದೆ ಹೋದ್ರೆ ಪ್ರಪಂಚ ಮುಂದುವರಿಯೋದು ಹೇಗೆ ಹೇಳಿ. ಅದಕ್ಕೊಂದು ದಿಕ್ಕು ದೆಸೆ ಬೇಕಲ್ಲ?” ಇದಕ್ಕೆ ಟುಲಿಯವರ ಉತ್ತರ ಸಿದ್ಧವಿದೆ. “ಚರಿತ್ರೆ ಆಗಲಿ, ಪ್ರಪಂಚ ಆಗಲಿ ಮುಂದುವರಿಯೋದು ಅಗತ್ಯಕ್ಕೆ ಅನಿವಾರ್ಯಕ್ಕೆ ತಕ್ಕಂತೆ ಮಾತ್ರವೇ ಹೊರತು ಸರಿ ತಪ್ಪಿನ ಕಲ್ಪನೆಯಿಂದಲ್ಲ.”[೧೦] ಅವರ ಈ ಮಾತು ಸುಧಾರಣಾವದಿ ಶ್ರೋತೃವೊಬ್ಬನನ್ನು ಕೆರಳಿಸುತ್ತದೆ.

ರಾಮಚಂದ್ರನ ಕತೆ ಹೇಳುವ ಮೂಲಕ ಟುಲಿಯವರಿಗೆ “ಒಂದು ಕತೆನ, ಒಬ್ಬ ಮನುಷ್ಯನನ್ನು ಹೇಗೆ ನೋಡ್ತೇವೋ, ಉಳಿದ ಕತೆಗಳು, ಉಳಿದ ಮನುಷ್ಯರನ್ನು ಕೂಡ ಹಾಗೆ ನೋಡ್ತೇವೆ. ಹಾಗೆ ನೋಡ್ತಾ ಇಲ್ಲ ಅಂತ ನಾವು ಅಂದ್ಕೋಬಹುದು ಅಷ್ಟೇ. ಒಳ ಮನಸ್ಸಿನ ಕತೆ ಮಾತ್ರ ಬೇರೇನೆ ಆಗಿರುತ್ತೆ” ಎಂಬ ಸತ್ಯವನ್ನು ಸೂಚಿಸುವ ಉದ್ದೇಶವಿದೆ. ನಾಗರಾಜನ ಕತೆಯನ್ನಾಗಲಿ, ರಾಮಚಂದ್ರನ ಕತೆಯನ್ನಾಗಲಿ ಒಬ್ಬ ಹರಿಜನನ ಕತೆ ಎಂದು ಸಾರಾ ಸಗಟಾಗಿ ಹೇಳಿ ಕೈತೊಳೆದುಕೊಳ್ಳುವಂತಿಲ್ಲ ಅವುಗಳನ್ನು ಚರಿತ್ರೆಯ ಭಾಗವಾಗಿಯೇ ನೋಡಬೇಕಾಗುತ್ತದೆ.

ನಮ್ಮ ಸಮಾಜದಲ್ಲಿ ದಲಿತರಿಗೆ ತಮ್ಮ ಬದುಕನ್ನು ರೂಪಿಸಿಕೊಳ್ಳುವ ಅನೇಕ ಅವಕಾಶಗಳಿವೆ ಎಂಬ ಒಳ್ಳೆಯ ಸಂದೇಶ ಹೊರಹೊಮ್ಮುತ್ತಿತ್ತು. ಆದರೆ ಸತ್ಯನಾರಾಯಣ ಅವರ ಅನೇಕ ಕತೆಗಳಲ್ಲಿನಂತೆ ಇಲ್ಲಿ ಡಿ.ಸಿ. ಭರತ್‌ಕುಮಾರ್ ಅವರು ಹರಿಜನ ಯುವಕನನ್ನು ದೇವಸ್ಥಾನದ ಪೂಜಾರಿಯಾಗಿ ನೇಮಿಸಿದಾಗ ಉಂಟಾಗುವ ಸಾಮಾಜಿಕ ಸಂಚಲನ ಹಾಗೂ ಕೊನೆಗೆ ಜಿಲ್ಲಾಧಿಕಾರಿಯವರು ಆ ದಲಿತನನ್ನು ಪೂಜಾರಿಯಾಗಿ ನೇಮಿಸಿದ್ದು ಅವನಿಗೆ ಒಂದು ಕೆಲಸ ಕೊಡಿಸುವ ಉದ್ದೇಶದಿಂದ ಮಾತ್ರ ಎಂಬ ವ್ಯಾಖ್ಯಾನಕ್ಕೆ ಒಳಗಾಗಿ ಅವನಿಗೆ ಖಾಸಗಿ ಸಂಸ್ಥೆಯಲ್ಲಿ ಕೆಲಸ ಕೊಡಿಸುವಲ್ಲಿ ಕೊನೆಗೊಳ್ಳುತ್ತದೆ.

‘ದಲಿತರ ವೀಡಿಯೋ ಪುರಾಣದಲ್ಲಿ ವಿದ್ಯಾಭ್ಯಾಸದ ಪರಿಣಾಮವಾಗಿ ಆರ್ಥಿಕವಾಗಿ ಮುಂದುವರೆದ ದಲಿತನೊಬ್ಬ ದಲಿತರ ಹಕ್ಕಿಗಾಗಿ ಹೋರಾಟ ಮಾಡುತ್ತಿದ್ದವನು ಸಂಪತ್ತಿನ ಸಂಗ್ರಹದ ಹುಟ್ಟಿಗೆ ಬೀಳುವ ದುರಂತವನ್ನು ಸೆರೆ ಹಿಡಿಯಲಾಗಿದೆ. ಇದನ್ನು ವ್ಯಕ್ತಿಗತವಾಗಿ

ಗ್ರಹಿಸಿರುವುದರಿಂದ ವ್ಯಕ್ತಿಯ ವೈಯಕ್ತಿಕ ಭ್ರಷ್ಟತೆಗೆ ಪ್ರಾಮುಖ್ಯತೆ ದೊರೆತು ಅದಕ್ಕಿರುವ ಚಾರಿತ್ರಿಕ ಹಿನ್ನೆಲೆಯಲ್ಲಿ ಕಡೆಗಣಿಸಿದಂತಾಗಿದೆ. ಕತೆಯೊಳಗೆ ದಲಿತರಿಗೆ ಉಪಕಾರವಾಗಲಿ ಎಂದು ಚುನಾವಣೆ ವೀಕ್ಷಣೆಗೆ ವೀಡಿಯೋ ರೆಕಾರ್ಡ್ ಮಾಡುವ ಕಾಂಟ್ರಾಕ್ಟ್ ಪಡೆದ ದಲಿತ ಹುಡುಗರ ಕೆಲಸ ಗುಣಮಟ್ಟ ಸರಿಯಾಗದ ತಕರಾರು ತೆಗೆದ ವೀಕ್ಷಕನ ಕ್ರಿಯೆ ಕತೆಯ ಕೇಂದ್ರದಂತೆ ತೋರಿದರೂ ದಲಿತ ನಾಯಕ ಬಾಬುರಾವ್ ಇಡೀ ಕಥಾನಕದ ಆತ್ಮ.

ಕತೆಯಲ್ಲಿ ಕಾಣುವ ಬಾಬುರಾವ್‌ನ ಪ್ರಾಮಾಣಿಕ ಭಾವನಾತ್ಮಕ ಸತ್ಯಕತೆಯಲ್ಲಿ ಕಾಣ್ಕೆಯ ಒಂದು ನೆಲೆಯಾಗುವ ಬದಲು ಅವನು ಪ್ರಾರಂಭಿಸಿದ ಪುಟ್ಟ ವ್ಯಾಪಾರವೇ ಕತೆಯ ತಿರುವಾಗಿ ಪರಿಣಮಿಸುತ್ತದೆ. ಅವರು ಮಧ್ಯಮ ವರ್ಗದ ಎಲ್ಲಾ ಕೊಳಕು ಭ್ರಷ್ಟತೆಗೂ ಇಳಿಯಬಲ್ಲ ಮಂದಿ. ಆ ಮೂಲಕ ಮಾಮೂಲಿ ಬದುಕಿನ ಇನ್ನೊಬ್ಬ ಪ್ರತಿನಿಧಿ ಎಂಬುದರ ಮೂಲಕ ಕತೆಗಾರ ಬಾಬುರಾವ್‌ನ ಪ್ರಾಮಾಣಿಕ ಸಿಟ್ಟನ್ನು ಮರೆಯಿಸಿ ಬಿಡುತ್ತಾರೆ. ಇನ್ನೊಂದು ದೃಷ್ಟಿಯಿಂದ ಇದು ಬಾಬುರಾವ್‌ನನ್ನು ಕೇವಲ ದಲಿತ ಮಾತ್ರನಲ್ಲದೆ ನಮ್ಮ ನಿಮ್ಮ ಆಗಿರುವ ಒಬ್ಬ ಮನುಷ್ಯನಾಗಿ ಪರಿಗಣಿಸುತ್ತದೆ. ಓದುಗನ ಕಣ್ಣಲ್ಲಿ ಆತನನ್ನು ದಲಿತ ಪಟ್ಟದಿಂದ ಬಿಡುಗಡೆಗೊಳಿಸುತ್ತದೆ. ಇದು ಕಲೆಯ ಕೌಶಲ್ಯ ಹಾಗೂ ತಾತ್ವಿಕ ನಿಲುವುಗಳು ಮುಖಾಮುಖಿಯಾಗಬೇಕಾದ ಸಂದರ್ಭ. ಆದರೆ ಕಥೆಯಲ್ಲಿ ಸತ್ಯನಾರಾಯಣ ಇಂತಹ ಮುಖಾಮುಖಿಗಳನ್ನು ಎದುರಿಸುವುದಿಲ್ಲ.

ವಾಸ್ತವತೆಯ ನಿರೂಪಣೆಯಲ್ಲಿರುವ ವಿಸ್ತಾರವಾದ ಹರವು ಎಲ್ಲ ಸೃಜನಶೀಲತೆಯ ಅಂಗವಾಗಬೇಕಾದ ಕಲ್ಪಿತ ಜಗತ್ತಿನ ಅದರಲ್ಲಿನ ವಾಸ್ತವತೆಯ ಅಂಶಗಳಲ್ಲಿ ಕಾಣಿಸುವುದಿಲ್ಲ. ಆದ್ದರಿಂದಲೇ ಈ ಕಥೆಗಳಲ್ಲಿ ದಲಿತ ಜಗತ್ತಿನ ಒಳಗೇ ಜರುಗುತ್ತಿರುವ ಪಲ್ಲಟಗಳಾವುವು. ಆಂತರಿಕ ಸಂಘರ್ಷಗಳೇನು, ಬದಲಾವಣೆಯ ಹಂತದಲ್ಲಿ ವರ್ತಮಾನದ ಜತೆಗಿನ ಅನುಸಂಧಾನದ ನೆಲೆ ಯಾವುದು? ಚರಿತ್ರೆಗೆ ಪ್ರತೀಕಾರ ಸ್ವರೂಪದ ಸ್ಪಂದನ ಯಾವುದು? ಎಂಬಂತಹ ಅನೇಕ ಪ್ರೈೆಗಳ ಕಡೆಗೆ ಅವರ ಗಮನ ಉತ್ತರಿಸುವುದಿಲ್ಲ ಅಷ್ಟರಮಟ್ಟಿಗೆ ಅವು ವರ್ತಮಾನದ ಒಂದು ಆಯಾಮದ ಕಥೆಗಳಾಗಿ ಮಾತ್ರ ಉಳಿದುಬಿಡುವ ಸಾಧ್ಯತೆಗಳಿವೆ.

ಅಡಿ ಟಿಪ್ಪಣಿ

೧. ಸತ್ಯನಾರಾಯಣ ಕೆ., 'ನಿಮ್ಮ ಮೊದಲ ಪ್ರೇಮದ ಕತೆ', ಪುಟ-೮೬.

೨. ಸತ್ಯನಾರಾಯಣ ಕೆ., 'ನಿಮ್ಮ ಮೊದಲ ಪ್ರೇಮದ ಕತೆ', ಪುಟ-೩೦.

೩. ಸತ್ಯನಾರಾಯಣ ಕೆ., 'ಹೆಗ್ಗುರುತು', ಪುಟ-೧೧೫.

೪. ಸತ್ಯನಾರಾಯಣ ಕೆ., 'ನಕ್ಸಲ್ ವರಸೆ', ಪುಟ-೧೦೪.

೫. ಸತ್ಯನಾರಾಯಣ ಕೆ., 'ನಾಳೆ ಬರೆದ ಕಥೆಗಳು', ಪುಟ-೧೪೧.

೬. ಸತ್ಯನಾರಾಯಣ ಕೆ., 'ಹನ್ನೊಂದನೆಯ ಇಂದ್ರಿಯ', ಪುಟ-೬೭.

೭. ಸತ್ಯನಾರಾಯಣ ಕೆ., 'ಹಳೆಯ ಕಾಲದ ಹೊಸ ಕತೆ', ಪುಟ-೭೪.

೮. ಸತ್ಯನಾರಾಯಣ ಕೆ., 'ದಲಿತರ ನಮ್ಮ ಕಥೆಗಳು', ಪುಟ-೮೦.

೯. ಸತ್ಯನಾರಾಯಣ ಕೆ., 'ದಲಿತರ ನಮ್ಮ ಕಥೆಗಳು', ಪುಟ-೫೩.

೧೦. ಸತ್ಯನಾರಾಯಣ ಕೆ., 'ದಲಿತರ ನಮ್ಮ ಕಥೆಗಳು', ಪುಟ-೧೧.

❖❖❖

ಅಧ್ಯಾಯ : ನಾಲ್ಕು

ವಿಮರ್ಶಕರ ದೃಷ್ಟಿಯಲ್ಲಿ ಕೆ. ಸತ್ಯನಾರಾಯಣ'ರವರ ಕಥೆಗಳು

ಅಧ್ಯಾಯ: ನಾಲ್ಕು

ವಿಮರ್ಶಕರ ದೃಷ್ಠಿಯಲ್ಲಿ ಕೆ. ಸತ್ಯನಾರಾಯಣ'ರವರ ಕಥೆಗಳು

ಕೆ. ಸತ್ಯನಾರಾಯಣ ಈಚಿನ ವರ್ಷಗಳಲ್ಲಿ ಕನ್ನಡ ಕಥನ ಕಲೆಗೆ ಹೊಸ ಆಯಾಮ ನೀಡುತ್ತಿರುವ ಸಕ್ರಿಯ ಲೇಖಕ. ಅವರು ಹದಿಮೂರು ಕಥಾಸಂಕಲನ, ಆರು ಕಾದಂಬರಿ, ಐದು ಪ್ರಬಂಧ ಸಂಕಲನ, ಐದು ವಿಮರ್ಶಾ ಸಂಕಲನ ಹಾಗೂ ಮೂರು ಅಂಕಣ ಬರಹ ಸಂಕಲನ, ಪ್ರವಾಸ ಕಥನಗಳನ್ನು ಪ್ರಕಟಿಸಿದ್ದಾರೆ. ಅವರ ಕಥೆ ಮತ್ತು ಕಾದಂಬರಿಗಳ ಶಕ್ತಿ ಹಾಗೂ ಮಿತಿಗಳ ಕುರಿತಾಗಿ ಕನ್ನಡ ಸಾಹಿತ್ಯದ ಗೌರವಾನ್ವಿತ ವಿಮರ್ಶಕರುಗಳಾದ ಜಿ. ರಾಜಶೇಖರ್, ಎಚ್.ಎಸ್. ರಾಘವೇಂದ್ರರಾವ್, ಕೀರ್ತಿನಾಥ ಕುರ್ತಕೋಟಿ, ರಾಘವೇಂದ್ರ ಪಾಟೀಲ, ಬಿ.ಸಿ. ರಾಮಚಂದ್ರ ಶರ್ಮ, ಯು.ಆರ್. ಅನಂತಮೂರ್ತಿ, ಎಸ್.ಆರ್. ವಿಜಯಶಂಕರ್ ಇವರುಗಳಿಂದ ಹಿಡಿದು, ನರೇಂದ್ರ ಪೈಯವರಂತಹ ಆಸಕ್ತ ಓದುಗರವರಿಗೆ ಅನೇಕರು ಮೌಲಿಕವಾದ ಬರಹಗಳನ್ನು ಬರೆದಿದ್ದಾರೆ.

ರಾಘವೇಂದ್ರ ಪಾಟೀಲರು ಕೆ. ಸತ್ಯನಾರಾಯಣರವರ ಕಥೆಗಳನ್ನು ಕುರಿತು ಈ ರೀತಿ ಬರೆಯುತ್ತಾರೆ. "ಇವರ ಕತೆಗಳು ವೈಯಕ್ತಿಕ ಜೀವನ–ಕೌಟುಂಬಿಕ ಜೀವನ–ಸಾಮಾಜಿಕ ಜೀವನ ಇವುಗಳೆಲ್ಲವೂ ತಮ್ಮಷ್ಟಕ್ಕೆ ತಾವು ಸ್ವಯಂ ಸಾಧ್ಯತೆಗಳನ್ನು ಹೊಂದಿರುವುದನ್ನು ಬಂಡಾಯದ ತತ್ವಗಳು ಹೋಗಲಿ ಯಾವುದೇ ತಾತ್ವಿಕ ವಿಶ್ಲೇಷಣೆಗೆ ಬದ್ಧವಾಗಿರದೆ ನಿರಂಬಳವಾಗಿರುವುದನ್ನು ಪ್ರತಿಪಾದಿಸುತ್ತವೆ. ಇಲ್ಲಿ ಜೀವನ ವಿನ್ಯಾಸದ ಬಗ್ಗೆ ಯಾವುದೇ ತರ್ಕವು, ಯಾವುದೇ ತತ್ವ ವಿಶ್ಲೇಷಣೆಯು ಜೀವನವಿನ್ಯಾಸದ ಓಟವನ್ನು ಹಿಡಿಯಲಾಗದೇ ಏದುಸಿರು ಬಿಡುತ್ತಾ ನಿಂತುಬಿಡುತ್ತವೆ. ಆದರೆ ಇದು ಕೇವಲ ಪಾರ್ಶ್ವಚಿಂತನೆಯಂತೆ ಸಾಧಿತವಾಗುತ್ತದೆ. ಎಲ್ಲಿಯೂ ಇಂತಹ ಪ್ರತಿಪಾದನೆಯ ಕಥೆಗಳ ಘೋಷಿತವಸ್ತುವಾಗುವುದಿಲ್ಲ... ಕತೆಗಳು ಇಂಥ ನಿಲುವುಗಳಿಂದ ಚರಿತ್ರೆಯ ಮೂಲಘಟಕಗಳಾದ ಒಬ್ಬೊಬ್ಬ ವ್ಯಕ್ತಿಯ ಜೀವನ ವಿನ್ಯಾಸವು ಮಹತ್ವಗಳಿಸಿಕೊಳ್ಳುತ್ತದೆ. ಒಬ್ಬೊಬ್ಬ ವ್ಯಕ್ತಿಯ ಬದುಕನ್ನು (ಸಾವನ್ನು) ಒಂದು ಸಾಮಾನ್ಯೀಕೃತ ವಿನ್ಯಾಸದ ಅಪವಾದದಂತೆ ಕಾಣಲಾಗದು. ಇಡೀ ಬದುಕಿನ ಹರಹನ್ನು

ಅದರ ವಿಪುಲ ಸಾಧ್ಯತೆಗಳನ್ನು ಅರಿಯಬೇಕಾದರೆ ಚರಿತ್ರೆಯ ಹರಹಿನಲ್ಲಿ ಪಾಗಿಗಳಾಗಿರುವ ಎಲ್ಲರ ಬದುಕಿನ ವಿನ್ಯಾಸಗಳನ್ನು ತಿಳಿಯಬೇಕಾಗುತ್ತದೆ. ಆದ್ದರಿಂದಲೇ ಕಥೆ ಹೇಳುವುದು, ಕಥೆ ಬೆಳೆಸುವುದು ಬದುಕಿನ ಹರಹಿನ ಸಮಗ್ರತೆಯ ಗ್ರಹಿಕೆಗೆ ಒಂದು ಅನಿವಾರ್ಯವಾದ ಮಾರ್ಗವಾಗುತ್ತದೆ." ಸ್ವತಃ ಕಥೆಗಾರರಾದ ಪಾಟೀಲರು ಅನೇಕ ಕುತೂಹಲಕಾರಿಯಾದ ಸಂಗತಿಗಳನ್ನು ಹೇಳಿದ್ದಾರೆ.[೧]

ಜಿ. ರಾಜಶೇಖರ್ ರವರ ಪ್ರಕಾರ: ಕೆ. ಸತ್ಯನಾರಾಯಣರವರ ಕತೆಗಳಲ್ಲಿ ಕತೆ ಹೇಳುವವರು, ಕೇಳುವವರು ಮತ್ತು ಕಥನದ ಸಂದರ್ಭಗಳು ಕತೆಯಷ್ಟೇ ಪ್ರಧಾನವಾಗಿವೆ. ಇರುವುದು ಮತ್ತು ಕಾಣಿಸುವುದು ಒಂದೇ ಅಲ್ಲ ಎಂಬ ದಿಗ್ಭ್ರಮೆಯಲ್ಲಿಯೇ ಇವರು ತಮ್ಮ ಕತೆಗಳನ್ನು ಹೇಳುವುದು. ಈ ಕತೆಗಳಲ್ಲಿ ಸತ್ಯ ಮತ್ತು ಸುಳ್ಳುಗಳ ಸರಳ ವಿಭಜನೆ ಇಲ್ಲ. ಇವರ ಕತೆಯ ಊರುಗಳು ದೊಡ್ಡ ನಗರಗಳಲ್ಲ, ತೀರಾ ಹಳ್ಳಿ ಕೊಂಪೆಗಳೂ ಅಲ್ಲ. ಹಳೆಯದ್ದನ್ನು ಪೂರ್ತಿ ಬಿಡಲಾಗದ, ಪೂರ್ತಿ ಆಧುನಿಕವಾಗುವಷ್ಟು ಆರ್ಥಿಕ ಬಲವೂ ಇಲ್ಲದ ಈ ಊರುಗಳ ಬದುಕು ಸಾಂಸ್ಕೃತಿಕ ಸಂದಿಗ್ಧದ ಕತೆಯನ್ನೇ ಸತ್ಯನಾರಾಯಣ ಮುಂದುವರಿಸುತ್ತಿರುವುದು.... ಇಂತಹ ಕತೆ ಹೇಳುವುದಕ್ಕೆ ಪಳಗಿದ ಗೃಹಸ್ಥರೇ ಸರಿ. ಇರುವುದು ಮತ್ತು ಕಾಣುವುದರ ನಡುವೆ ಇರುವ ಅಂತರ ಈ ಕತೆಗಳಲ್ಲಿ ಹಲವು ವಿನ್ಯಾಸಗಳನ್ನು ಪಡೆದುಕೊಳ್ಳುತ್ತದೆ. ರಾಮಾನುಜನ್ ಕವಿತೆಯ ಮೊಹಲ್ಲದೊಳಗೆ ಸಿಗುವ ಇನ್ನೊಂದು ಮೊಹಲ್ಲದ ಹಾಗೆ ಇವರ ಕತೆಯೊಳಗೆ ಇನ್ನೊಂದು ಕತೆ. ಅದರೊಳಗೆ ಮತ್ತೊಂದು ವೃತ್ತಾಂತ.[೨]

ಎನ್.ಎಸ್. ಶ್ರೀಧರಮೂರ್ತಿರವರ ಪ್ರಕಾರ ಕೆ. ಸತ್ಯನಾರಾಯಣ ಅವರ ಕಥೆಗಳಲ್ಲಿ ಮಾಸ್ತಿಯವರ ಛಾಯೆಯನ್ನು ಗುರುತಿಸುವ ಪ್ರಯತ್ನದಂತೆ ಅವರನ್ನು "ಮಾಸ್ತಿಯವರ ಉತ್ತರಾಧಿಕಾರಿ" ಎಂದು ಕರೆಯುವ ಅತಿರೇಕವೂ ಕೂಡ ಕನ್ನಡ ವಿಮರ್ಶಾ ಪರಂಪರೆಯಲ್ಲಿ ಕಂಡುಬಂದಿದೆ. ಮಾಸ್ತಿಯವರಂತೆ ಸತ್ಯನಾರಾಯಣ ಅವರು ಕೂಡ ಕಥನದಲ್ಲಿ ಯಾರಿಂದಲೋ ಕೇಳಿದ, ಎಲ್ಲಿಯೋ ಗ್ರಹಿಸಿದ ಸಂಗತಿಗಳನ್ನು ಕಥೆಯಾಗಿಸಿದ ತಂತ್ರಗಾರಿಕೆಯನ್ನು ಬಳಸಿಕೊಳ್ಳುತ್ತಾರೆ ಎನ್ನುವುದು ಇಂತಹ ಗ್ರಹಿಕೆಗೆ ಮುಖ್ಯ ಕಾರಣ. ಇದರ ಜೊತೆಗೆ ಮಾಸ್ತಿಯವರಂತೆ ಸತ್ಯನಾರಾಯಣ ಅವರ ಕಥೆಗಳಲ್ಲಿಯೂ ವಿವರಗಳ ಸೂಕ್ಷ್ಮದಲ್ಲಿಯೇ ಕಥೆಕಟ್ಟುವ ಪ್ರಯತ್ನವಿದ್ದಂತೆ ಅಪಾರ ಜೀವನ ಪ್ರೀತಿಯ ಸೆಲೆ ಕೂಡ ಕಥೆಗಳಲ್ಲಿ ಕಾಣುತ್ತದೆ. ಆದರೆ ಇಂತಹ ಹೋಲಿಕೆಗಳು ಇಲ್ಲಿಗೇ ಮುಗಿಯುತ್ತವೆ. ಮಾಸ್ತಿಯವರದು ನಂಬಿಕೆಯನ್ನೇ ನೆಲೆ ಆಗಿಸಿಕೊಂಡ ಕಥೆಗಳು. ಅವರು ಸ್ಥಳ ಪುರಾಣಗಳನ್ನು ಕಥೆಯಾಗಿಸುವ ಕ್ರಮದಲ್ಲಿಯೇ ಯಾರೋ ದಾರಿ ಹೋಕ ಹೇಳಿದ ವಸ್ತುವನ್ನು ಕಥೆಯಾಗಿಸಿ ಬಿಡಬಲ್ಲರು. ಕಥೆ ಕೇಳುವವರು ಪ್ರಶ್ನಿಸಬಲ್ಲರು ಎಂದು ಅವರು ಒಪ್ಪಿದವರಲ್ಲ. ಕಥೆ ಹೇಳುವುದು ಈ ಅರ್ಥದಲ್ಲಿ ಅವರಿಗೆ ಪವಿತ್ರವಾದ ಕ್ರಿಯೆ. ಆದರೆ ಸತ್ಯನಾರಾಯಣ ಅವರಿಗೆ ತಾನು ಹೇಳುತ್ತಿರುವುದು ಕಥೆ ಮಾತ್ರವಲ್ಲ ಎನ್ನುವುದು ಗೊತ್ತು. ಅದಕ್ಕೊಂದು ವೈಚಾರಿಕ ನೆಲೆಗಟ್ಟನ್ನು ಕಲ್ಪಿಸುವ ಕೆಲಸವನ್ನು ಅವರು ಪ್ರಜ್ಞಾಪೂರ್ವಕವಾಗಿಯೇ ಮಾಡುತ್ತಾರೆ.

ಗಮನಿಸಬೇಕಾದ ಸಂಗತಿ ಎಂದರೆ ಸತ್ಯನಾರಾಯಣ ಅವರ ಕಥೆಗಳಲ್ಲಿ ಕಥೆಯನ್ನು ಹೇಳುವವರು ಎಂದಿಗೂ ತರುಣರಾಗಿರುವುದಿಲ್ಲ. ಮಧ್ಯವಯಸ್ಕರು ಮತ್ತು ಕೊಂಚ ಮಾತಿನ ಚಪಲವಿರುವವರೇ ಆಗಿರುತ್ತಾರೆ. ಈ ಮೂಲಕ ವಾಸ್ತವ ಮತ್ತು ಕಲ್ಪನೆಯ ನಡುವೆ ವೈಚಾರಿಕತೆಯ ಸೇತುವೆಯನ್ನು ಕಟ್ಟುವ ಕೆಲಸವನ್ನು ಸತ್ಯನಾರಾಯಣ ಎಚ್ಚರಿಕೆಯಿಂದ ಮಾಡುತ್ತಾರೆ. ಬಹಳ ಮುಖ್ಯವಾದ ಸಂಗತಿ ಎಂದರೆ ಸತ್ಯನಾರಾಯಣ ಅವರ ಕಥೆಗಳಲ್ಲಿ ಪ್ರಸಿದ್ಧರು ಬರುವುದು ವಿವರಗಳ ಕಾರಣದಿಂದಲ್ಲ ಬದಲಾಗಿ ವೈಚಾರಿಕ ಕಾರಣದಿಂದ.[೩]

ಕನ್ನಡದ ಹಿರಿಯ ವಿಮರ್ಶಕರಾದ ಕೀರ್ತಿನಾಥ ಕುರ್ತಕೋಟಿಯವರು ಗುರುತಿಸಿದಂತೆ ಕೆ. ಸತ್ಯನಾರಾಯಣ ತಮ್ಮ ಬರಹಗಳಲ್ಲಿ ಸಮಕಾಲೀನ ಇತಿಹಾಸವೊಂದರ ಎಳೆಗಳನ್ನು ನೇಯುವ ಕೆಲಸದಲ್ಲಿ ನಿರತರಾಗಿದ್ದಾರೆ. ಅವರ ಈ ಕೆಲಸಕ್ಕೆ ಒದಗುವುದು ಸಮಾಜದ ಮೂಲ ಘಟಕವಾದ ಕುಟುಂಬ. ಅವರು ಕುಟುಂಬದ ಮೂಲಕವೇ ವ್ಯಕ್ತಿಯನ್ನು ಸಮಾಜವನ್ನು ಅವಧರಿಸುವುದು ಕುಟುಂಬದ ಬಗ್ಗೆ ಬರೆಯುವುದು, ಸಂಸಾರಗಳ ಕಥೆಯಲ್ಲೆ ಸಮಾಜವನ್ನು ಕಾಣಿಸುವುದು ಸಾಹಿತ್ಯಕ್ಕೆ ಹೊಸದಲ್ಲ. ಅದು ಸಾಹಿತ್ಯದ ಮೂಲ ವಿಧಾನವೇ ಹೌದು. ಆದರೆ ಚರಿತ್ರೆಯ ಎಚ್ಚರದಲ್ಲಿ ಕಾಲದ ಒತ್ತಡದಲ್ಲಿ ಕುಟುಂಬ ಸಂಬಂಧಗಳನ್ನು ಪರೀಕ್ಷಿಸುತ್ತಾ ಸತ್ಯನಾರಾಯಣ ಹೊಸ ಕತೆ ಕಟ್ಟುತ್ತಾರೆ.[೪]

ಕನ್ನಡದ ಇನ್ನೊಬ್ಬ ಮುಖ್ಯ ವಿಮರ್ಶಕರಾದ ಎಚ್.ಎಸ್. ರಾಘವೇಂದ್ರರಾವ್ ಹೇಳುವಂತೆ ಸತ್ಯನಾರಾಯಣ ಅವರ ಕಥೆಗಳು ನೂರಕ್ಕೆ ನೂರರಷ್ಟು ನಮ್ಮ ಕಾಲದ ಕತೆಗಳು. ಕಳೆದ ಎರಡು ಮೂರು ದಶಕಗಳಲ್ಲಿ ಕನ್ನಡ ಸಮುದಾಯವು ಅನುಭವಿಸಿದ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳು ಇವರ ಕತೆಗಳಲ್ಲಿ ನೂರಾರು ಮಾನುಷಿಕ ವಾಸ್ತವತೆಗಳ ಮೂಲಕ ಮೈದಳೆದಿವೆ.[೫]

ಕೆ. ಸತ್ಯನಾರಾಯಣರ ಎಲ್ಲಾ ಬರಹಗಳಲ್ಲೂ, ಒಮ್ಮೆ ಅನಂತಮೂರ್ತಿಯವರೇ ಹೇಳಿದ ಹಾಗೆ, ಸತ್ಯದ ಶೋಧವೇ ನಡೆದಿರುತ್ತದೆ ಎನ್ನುವುದು ಒಂದು ಮುಖ್ಯ ಅಂಶ. ಇನ್ನೊಂದು, ಕೆ. ಸತ್ಯನಾರಾಯಣರ ಎಲ್ಲಾ ಬರಹದಲ್ಲೂ ಇರುವ, ಎದ್ದು ಕಾಣುವ ಪ್ರಾಮಾಣಿಕತೆ ಇದು ಇಲ್ಲಿ ಬಹಳ ಮುಖ್ಯ. ಇವತ್ತು ಸಾಹಿತ್ಯ ಸೃಷ್ಟಿಯ ಹಂತದಲ್ಲಿ ಹೊಸ ಪೀಳಿಗೆಯನ್ನು ಅನೇಕ ವಿಧದಲ್ಲಿ ಕಾಡುತ್ತಿರುವ ತೊಡಕುಗಳಲ್ಲಿ ಇದು ಮಹತ್ವದ್ದೆಂದು ಕಾಣುತ್ತದೆ. ನೇರ ಅನುಭವಕ್ಕೆ ದಕ್ಕಿದ್ದನ್ನು ಮಾತ್ರ ಬರೆಯುವ, ಬರೆಯಬೇಕೆನ್ನುವ ಒತ್ತಡ ಒಂದು ಕಡೆ, ಬರಹಗಾರ ತನ್ನ Comfort zone ಬಿಟ್ಟು ಚಾಚಿಕೊಳ್ಳಬೇಕು ಎನ್ನುವ ನಿರೀಕ್ಷೆ ಇನ್ನೊಂದು ಕಡೆ ಅವನನ್ನು ಕಾಡುತ್ತಿರುವಾಗಲೇ ಜಾಗತಿಕ ಮಟ್ಟದಲ್ಲಿ ಹೊಸ ತಲೆಮಾರು ಎತ್ತಿಕೊಳ್ಳುತ್ತಿರುವ ವಸ್ತು, ಪ್ರಸ್ತುತ ಪಡಿಸಲು ಬಳಸುತ್ತಿರುವ ತಂತ್ರ ಮತ್ತು ಅನುಭವಕ್ಕೆ ತೆರೆದುಕೊಳ್ಳುತ್ತಿರುವ ಪರಿ ಗಮನಾರ್ಹವಾಗಿದೆ. ಅಪ್ರಸ್ತುತವಾದರೂ ಇದನ್ನು ಕೊಂಚ ವಿವರವಾಗಿ ಗಮನಿಸಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತೇನೆ.[೬]

ಬಿ.ವಿ. ಕೆದಿಲಾಯ ರವರ ಪ್ರಕಾರ ಕೆ. ಸತ್ಯನಾರಾಯಣರವರ ಕತೆಗಳಲ್ಲಿ ನವ್ಯೋತ್ತರದ ಅತ್ಯಾಧುನಿಕ ಜಗತ್ತಿನ ವೈವಿಧ್ಯಮ ವಾಸ್ತವಗಳು, ಮಾಸ್ತಿ ಪರಂಪರೆಯ ಸರಳ, ಆಪ್ತ, ನಿಧಾನ ಶ್ರುತಿಯ ಸೌಮ್ಯ ಶೈಲಿಯಲ್ಲಿ ಮೈತಾಳಿವೆ. ಇವರ ಕತೆಗಳಲ್ಲಿ ತಂತ್ರವೈವಿಧ್ಯ, ಪ್ರಯೋಗಶೀಲತೆ ಸಾಕಷ್ಟಿದ್ದರೂ, ಅವು ಸುಖವಾಗಿ ಓದಿಸಿಕೊಂಡು ಹೋಗುತ್ತವೆ. ಕತೆಗಳಲ್ಲಿ ಲೇಖಕನೂ ನಿರೂಪನಾಗಿ ಹಾಗೂ ಒಮ್ಮೊಮ್ಮೆ ಪಾತ್ರವಾಗಿ ಪಾಲ್ಗೊಳ್ಳುತ್ತಾ, ಕ್ರಮೇಣ ಓದುಗರೂ ಕತೆ ನೀಡುವ ಅನುಭವದಲ್ಲಿ ಒಂದಾಗುವಂತೆ ಮಾಡುವ ವಿಶೇಷ ಕೌಶಲವಿದೆ. ಆವೇಶ, ಆಕ್ರೋಶ, ನಾಟಕೀಯತೆ, ಭಾವುಕತೆಯಾಗಲೀ, ಕಥಾಶಿಲ್ಪದ ಬಿಗಿಬಂಧವಾಗಲೀ ಇಲ್ಲಿ ಇಲ್ಲ. ಆದರೆ ಕತೆಗಳು ಎಲ್ಲೂ ಸಪ್ಪೆಯಾಗುವುದಿಲ್ಲ. ಲೇಖಕರ ಅನುಭವ ಪ್ರಪಂಚದ ವಿಸ್ತಾರ, ಆಳ, ವೈವಿಧ್ಯ, ಸಮಕಾಲೀನತೆ, ಅಧಿಕೃತತೆ, ಪ್ರಾಮಾಣಿಕತೆ, ಸೂಕ್ಷ್ಮ ವಿವರಗಳ ಸಮೃದ್ಧಿ ಮುಂತಾದ ಗುಣಗಳು ಓದುಗನ ಮನಸ್ಸನ್ನು ಆಳವಾಗಿ ಕಲಕುವುದಲ್ಲದೆ ಚಿಂತನೆಯನ್ನು ಆತ್ಮವಿಮರ್ಶೆಯನ್ನು ಪ್ರೇರಿಸುವಂತೆ ಕತೆಗಳು ಸಾಗುತ್ತವೆ.[೭]

ಎಸ್.ಆರ್. ವಿಜಯಶಂಕರ್‌ರವರು 'ವಿಕ್ಟೋರಿಯಾ ಮಗ ದೇವಲಿಂಗು' ಕಥಾಸಂಕಲನವನ್ನು ಕುರಿತು ಈ ರೀತಿ ಹೇಳಿದ್ದಾರೆ. ಈ ಸಂಕಲನದ ಕಥೆಗಳು ಇಪ್ಪತ್ತನೆಯ ಶತಮಾನದ ಕೊನೆಯ ದಶಕದ ನಮ್ಮ ನಿಮ್ಮ ಸಾಮಾನ್ಯ ಜೀವನದ ಸಾಂದ್ರರೂಪ. ಇಲ್ಲಿನ ಕಥಾ ಪಾತ್ರಗಳು ಜೀವಿಸುವುದು ಮಂಡ್ಯ ಸೀಮೆ ಕೇಂದ್ರಿತ ಹಳೆ ಮೈಸೂರು ಪ್ರಾಂತ್ಯದಲ್ಲಿ. ಅವು ಹಿಡಿದಿಡಲು ಪ್ರಯತ್ನಿಸುವುದು ಕಷ್ಟದಲ್ಲಿ ಬೆಳೆದು ಮಧ್ಯಮ ವರ್ಗದವರಾದವರ ಜೀವನಾನುಭವದ ಅರ್ಥ ವೈವಿಧ್ಯಗಳನ್ನು ಆ ಸಮಾಜದ ಕನಸುಗಳನ್ನು ಈಡೇರದ ಹಂಬಲಗಳನ್ನು, ತನಗರಿವಿಲ್ಲದ ತನ್ನ ಆದರ್ಶರಹಿತ ಸ್ಥಿತಿಯನ್ನು ಕತೆಗಳು ಬಿಂಬಿಸುತ್ತವೆ.[೮]

ಅನುಭವಕ್ಕೆ ಇಂದು ವಿಭಿನ್ನ ಕಥೆಗಳಲ್ಲ. ಆದ್ದರಿಂದಲೇ ಕೆ. ಸತ್ಯನಾರಾಯಣ ಅವರ ಕಥೆಗಳಲ್ಲಿ ರಾಜಕೀಯ ಒಂದು ಸ್ಥಾಯಿಸ್ಥಿತಿ ಅದು ಒಂದು ಗ್ರಾಮದ ಪುಟ್ಟ ತಳದಿಂದ ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ನೆಲೆಗಳಲ್ಲಿ ಹರಡಿ ಎಲ್ಲವನ್ನು ಆವರಿಸಿ, ಆಗ್ರಹಿಸಿ ಹೇಳಲು ಹವಣಿಸುವ ಒಂದು ನಿರಂತರ ಪ್ರಯತ್ನ. ವ್ಯಕ್ತಿ, ಸಮಾಜ, ರಾಜಕಾರಣ, ಸಮಕಾಲೀನ ಘಟನೆಯೊಂದರ ಎಳೆಯಿಂದ, ಒಂದರೊಳಗೊಂದು ಸುಳಿದು ಸುತ್ತಿ ನಮ್ಮ ಕಾಲದ ಅನುಭವವನ್ನು ಒಟ್ಟಾಗಿ ಹಿಡಿಯಲು ಪ್ರಯತ್ನಿಸುವುದೇ ಈ ಕಥೆಗಳ ಪ್ರಧಾನ ನೆಲೆ. ಆದ್ದರಿಂದ ಒಂದಾದ ಮೇಲೊಂದರಂತೆ ಇಲ್ಲಿನ ಕಥೆಗಳು ಶೋಧಿಸಲು ಪ್ರಯತ್ನಿಸುವುದು ನಮ್ಮ ಅರಿವಿಗೆ ಬಂದೂ, ಹಿಡಿತಕ್ಕೆ ಸಿಗದಿರುವ ಬದುಕಿನ ಆ ವರ್ತನ ಲಯವನ್ನು, ಆದರ್ಶಕರವಾಗಿರುವ ಸಮಾಜದಲ್ಲಿ ಬದುಕಿನ ಅರ್ಥಪೂರ್ಣತೆಯ ಅನಂತ ಸಾಧ್ಯತೆಗಳ ಕೇಂದ್ರ ಸ್ಫೂರ್ತಿಯನ್ನು ತನ್ನ ಕಾಲದ ಬದುಕನ್ನು ತನ್ನೊಳಗೆ ಆವಿರ್ಭವಿಸಿ ಅರ್ಥಮಾಡಿಕೊಳ್ಳುವ ಈ ಪ್ರಕ್ರಿಯೆ ನವ್ಯ ಕಾಲದಲ್ಲಿ ಬೆಳೆದ ಕನ್ನಡ ಕಥನ ಕ್ರಮಕ್ಕಿಂತಲೂ ಬೇರೆಯಾದ ನೆಲೆ.

ಹೀಗೆ ನಮ್ಮ ಕಾಲದ ಇಂದಿನ ಮೌಲ್ಯಗಳನ್ನು, ಬದುಕಿನ ನೆಲೆಗಳನ್ನು ಒಂದು ಸಂದರ್ಭದ ಒಳಹೊಕ್ಕು ಅಲ್ಲಿನ ತಲ್ಲೀನತೆಯಲ್ಲಿ ಆವಾಹಿಸಿಕೊಂಡು ಹೇಳುವಾಗ ಕಥೆಯೊಂದು ರೂಪಕ ಶಕ್ತಿಯಿಂದ ಕಂಗೊಳಿಸಬೇಕೆ? ಎನ್ನುವ ಅನುಮಾನವನ್ನು ಕೆ. ಸತ್ಯನಾರಾಯಣ ಅವರ ಕಥೆಗಳು ಗಂಭೀರವಾಗಿ ನಮ್ಮ ಎದುರಿಗೆ ಒಡ್ಡುತ್ತವೆ. ಮಂಡ್ಯ ಮೈಸೂರುಗಳ ಕನ್ನಡದ ನುಡಿಗಟ್ಟಲ್ಲಿ, ಅಲ್ಲಿನ ಆಡುಮಾತಿನ ಲಯದ ಸಾಮ್ಯತೆಯಲ್ಲಿ ಶಿಷ್ಟಕನ್ನಡದ ವರದಿಯ ಶಕ್ತಿಯನ್ನು ಇವರ ಕಥೆಗಳು ಸೃಜನಾತ್ಮಕವಾಗಿ ಬಳಸುತ್ತಿವೆ. ಘಟನೆಯೊಂದರ ಸಮಗ್ರ ವರದಿ ಕಾಲದ ಕಣಿ ಹೇಳುತ್ತವೆ. ನಮ್ಮ ಪರಂಪರಾಗತ ಕಥನ ಶೈಲಿಯ ಸತ್ವವನ್ನು ಉಳಿಸಿಕೊಂಡು ಬದುಕಿನ ಅಂತರಾಗ್ನಿಯನ್ನು ಸಾಮಾಜಿಕ ವರದಿಯಲ್ಲಿ ಹೊಳೆಯಿಸಲು ಪ್ರಯತ್ನಿಸುವ ಕತೆಗಳಿವು. ಆದ್ದರಿಂದಲೇ ಕೆ. ಸತ್ಯನಾರಾಯಣ ಅವರ ಕಥೆಗಳು ಕನ್ನಡ ಸಾಹಿತ್ಯ ಪರಂಪರೆಯ ಮುಂದಿನ ಬೆಳವಣಿಗೆಯ ಸ್ಪಷ್ಟ ಸೂಚನೆಗಳನ್ನು ನೀಡುತ್ತವೆ.

"ಮನುಷ್ಯನ ಪ್ರಜ್ಞೆಯ ವೈವಿಧ್ಯವನ್ನು ಅದರೆಲ್ಲ ಸಂಕೀರ್ಣತೆಯಲ್ಲಿ, ಸಾಂಸ್ಕೃತಿಕ ವೈವಿಧ್ಯದಲ್ಲಿ ತೆರೆದ ಮನಸ್ಸಿನಿಂದಲೂ ಮಮಕಾರದಿಂದಲೂ ಒಳಗು ಮಾಡಿಕೊಳ್ಳಲು ಪ್ರಯತ್ನಿಸುವುದೇ ಕಥನದ ಮುಖ್ಯ ಗುರಿ" ಎಂದು ಹೇಳಿರುವ ಲೇಖಕರು ಆ ಮೂಲಕ ಅವರ ಬರಹಗಳ ಸ್ವರೂಪವನ್ನು ನ್ಯಾಯವಾಗಿ ಸಮರ್ಥಿಸಿಕೊಂಡಿದ್ದಾರೆ ಎಂದು ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ಅಭಿಪ್ರಾಯಪಟ್ಟಿದ್ದಾರೆ.[೯]

ಕೆ. ಸತ್ಯನಾರಾಯಣ ಸಮಕಾಲೀನ ಸಾಮೂಹಿಕ ವಾಸ್ತವಗಳ ಶೋಧನೆಯನ್ನು ಬದುಕಿನ ವೈರುದ್ಯಗಳು ಹಾಗೂ ಜಟಿಲತೆಗಳನ್ನು ಗ್ರಹಿಸಿಕೊಂಡು ಗಟ್ಟಿಯಾದ ಹಾಗೂ ಸಮೃದ್ಧವಾದ ಕಥಾ ವಿವರಗಳ ಮೂಲಕ ವಿಭಿನ್ನ ಕೋನಗಳಿಂದ ಮಾಡಬಲ್ಲವರು. ಸತ್ಯನಾರಾಯಣರ ಅನುಭವಲೋಕ ದೊಡ್ಡದು ಮತ್ತು ವಿಭಿನ್ನವಾದುದು. ಅವರ ಕತೆಗಳು ನಮ್ಮ ಇವತ್ತಿನ ಬದುಕಿನ ಅನೇಕ ಮಗ್ಗಲುಗಳ, ನೆಲೆಗಳ ಅನ್ವೇಷಣೆಗೆ ತೊಡಗಿಕೊಳ್ಳುತ್ತವೆ. ಸಮಷ್ಟಿಹಿತ ಸಹಬಾಳ್ವೆಗಾಗಿ ಅವು ಸದಾ ತುಡಿಯುವಂತಹವು. ನವ್ಯೋತ್ತರ ಕಥಾ ಪ್ರಪಂಚವನ್ನು ತಮ್ಮ ಸಮೃದ್ಧ ಕಥನದಿಂದ ಶ್ರೀಮಂತಗೊಳಿಸುತ್ತಿರುವ ಸತ್ಯನಾರಾಯಣ ನಮ್ಮ ಕಾಲದ ಒಬ್ಬ ಪ್ರಮುಖ ಕತೆಗಾರರು ಎಂದು 'ಮಲ್ಲಿಕಾರ್ಜುನ ಹಿರೇಮಠ' ಅಭಿಪ್ರಾಯಪಟ್ಟಿದ್ದಾರೆ.[೧೦]

ಸತ್ಯನಾರಾಯಣರ ಕತೆಗಳಲ್ಲಿ ಒಬ್ಬ ನಿರೂಪಕ ತನ್ನ ಪರಿಚಯದ ಪರಿಧಿಯೊಳಗೆ ಬರುವ ವ್ಯಕ್ತಿಗಳ ಕತೆಗಳನ್ನು ನಿರೂಪಿಸುತ್ತಾ ಹೋಗುತ್ತಾನೆ. ಕೆಲವು ಕತೆಗಳಲ್ಲಿ ನಿರೂಪಕ ಒಬ್ಬ ಮುಖ್ಯ ಪಾತ್ರವಾಗಿಯೂ ಕತೆಯಲ್ಲಿ ಭಾಗವಹಿಸುತ್ತಾನೆ. ಇನ್ನು ಕೆಲವು ಕತೆಗಳಲ್ಲಿ ನಿರೂಪಕ ಪಾತ್ರವಾಗಿ ಬರುವುದಿಲ್ಲವಾದರೂ ಕತೆಯ ಬೆಳವಣಿಗೆಯನ್ನು ಗಮನಿಸಿ ನಮಗೆ ಹೇಳುವುದಕ್ಕೋಸ್ಕರವಾಗಿ ಹಲವಾರು ಸನ್ನಿವೇಶಗಳಲ್ಲಿ ಪ್ರವೇಶ ಪಡೆಯುತ್ತಾರೆ. ಸತ್ಯನಾರಾಯಣರ ಕಥನ ವಿಧಾನ ಮಾಸ್ತಿಯವರದಲ್ಲ. ಮಾಸ್ತಿಯವರು ತಮ್ಮ ಕತೆಯ ಆಶಯವನ್ನು ಸರಳವಾಗಿ ಹಿಡಿದಿಡುತ್ತಾರೆ.

ಓದುಗನಿಗೆ ಅರಿವಿನ ಆನಂದ ಉಂಟಾಗುತ್ತದೆ. ಸತ್ಯನಾರಾಯಣರು ತಮ್ಮ ಕತೆಯ ಆಶಯವನ್ನು ಉದ್ದೇಶಪೂರ್ವಕವಾಗಿ ಸಂಕೀರ್ಣಗೊಳಿಸುತ್ತಾರೆ.[೧೧]

ಡಾ. ಶೇಖರ ಲದವಾ ಕೆ. ಸತ್ಯನಾರಾಯಣರವರ ಕಥೆಗಳನ್ನು ಕುರಿತು, ಕೆ. ಸತ್ಯನಾರಾಯಣ ಅವರದ್ದು ಪ್ರಕೃತಿ ಸದೃಶ ಚಿತ್ರಣ ತಂತ್ರ, ಕಥೆ ಬರೆಯುವ ಸಂದರ್ಭದಲ್ಲಿ ನೋಡಿದ್ದು, ಕೇಳಿದ್ದು, ತಿಳಿದದ್ದು, ಹೊಳೆದದ್ದು ಎಲ್ಲವನ್ನು ಬರೆಯುತ್ತಾರೆ. ಕೆಲವೊಮ್ಮೆ ಸಂಗತಿಗಳು ಪೂರಕವಲ್ಲದೇ ಬಂದಂತೆ ಎನಿಸಿದರೂ, ಯಾಕೆ ಪೂರಕವಲ್ಲ? ಎಂದು ಆಹ್ವಾನ ನೀಡಿದಂತೆ ಅನಿಸುತ್ತದೆ. ಅದ್ಭುತ ಸಂವೇದನಾಶೀಲತೆ, ಸಾಹಿತ್ಯದ ಸಂಪೂರ್ಣ ವ್ಯಸನ, ಬೇರೆ ಬೇರೆ ರಾಜ್ಯಗಳ, ಬೇರೆ ಬೇರೆ ಊರುಗಳಲ್ಲಿ, ಬೇರೆ ಬೇರೆ ಜಾತಿ ಮತ ಪಂಥಗಳ ಜನರೊಡನೆ ಬದುಕಿ ಬಾಳಿದ್ದರಿಂದ ವ್ಯಾಪಕ ಅನುಭವದ ದರ್ಶನ ಲೀಲಾಜಾಲವಾಗಿ ದಕ್ಕಿದೆ. ಕಥಾ ನಿರೂಪಣೆಯಲ್ಲಿ ವೈವಿಧ್ಯತೆ, ಪ್ರಯೋಗಶೀಲತೆ ಇದೆ. ಆದರೆ ಭಾಷೆಯಲ್ಲಿ ಇಲ್ಲ.[೧೨]

ಎ.ಆರ್. ನಾಗಭೂಷಣ ಪತ್ರವೊಂದರಲ್ಲಿ ಸತ್ಯನಾರಾಯಣರವರ ಕತೆಗಳು ಜೀವನವನ್ನು, ಜನರನ್ನು, ಸಂಬಂಧಗಳನ್ನು ಅರ್ಥಮಾಡಿಕೊಳ್ಳುವ ನಿಮ್ಮ ಪ್ರಯತ್ನ ಗಂಭೀರವಾಗಿದೆ. ಕಥನ ಕೌಶಲ್ಯ ಕಥೆಯೊಳಗೆ ಸಹಜವಾಗಿ ಸೇರಿಕೊಂಡಿದೆ. ಪ್ರತ್ಯೇಕವಾಗಿ ಒಡೆದು ನಿಲ್ಲುವುದಿಲ್ಲ. ವ್ಯವಧಾನದಿಂದ, ಪ್ರೀತಿಯಿಂದ ಇನ್ನೊಬ್ಬರನ್ನು ತಿಳಿದುಕೊಳ್ಳುವ ನಿಮ್ಮ ಕ್ರಮ has an educative value... ಬದುಕಿನ ಬಗ್ಗೆ, ಜನರ ಬಗ್ಗೆ ಪ್ರೀತಿಭಾವವನ್ನು ಬೆಳೆಸಿಕೊಳ್ಳುವುದು, ಸ್ವಾರ್ಥವನ್ನು ಕಡಿಮೆ ಮಾಡಿಕೊಳ್ಳುವುದು ಇವುಗಳ ಬಗ್ಗೆ ಸೂಕ್ಷ್ಮವಾಗಿ ಅರಿವನ್ನು ಇವರ ಕತೆಗಳು ಮೂಡಿಸುತ್ತವೆ.[೧೩]

ಕೆ.ಪಿ. ಸುರೇಶರವರು ಕೆ. ಸತ್ಯನಾರಾಯಣ ಅವರ ಕಿರು ಕಥೆಗಳು, ಲೇಖಕನೊಬ್ಬ ತನ್ನ ಹೆಗಲೇರಿರುವ ಕಥನಶೈಲಿ ಮತ್ತು ಕಾಣುವ ಬಗೆಯನ್ನು ಕೊಡವಿ ಹೊಸ ರೀತಿಯಲ್ಲಿ ನೋಡುವ/ಕಾಣುವ ಬಗೆಯನ್ನು ಅನ್ವೇಷಿಸುವ ಧೀರ ಪ್ರಯತ್ನ. ಕನ್ನಡಕ್ಕೂ ಇದು ಹೊಸ ದಾರಿಯ ಸುಳುಹು. ಈ ಮಾತುಗಳು ವರಸೆಯ ಮಾತುಗಳಂತೆ ಕೇಳಬಾರದು. ಸತ್ಯನಾರಾಯಣ ತಮ್ಮ ಕಥೆಗಳಲ್ಲಿ ಮಾಸ್ತಿಯವರ ಒಂದು ಮಟ್ಟಿನಲ್ಲಿ ಕಥೆ ಕಟ್ಟುತ್ತಾ ಹೋಗುತ್ತಾರೆ. ಮಾಸ್ತಿಯವರ ವಿವರಗಳ ಹ್ರಸ್ವತನ ಸತ್ಯನಾರಾಯಣ ಅವರಲ್ಲಿಲ್ಲ. ಅವರ ಕಥೆಗಳಿಗೆ ನಿರೂಪಣೆಯ ವಿಸ್ತಾರವಿದೆ. ಆದರೆ ಅದು ವಿವರಗಳ ದುಂದು ಅಲ್ಲ. ಪಾರಂಪರಿಕವಾಗಿ ನಮ್ಮಲ್ಲಿ ನೆಂಟರಿಷ್ಟರು ಲೋಕಾಭಿರಾಮದಲ್ಲಿ ಬಿಚ್ಚಿಡುತ್ತಾ ಹೋಗುವ ತಂತ್ರ ಇದು. ಆಡುಮಾತಿನ ಕಥನ ಮನ ಮಥನದ ವಿಶ್ಲೇಷಣೆ, ಜಾಗರೂಕವಾದ ಪ್ರಜ್ಞೆ ಕೊಂಚ ಒರಟಾಗಿ ಹೇಳುವುದಾದರೆ, ಆತ್ಮೀಯವೆನ್ನಿಸುವಾಗಲೂ ಅಷ್ಟು ದೂರ ಉಳಿಸಿಕೊಳ್ಳುವ ಬ್ರಾಹ್ಮಣರ ಮಾತಿನ ಶೈಲಿ, ಇಷ್ಟು ವರ್ಷಗಳ ಬಳಿಕವೂ ಸರಳವಾಗಿ ಮುಂದಿಡುವ ಈ ಶೈಲಿಯ ಸಾಂಗತ್ಯದ ಶಕ್ತಿಯನ್ನು ಅವರು ಉಳಿಸಿಕೊಂಡಿದ್ದಾರೆ.[೧೪]

ಜಿ.ಎನ್. ರಂಗನಾಥರಾವ್ ರವರ ಪ್ರಕಾರ ನವ್ಯ ಬಂಡಾಯಗಳ ನಂತರ ಕನ್ನಡದ ಸಣ್ಣ ಕಥೆಯನ್ನು ಮತ್ತೆ ಕಥನದ ಹಳಿಗೆ ತಂದವರಲ್ಲಿ ಅಗ್ರಗಣ್ಯರಾದ ಸತ್ಯನಾರಾಯಣ ಹೊಸ ಸಂವೇದನೆಯ ಮೊನಚು ಮತ್ತು ವಿನೂತನ ಸಾಮಾಜಿಕ ಆಯಾಮಗಳಿಂದ ಮಾಸ್ತಿ ಕಥನ ಪರಂಪರೆಯನ್ನು ಪುನರುಜ್ಜೀವನಗೊಳಿಸಿದವರು. ತಮ್ಮ ಕಥಾನ್ವೇಷಣೆಯಲ್ಲಿ ಸತ್ಯದ ಹಲವು ಹನ್ನೊಂದು ಮಾರ್ಗಗಳನ್ನು, ಹಲವು ಹನ್ನೊಂದು ಬಗೆಯ ಜನರ ದೃಷ್ಟಿಯಲ್ಲಿ ಅನಾವರಣಗೊಳಿಸುವ ಪ್ರಯತ್ನ ಮಾಡುತ್ತಾ ಇವತ್ತಿನ ನಮ್ಮ ಮನಸ್ಸುಗಳ, ಹೃದಯಗಳ ಬಿಂಬ ಪ್ರತಿಬಿಂಬಗಳನ್ನು ಕಾಣಿಸುತ್ತಾರೆ.[೧೫]

ವರ್ತಮಾನದ ಸಂಗತಿಗಳು, ವಿಷಯಗಳು ಕತೆಗೆ ವಸ್ತುವಾಗುವುದು ಸವಾಲಿನ ಸಂಗತಿ. ಇಂಥ ಸವಾಲಿನ ಕೆಲಸವನ್ನು ಸತ್ಯನಾರಾಯಣರ ಕಥೆಗಳು ಮೈಮೇಲೆ ಹೊತ್ತಿವೆ. ಈ ಹೊತ್ತಿನಲ್ಲಿ ಜಾಗತೀಕರಣದ ಪರಿಣಾಮವನ್ನು, ಅವುಗಳ ರಾಜಕೀಯ, ಸಾಮಾಜಿಕ, ಆರ್ಥಿಕ ನಿಲುವುಗಳನ್ನು ಗ್ರಹಿಸಲು ಈ ಕಥೆಗಳು ಪ್ರಯತ್ನಿಸಿ ಸಫಲವಾಗಿವೆ ಎಂದು 'ಅಮರೇಶ ನುಗಡೋಣಿ' ಅಭಿಪ್ರಾಯಪಟ್ಟಿದ್ದಾರೆ.[೧೬]

ತಾನು ಬದುಕುತ್ತಿರುವ ಸಮಕಾಲೀನ ಜಗತ್ತಿನ ಆಗುಹೋಗುಗಳನ್ನು ಮತ್ತು ವೈರುಧ್ಯಗಳನ್ನು ತೆರೆದ ಹೃದಯ ಮತ್ತು ಕಣ್ಣುಗಳಿಂದ ನೋಡುತ್ತಾ, ಅವುಗಳನ್ನು ಸಮಚಿತ್ತದಿಂದ ಕಥೆಗಳಾಗಿ ಪರಿವರ್ತಿಸುವ ಮೂಲಕ ಓದುಗರಲ್ಲಿ ಆಪ್ತಭಾವವನ್ನು ಉಂಟುಮಾಡುವಲ್ಲಿ ಸತ್ಯನಾರಾಯಣ ಯಶಸ್ವಿಯಾಗಿದ್ದಾರೆ. ಅವರ ಕಥೆಗಳಲ್ಲಿ ನಿರೂಪಕ ತಾನು ಒಂದು ಪಾತ್ರವಾಗಿ ಅಥವಾ ಘಟನೆಗಳಿಗೆ ಸಾಕ್ಷಿದಾರನಾಗಿ, ಕೆಲವೊಮ್ಮೆ ನಿರುದ್ಧಿಗ್ನವಾಗಿ ವಿವೇಚಿಸಬಲ್ಲವನಾಗಿ, ಓದುಗರೊಂದಿಗೆ ನಿರಂತರ ಸಂಬಂಧವನ್ನು ಇಟ್ಟುಕೊಂಡು, ಅಂತರವನ್ನು ಕಾಯ್ದುಕೊಂಡಿರುವುದು ಒಂದು ವಿಶೇಷ ಎಂದು 'ಜಗದೀಶ್ ಕೊಪ್ಪ'ರವರು ತಿಳಿಸಿದ್ದಾರೆ.[೧೭]

ಸತ್ಯನಾರಾಯಣರ ಕಥೆಗಳಲ್ಲಿ ವಸ್ತುವಿನ ಒಳ ರಚನೆಗನುಗುಣವಾಗಿ ನಿರೂಪಣೆ ಬದಲಾಗುತ್ತದೆ. ಒಂದು ನಿರ್ದಿಷ್ಟ ತತ್ವ ಮತ್ತು ಜೀವನಾನುಭವದ ಮುಖಾಮುಖಿಯಾಗಿಯೂ ಸತ್ಯನಾರಾಯಣರ ಕಥೆಗಲು ಗಮನಾರ್ಹವಾಗುತ್ತವೆ. ಮನುಷ್ಯ, ಆತನ ಬದುಕನ್ನು ಏಕಮುಖವಾಗಿ ಗ್ರಹಿಸದೆ, ಅದರ ಬಹುಮುಖ ಸಾಧ್ಯತೆಯನ್ನು ಪರಿಶೀಲಿಸುತ್ತಾ ಅಪನಂಬಿಕೆ ಮತ್ತು ಪೂರ್ವಾಗ್ರಹ ಬಿಟ್ಟು ಸಮಷ್ಠಿ ಹಿತ ಕಾಪಾಡುವ ನೆಲೆಯಲ್ಲಿ ಸತ್ಯನಾರಾಯಣರ ಕಥೆಗಳು ಕಾರ್ಯಮಗ್ನವಾಗುತ್ತವೆ ಎಂದು ಶ್ರೀಕಂಠ ಕೂಡಿಗೆರವರು ಸತ್ಯನಾರಾಯಣರ ಕಥೆಗಳ ಬಗ್ಗೆ ತಿಳಿಸಿದ್ದಾರೆ.[೧೮]

ಸತ್ಯನಾರಾಯಣರ ಕಥೆಗಳು ಪಡೆದುಕೊಳ್ಳುತ್ತಿರುವ ಹೊಸ ಆಯಾಮಗಳ ದ್ಯೋತಕವಾಗಿವೆ. ನಮ್ಮ ಸಮಕಾಲೀನ ಬದುಕನ್ನು ಸಂಕೀರ್ಣವಾಗಿ ಗ್ರಹಿಸುವಲ್ಲಿ ಇವರ ಕತೆಗಳು ಸಫಲವಾಗಿವೆ. ಭೂತ ಮತ್ತು ವರ್ತಮಾನಗಳ ನಡುವೆ ಲಾಳಿಯಾಡುತ್ತಾ ಆರೋಗ್ಯಕರ ಭವಿಷ್ಯದ ಕಡೆಗೆ ಮುಖಮಾಡಿರುವ ಇಂತಹ ಕತೆಗಳನ್ನು ಕೊಟ್ಟಿರುವ ಲೇಖಕರನ್ನು ಅಭಿನಂದಿಸುತ್ತಾ, ಅವರ

ಅಪೇಕ್ಷೆಯಂತೆ ಅವರ ಕತೆಗಳನ್ನು ಬೆಳೆಸುವ ಸಹೃದಯರು ಅವರಿಗೆ ದೊರೆಯಲಿ ಎಂದು ಆಶಿಸುತ್ತೇನೆ ಎಂದು ಕೆ. ರಘುನಾಥ್‌ರವರು ತಿಳಿಸಿದ್ದಾರೆ.[೧೯]

ಸತ್ಯನಾರಾಯಣರ ಬಹುತೇಕ ಕತೆಗಳು ಆಧುನಿಕತೆಯ ಆಕರ್ಷಣೆ ವಿಕರ್ಷಣೆಗಳ ಮಧ್ಯೆ ಸಿಕ್ಕು ತೊಳಲಾಡುವ ಮಧ್ಯಮ ಹಾಗೂ ಕೆಳ ಮಧ್ಯಮ ವರ್ಗದವರ ಪಾಡನ್ನು ಸಹಾನುಭೂತಿಯಿಂದ ಕೆಲವೊಮ್ಮೆ ಕತೆಯನ್ನೇ ವಾರೆ ಮಾಡಿಬಿಡುವ ಕೆಟ್ಟ ಕನಿಕರದಿಂದಲೂ ನೋಡುವ ಕ್ರಮದಲ್ಲೇ ಸತ್ಯದ ಹಲವು ರೂಪಗಳನ್ನು ಕಾಣಿಸುವ ಪ್ರಯತ್ನ ಮಾಡುತ್ತದೆ. ಈ ಪ್ರಕ್ರಿಯೆಯಲ್ಲಿ ಲೇಖಕ, ಆಧುನಿಕತೆಯ ಒತ್ತಡಗಳ ಮಧ್ಯೆ suspended animationನಲ್ಲಿರುವ ಅನೇಕ ಸಾಮಾನ್ಯರ ಪಾತ್ರಗಳನ್ನು ಅಸಾಮಾನ್ಯ ಸಾಹಿತ್ಯಿಕ ಆವೇಗದೊಂದಿಗೆ ಸೃಷ್ಟಿಸುತ್ತಾರೆ ಎಂದು ಡಿ.ಎನ್. ನಾಗಭೂಷಣರವರು ತಿಳಿಸಿದ್ದಾರೆ.[೨೦]

ಕೆ. ಸತ್ಯನಾರಾಯಣ ಅವರು ಕಥಾ ರಚನೆಯನ್ನು ಒಂದು ಸವಾಲಿನ ಸೃಜನಶೀಲ ಮನಸ್ಸಿನ ಪ್ರತಿಷ್ಠೆಯ ಕ್ರಿಯೆ ಎಂದು ಭವಿಸಿದವರು. ತಾವು ಹೇಳುವ ರೀತಿ ಹೊಸದಾಗಿರಬೇಕು ಎಂಬ ಪ್ರಯತ್ನ ಶೀಲತೆಯಲ್ಲಿ ನಂಬಿಕೆಯನ್ನು ಇಟ್ಟವರು. ಈ ಕಾರಣಕ್ಕಾಗಿಯೇ ಕತೆಯ ಶಿಲ್ಪ ಒಂದಕ್ಕಿಂತ ಒಂದು ಭಿನ್ನವಾಗಿರುತ್ತದೆ. ಎರಡೂವರೆ ದಶಕಗಳಿಂದ ಸಾಹಿತ್ಯ ರಚನೆಯಲ್ಲಿ ತೊಡಗಿರುವ ಸತ್ಯನಾರಾಯಣರಿಗೆ ಕನ್ನಡದ ಆಸ್ತಿ ಮಾಸ್ತಿ ಎಂದರೆ ಅಚ್ಚುಮೆಚ್ಚು. ಕತೆ ಬರೆದರೆ ಮಾಸ್ತಿಯವರು ಬರೆದಂತೆ ಬರೆಯಬೇಕು ಎಂಬ ನಿಲುವು ಅವರದು.

ನಮ್ಮ ವಿದ್ಯಾವಂತ ವರ್ಗವನ್ನು ಒಂದು ವ್ಯಸನವಾಗಿ ಕಾಡಿರುವ ಸಾಮಾಜಿಕ ಬದಲಾವಣೆ ಎಂಬುದು ಎಷ್ಟೊಂದು ವೈವಿಧ್ಯಮಯವಾದ ಸಾಮಾಜಿಕ ಒಳಹರಿವುಗಳಿಂದ ಮತ್ತು ಒಳಸುಳಿಗಳಿಂದ ರೂಪುಗೊಳ್ಳುತ್ತದೆ ಎಂಬುದರ ಕಡೆಗೆ ಇವರ ಕತೆಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಜೊತೆಗೆ ಸಾಮಾನ್ಯರೆಂದು ಗುರುತಿಸಲಾಗುವ ಜನರು ತಮ್ಮ ಬದುಕನ್ನು ತಮ್ಮ ಇಷ್ಟದಂತೆ ಕಟ್ಟಿಕೊಳ್ಳುವಲ್ಲಿ ತೋರಿಸುವ ಛಲವಂತಿಕೆಗೆ ನಾವು ಹಾಗೂ ನಮ್ಮಂತೆಯೇ ಸಮಾಜದ ಮುತ್ಸದಿಗಳು ಕೂಡ ಎಷ್ಟೊಂದು ಕುರುಡಾಗಿದ್ದೇವೆ ಎಂಬುದನ್ನು ಕೂಡ ಇವರ ಕತೆಗಳು ತೋರಿಸುತ್ತವೆ.

ಅಡಿ ಟಿಪ್ಪಣಿ

೧. ಸತ್ಯನಾರಾಯಣ ಕೆ., 'ವಿಕ್ಟೋರಿಯಾ ಮಗ ದೇವಲಿಂಗ', ಕಥಾಸಂಕಲನಕ್ಕೆ ಬರೆದ ಮುನ್ನುಡಿಯಿಂದ.

೨. ಸತ್ಯನಾರಾಯಣ ಕೆ., 'ನಿಮ್ಮ ಮೊದಲ ಪ್ರೇಮದ ಕಥೆ', ಕಥಾಸಂಕಲನಕ್ಕೆ ಬರೆದ ಮುನ್ನುಡಿಯಿಂದ.

೩. ಎನ್.ಎಸ್. ಶ್ರೀಧರಮೂರ್ತಿ, 'ಜೀವನ ಪ್ರೀತಿಯ ಸಾರ' (ಲೇಖನ), ಸುಮಿತ್ರ ಟಿ.ಆರ್. (ಸಂ), ಅನುಭೂತಿ, ಪುಟ-೧೪೪-೧೪೫.

೪. ಎಸ್.ಆರ್. ವಿಜಯಶಂಕರ, 'ಹಳೆಯ ಕಾಲದ ಹೊಸ ಕತೆ' (ಲೇಖನ), ಸುಮಿತ್ರ ಟಿ.ಆರ್. (ಸಂ), ಅನುಭೂತಿ, ಪುಟ-೧೬೮-೧೬೯.

೫. ಅದೇ, ಪುಟ-೧೭೧-೧೭೨.

೬. ನರೇಂದ್ರ ಪೈ., ರಾಚನಿಕ ಮತ್ತು ನಿರಚನಾ ನೆಲೆ (ಲೇಖನ), ಸುಮಿತ್ರ ಟಿ.ಆರ್. (ಸಂ), ಅನುಭೂತಿ, ಪುಟ-೨೧೪.

೭. ಬಿ..ವಿ ಕೆದಿಲಾಯ, ವೈವಿಧ್ಯಮಯ ವಾಸ್ತವ (ಲೇಖನ), ಸುಮಿತ್ರ ಟಿ.ಆರ್. (ಸಂ), ಅನುಭೂತಿ, ಪುಟ-೨೩೨.

೮. ಸತ್ಯನಾರಾಯಣ ಕೆ., 'ವಿಕ್ಟೋರಿಯಾ ಮಗ ದೇವಲಿಂಗ', ಕಥಾಸಂಕಲನಕ್ಕೆ ಬರೆದ ಮುನ್ನುಡಿಯಿಂದ.

೯. ಲಕ್ಷ್ಮೀನಾರಾಯಣ ಭಟ್ಟ, ಕನ್ನಡ ಸಾಹಿತ್ಯ ಚರಿತ್ರೆ, ಪುಟ-೩೫೭.

೧೦. ಸತ್ಯನಾರಾಯಣ ಕೆ., 'ಹೆಗ್ಗುರುತು', ಕಥಾಸಂಕಲನಕ್ಕೆ ಬರೆದ ಮುನ್ನುಡಿ.

೧೧. ಜನಾರ್ಧನಭಟ್ ಬಿ., 'ಸಮಾಜದ ಸಮಗ್ರ ಚಿತ್ರ' (ಲೇಖನ), ಸುಮಿತ್ರ ಟಿ.ಆರ್. (ಸಂ), ಅನುಭೂತಿ, ಪುಟ-೨೩೫.

೧೨. ಶೇಖರ ಲದಾವಾ, ಕೆ. ಸತ್ಯನಾರಾಯಣರವರ 'ನಕ್ಸಲ್ ವರಸೆ', ಸಶಸ್ತ್ರ ನವೀಕೃತ ಮಾಸ್ತಿ ಕಥಾ ಪರಂಪರೆ (ಲೇಖನ), ಸುಮಿತ್ರ ಟಿ.ಆರ್. (ಸಂ), ಅನುಭೂತಿ, ಪುಟ-೨೪೫.

೧೩. ಸತ್ಯನಾರಾಯಣ ಕೆ., 'ಹಳೆಯ ಕಾಲದ ಹೊಸ ಕತೆ', ಕಥಾಸಂಕಲನಕ್ಕೆ ಬರೆದ ಬೆನ್ನುಡಿಯಿಂದ.

೧೪. ಸತ್ಯನಾರಾಯಣ ಕೆ., 'ಚಿತ್ರಗುಪ್ತನ ಕತೆಗಳು', ಕಥಾಸಂಕಲನಕ್ಕೆ ಬರೆದ ಮುನ್ನುಡಿಯಿಂದ.

೧೫. ಸತ್ಯನಾರಾಯಣ ಕೆ., 'ಅಮೆರಿಕನ್ ಮನೆ', ಕಥಾಸಂಕಲನಕ್ಕೆ ಬರೆದ ಬೆನ್ನುಡಿಯಿಂದ.

೧೬. ಅದೇ.

೧೭. ಅದೇ.

೧೮. ಅದೇ.

೧೯. ರಘುನಾಥ ಕೆ., 'ಚಿತ್ರಗುಪ್ತನ ಕಥೆಗಳು', (ಲೇಖನ) ಸುಮಿತ್ರ ಟಿ.ಆರ್. (ಸಂ), ಅನುಭೂತಿ, ಪುಟ–೨೫೮.

೨೦. ನಾಗಭೂಷಣ ಡಿ.ಎನ್., 'ಈವತ್ತಿನ ಮಗ್ನತೆ' (ಲೇಖನ), ಸುಮಿತ್ರ ಟಿ.ಆರ್. (ಸಂ), ಅನುಭೂತಿ, ಪುಟ–೨೭೦.

❖❖❖

ಅಧ್ಯಾಯ : ಐದು

ಕೆ. ಸತ್ಯನಾರಾಯಣ'ರವರ ಸಂದರ್ಶನ

ಅಧ್ಯಾಯ: ಐದು

ಕೆ. ಸತ್ಯನಾರಾಯಣ'ರವರ ಸಂದರ್ಶನ

೧. ಕಥೆ, ಕಾದಂಬರಿ ರಚನೆ ಮಾಡಲು ಮೂಲ ಪ್ರೇರಣೆ ಏನು? ಸರ್.

ನಾವು ಏನು ಕೆಲಸ ಮಾಡುತ್ತೀವಿ, ಏಕೆ ಬರೆಯುತ್ತೇವೆ ಎನ್ನುವುದಕ್ಕೆ ಕೆಲವೊಂದು ಸಲ ಸಂಬಂಧ ಇರುತ್ತದೆ ಮತ್ತು ಕೆಲವೊಂದು ಸಲ ಸಂಬಂಧ ಇರುವುದಿಲ್ಲ. ನಾನು ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಸೇರಿದ್ದು ೧೯೭೭ರಲ್ಲಿ ಅದಕ್ಕೂ ಮುಂಚೆನೆ ನನ್ನ ಕೆಲವು ಕತೆಗಳು, ಲೇಖನಗಳು, ಪತ್ರಿಕೆಗಳಲ್ಲಿ, ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ೧೯೭೭ರಲ್ಲಿ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಸೇರುವುದಕ್ಕೂ ಮುಂಚೆ ಸಾಕಷ್ಟು ಸಾಹಿತ್ಯವನ್ನು ಕಥೆ, ಕಾದಂಬರಿಗಳನ್ನು, ಲೇಖನಗಳನ್ನು, ಬೇರೆ ಬೇರೆ ವಿಷಯಗಳನ್ನು ಓದಿಕೊಂಡು ಸಮಕಾಲೀನ ಬದುಕನ್ನು, ಸುತ್ತಮುತ್ತಲಿನ ಪರಿಸರದ ಬಗ್ಗೆ, ಜೀವನದ ಬಗ್ಗೆ, ಬಂಧುಮಿತ್ರರ ಬದುಕಿನ ಜೀವನದ ಬಗ್ಗೆ ತಿಳಿದಿದ್ದರಿಂದ ಬರಹಗಾರನಾದೆ ವಿನಃ ರೆವಿನ್ಯು ಡಿಪಾರ್ಟ್‌ಮೆಂಟ್‌ಗೆ ಸೇರಿಕೊಂಡಿದ್ದರಿಂದಲ್ಲ.

ಬಹುಶಃ ಈ ಡಿಪಾರ್ಟ್‌ಮೆಂಟ್ ಸೇರದೆ ಹೋದರು, ಗೌರ್ನಮೆಂಟ್ ಕೆಲಸ ಸಿಗದೇ ಹೋಗಿದ್ದರು ನಾನು ಬರೆಯುತ್ತಿದ್ದೆ. ಆದರೆ ಕೆಲಸಕ್ಕೆ ಸೇರುವುದರಿಂದ ನಮಗೆ ಬೇರೆ ತರಹದ ಅವಕಾಶಗಳು ಸಿಗುತ್ತವೆ. ಮೇಷ್ಟ್ರು ಆದ್ರೆ ಬೇರೆ ತರಹದ ಅವಕಾಶಗಳು ಸಿಗುತ್ತವೆ, ಡಾಕ್ಟರ್ ಆದ್ರೆ ಬೇರೆ ತರಹದ ಅವಕಾಶಗಳು ಸಿಗುತ್ತವೆ, ಇಂಜಿನಿಯರ್ ಆದ್ರೆ, ಬೇರೆ, ಇನ್ಸೂರೆನ್ಸ್ ಏಜೆಂಟ್ ಆದ್ರೆ, ಸುಪ್ರಿಡೇಟ್ ಆದ್ರೆ, ಬೇರೆ ಬೇರೆ ತರಹದ ಬದುಕಿನ ನೆಲೆ ಸಿಗುತ್ತದೆ. ಆ ಬದುಕಿನ ನೆಲೆಯಿಂದ ಬದುಕನ್ನು ನೋಡುವುದರ ಮೂಲಕ ಪ್ರಾರಂಭಿಸುತ್ತೇವೆ. ಬದುಕಿನ ಅನುಭವ ವಲಯದ ಮೂಲಕ ಬೇರೆ ಬೇರೆ ವಲಯಗಳನ್ನು ನೋಡುತ್ತಾ ಹೋಗುತ್ತೇವೆ.

ಕೇಂದ್ರ ಸರ್ಕಾರದ ಇಂಡಿಯನ್ ರೆವಿನ್ಯೂ ಆಫೀಸಿನಲ್ಲಿ ಕೆಲಸ ಇದ್ದಿದ್ದರಿಂದ ಬೇರೆ ಬೇರೆ ಭಾಗಗಳಲ್ಲಿ ಕೆಲಸ ಮಾಡಿದ್ದರಿಂದ ಅನುಕೂಲವಾಯಿತು. ಬೇರೆ ಬೇರೆ ರೀತಿಯ ಜನಗಳನ್ನು ಬೇರೆ ಬೇರೆ ರೀತಿಯ ಭಾಷೆಗಳನ್ನು ಹಾಡುವ ಜನರನ್ನು, ಬೇರೆ ಬೇರೆ ಸಂಸ್ಕೃತಿಯ ಜನರನ್ನು

ನೋಡಲು ನನಗೆ ಅನುಕೂಲವಾಯಿತು. ಕರ್ನಾಟಕದ ಬದುಕನ್ನು ಬೇರೆ ಪ್ರದೇಶಗಳ ದೃಷ್ಟಿಕೋನದಿಂದ ನೋಡುವುದು, ಬೇರೆ ಪ್ರದೇಶಗಳ ಬದುಕನ್ನು ಕರ್ನಾಟಕದ ದೃಷ್ಟಿಕೋನಗಳಿಂದ ನೋಡುವುದು. ಇದೆಲ್ಲವು ಗೊತ್ತಿಲ್ಲದೆ ನನ್ನ ಬರವಣಿಗೆಯಲ್ಲಿ ನಡೆಯುತ್ತಾ ಹೋಗುತ್ತದೆ. ಆಸಕ್ತಿ ದೃಷ್ಟಿಯಿಂದ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ಇರುವುದಕ್ಕೂ ಬರೆಯುವುದಕ್ಕೂ ಅದಕ್ಕೂ ಸಂಬಂಧವಿಲ್ಲ. ಬರೆಯುತ್ತಾ ಹೋದದ್ದು, ವೈವಿಧ್ಯಮಯವಾದದ್ದು ನನ್ನ ಇಲಾಖೆಯಿಂದ, ಪ್ರಸಾದದಿಂದ, ಓಡಾಟದಿಂದ ಆದಂತಹ ಅನುಭವಗಳಿಂದ ಎಂದು ಹೇಳಬಹುದು.

ಪ್ರಶ್ನೆ:೨. ಕಥೆ ಕಾದಂಬರಿಕಾರರಾದ ನಿಮಗೆ ಮಾಸ್ತಿಯವರ ಪ್ರಭಾವ ಯಾವ ಮಟ್ಟಕ್ಕೆ ಬೀರಿದೆ/ಹೇಗೆ ಪರಿಣಾಮವನ್ನು ಉಂಟುಮಾಡಿದೆ ಸರ್.

ವಿಮರ್ಶೆಯಲ್ಲಿ ಒಂದು ಮಾತು ಬಂದು ಬಿಟ್ಟರೆ ಅದು ತುಂಬಾ ದಿನ ಉಳಿದುಕೊಂಡು ಬಿಡುತ್ತದೆ. ಅದನ್ನು ಯಾರು ಬದಲಾಯಿಸುವುದಕ್ಕಾಗುವುದಿಲ್ಲ. ಮೊದಲು ಒಂದು, ಎರಡು ಸಂಕಲನಗಳನ್ನು ಪ್ರಕಟಿಸಿದಾಗ ಮಾಸ್ತಿಯವರ ಪರಂಪರೆಯನ್ನು ಮುಂದುವರಿಸುತ್ತಾರೆ ಎನ್ನುವಂತಹ ಮಾತುಗಳು ಕೇಳಿಬಂದವು. ಆ ಮಾತು ಉಳಿದುಕೊಂಡು ಬಿಟ್ಟಿದೆ. ಮತ್ತೆ ಆ ಮಾತಿನಲ್ಲಿ ಸಾಕಷ್ಟು ಸತ್ಯವಿದೆ ಮತ್ತು ಸಾಕಷ್ಟು ಸುಳ್ಳು ಇದೆ. ಮಾಸ್ತಿ ಕತೆಗಳು ನನಗೆ ಮಾತ್ರವಲ್ಲ ಕನ್ನಡದಲ್ಲಿ ಬರೆಯುವ ಯಾವುದೇ ಕತೆಗಾರರಿಗೂ ಪ್ರೇರಣೆ ಮೂಡಿಸುತ್ತವೆ. ಯಾಕೆಂದರೆ ಮಾಸ್ತಿ ಅವರ ಕತೆಗಳನ್ನು ಓದಿದರೆ ನಮ್ಮ ವೈವಿಧ್ಯಮಯವಾದ ಸಮಾಜ, ನಮ್ಮ ದೇಶದ್ದು ಮಾತ್ರವಲ್ಲ ಹೊರ ದೇಶದ ವೈಭವಯುತ ಮತ್ತು ಕನ್ನಡ ನಾಡಿನ ವೈವಿಧ್ಯಮಯ ಸಮಾಜವನ್ನು ಹೇಗೆ ಒಬ್ಬ ಕತೆಗಾರನಾಗಿ ನೋಡಬೇಕು, ಗ್ರಹಿಸಬೇಕು, ಅಭಿವ್ಯಕ್ತಿಸಬೇಕು, ಮೌಲ್ಯಮಾಪನ ಮಾಡಬೇಕು ಎನ್ನುವುದು ಗೊತ್ತಾಗುತ್ತದೆ ಮಾಸ್ತಿಯವರ ಕತೆಗಳಿಂದ. ಆ ದೃಷ್ಟಿಯಿಂದ ಎಲ್ಲಾ ಕತೆಗಾರರು ಮಾಸ್ತಿಯವರ ಕತೆಗಳನ್ನು ಓದಬೇಕು, ಕನ್ನಡದ ಯಾವುದೇ ಕತೆಗಾರನು ಹೊಸಬರಿರಲಿ, ಹಳಬರಿರಲಿ ಅವನು ಯಾವುದೇ ಹಿನ್ನೆಲೆಯಿಂದ ಬಂದಿರಲಿ ಅವನು ಮಾಸ್ತಿಯವರ ಕಥೆಗಳನ್ನು ಓದಿದರೆ ಪ್ರೌಢಯುತನಾಗುತ್ತಾನೆ. ಅದರಿಂದ ಸಾಕಷ್ಟು ಅಂಶಗಳನ್ನು ಕಲಿತುಕೊಳ್ಳುತ್ತಾನೆ.

ಮಾಸ್ತಿಯವರಿಂದ ಕಲಿತುಕೊಂಡದ್ದು ನಾನು ಏನೆಂದರೆ ಮುಖ್ಯವಾಗಿ ನಮ್ಮ ಹಿನ್ನೆಲೆಯಲ್ಲಿ ಇಲ್ಲದೆ ಇರುವ ಬದುಕು ಮತ್ತು ನಮ್ಮ ಪ್ರದೇಶಕ್ಕೆ ಸೇರಿರುವಂತಹ ಬದುಕನ್ನು ನಮ್ಮ ಸಂಸ್ಕೃತಿಗೆ ಸೇರುವಂತಹ ಬದುಕನ್ನು ನಾವು ನಮ್ಮದ್ದನಾಗಿ ಹೇಗೆ ಮಾಡಿಕೊಳ್ಳಬೇಕು, ಗ್ರಹಿಸಬೇಕು, ಅವರ ಸಮಸ್ಯೆಗಳನ್ನು ಅವರ ಬದುಕನ್ನು ಯಾವ ರೀತಿ ಅರ್ಥಮಾಡಿಕೊಳ್ಳಬೇಕು, ಗ್ರಹಿಸಬೇಕು ಯಾವ ರೀತಿ ಅನುಭೂತಿಯನ್ನು ಅಭಿವೃದ್ಧಿ ಮಾಡಿಕೊಳ್ಳಬೇಕು ಎನ್ನುವುದನ್ನು ಮಾಸ್ತಿಯವರಿಂದ ಕಲಿತುಕೊಂಡೆ. ಮಾಸ್ತಿಯವರಿಂದ ನಾನು ಕಲಿತಿದ್ದು ಏನೆಂದರೆ ಎಲ್ಲಾ ಕತೆಗಾರರಿಗೂ ಎಲ್ಲ ದೇಶದವರು, ಎಲ್ಲ ಸಂಸ್ಕೃತಿಯವರು ಅದನ್ನೇ ಹೇಳುತ್ತಿರುತ್ತಾರೆ. ನಿಮಗೆ ನಿಮ್ಮ ಬಗ್ಗೆ ಕುತೂಹಲ ಇರುತ್ತದೆ. ನಿಮ್ಮ ಹಿನ್ನೆಲೆ ಬಗ್ಗೆ ಬರೆದವರ ಬಗ್ಗೆ ಕುತೂಹಲ ಇದ್ದರೆ ಒಬ್ಬ ಒಳ್ಳೆಯ ಕತೆಗಾರ ಎನ್ನುವುದಿಲ್ಲ ಅದೆಲ್ಲ ಒಂದು ನಾಲ್ಕು ಕತೆಯಲ್ಲಿ ಮುಗಿದು ಹೋಗುತ್ತದೆ.

ನಿಮ್ಮ ಬಗ್ಗೆ ನೀವು ಎಷ್ಟು ಬರೆಯುವುದಕ್ಕೆ ಆಗುತ್ತೆ, ನಿಮ್ಮ ಕುಟುಂಬದ ಬಗ್ಗೆ, ಜಾತಿಯ ಬಗ್ಗೆ ಎಷ್ಟು ಬರೆಯುವುದಕ್ಕಾಗುತ್ತದೆ, ಎಲ್ಲೆಯನ್ನು ಧಾಟಿ ಹೋಗಬೇಕಾಗುತ್ತದೆ.

ಮಾಸ್ತಿಯವರು ಶೇಕ್ಸ್‌ಪಿಯರ್‌ನ ಬಗ್ಗೆ ಕತೆಗಳನ್ನು ಬರೆದರು, ಟಾಲ್‌ಸ್ಟಾಯ್ ಮೇಲೆ ಬರೆದರು, ಶ್ರೀ ಕೃಷ್ಣದೇವರಾಯನ ಬಗ್ಗೆ ಬರೆದರು. ಆದರೆ ಬೇರೆ ಬೇರೆ ಕತೆಗಳನ್ನು ಬರೆಯುವುದಕ್ಕೆ ಬೇರೆ ಬೇರೆ ಹಿನ್ನೆಲೆಯ ಕತೆಗಳನ್ನು ಬರೆಯುವುದಕ್ಕೆ, ಗ್ರಹಿಸುವುದಕ್ಕೆ ಅನುಭೂತಿ ಮತ್ತು ಗ್ರಹಿಕೆಯ ಶಕ್ತಿ ಎಷ್ಟಿರುತ್ತದೆ ಅದನ್ನು ವಿಸ್ತಾರ ಮಾಡಿಕೊಳ್ಳಲು ಮಾಸ್ತಿಯವರು ಒಂದು ದೊಡ್ಡ ಪ್ರಭಾವ ಬೀರಿದ್ದಾರೆ. ಅದನ್ನು ಬಿಟ್ಟರೆ ಅವರ ಮನೋಧರ್ಮದಲ್ಲಿ ನನ್ನ ಮನೋಧರ್ಮದಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಏಕೆಂದರೆ ನಾನು ಬರೆದಿರುವ ಕಾಲಕ್ಕೆ ಅವರು ಬರೆದಿರುವ ಕಾಲಕ್ಕೆ ತುಂಬಾ ವ್ಯತ್ಯಾಸಗಳಿವೆ. ಆಮೇಲೆ ಅದಲ್ಲದೆ ಮಾಸ್ತಿಯವರ ಕಥಾತಂತ್ರವನ್ನು ಅನುಸರಿಸಿ ಕೆಲವು ಕತೆಗಳನ್ನು ಬರೆದಿದ್ದೇನೆ. ಅಲ್ಲದೆ ಬೇರೆ ಕಥೆಗಳನ್ನು ರಚನೆ ಮಾಡಿದ್ದೇನೆ. ತಂತ್ರದಿಂದ ಹೊರಗಡೆ ಬಂದು ಬೇರೆ ಕತೆಗಳನ್ನು ಬರೆದಿರುತ್ತೇನೆ. ಆದ್ದರಿಂದ ನಿಮ್ಮ ಪ್ರಶ್ನೆಗಳಿಗೆ ನೇರವಾದ ಉತ್ತರವಿಲ್ಲ. ಸಮ್ಮಿಶ್ರಣದ ಉತ್ತರ ಎಂದು ಹೇಳಬಹುದು.

ಪ್ರಶ್ನೆ:೩. ತಾವು ಹೆಚ್ಚಾಗಿ ಸಾಹಿತ್ಯ ಕ್ಷೇತ್ರದಲ್ಲಿ ಏಕೆ ಗುರುತಿಸಿಕೊಳ್ಳಲಿಲ್ಲ ಅಥವಾ ಮನ್ನಣೆಗೆ ಬರಲಿಲ್ಲ. ಸರ್.

ಏಕೆ ಹೆಚ್ಚು ಮನ್ನಣೆಗೆ ಬಂದಿಲ್ಲ ಎಂದರೆ ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚು ಕೆಲಸ ಮಾಡಿರಲಿಲ್ಲ, ಕರ್ನಾಟಕದಿಂದ ಹೊರಗಡೆ ಸುಮಾರು ೩೦ ವರ್ಷಗಳು ಇದ್ದೆ. ೧೯೯೩ ರಿಂದ ೨೦೧೧ರವರೆಗೆ ಕರ್ನಾಟಕದಿಂದ ಹೊರಗಡೆ ಇದ್ದೆ. ಆದುದರಿಂದ ಇಲ್ಲಿನ ಸಾಂಸ್ಕೃತಿಕ ಬದುಕಿನಲ್ಲಿ ಭಾಗವಹಿಸಲು ಅವಕಾಶಗಳು ಸಿಗಲಿಲ್ಲ. ಚರ್ಚೆಗಳಲ್ಲಿ, ಸೆಮಿನಾರ್‌ಗಳಲ್ಲಿ ಭಾಗವಹಿಸುವಂತಹ ಅವಕಾಶಗಳು ಕಳೆದುಹೋಯಿತು. ಅಲ್ಲದೆ ಸಾಂಸ್ಕೃತಿಕ ವಾತಾವರಣ ಹೇಗಿದೆ ಎಂದರೆ ವಿಶ್ವವಿದ್ಯಾನಿಲಯಗಳಲ್ಲಿ, ಪತ್ರಿಕೋದ್ಯಮಗಳಲ್ಲಿ ಅಲ್ಲಿನ ಕೆಲಸಗಳನ್ನು ಮಾಡದೇ ಹೋದರೆ ನಾವು ಎಷ್ಟೇ ಚೆನ್ನಾಗಿ ಬರೆದರು ಕೂಡ ನಮ್ಮನ್ನು ಗುರುತಿಸುವಂತಹ ಕೆಲಸಕ್ಕೆ ಹೋಗುವುದಿಲ್ಲ. ಅಲ್ಲೆಲ್ಲ ನಮ್ಮ ಬರವಣಿಗೆಗೆ ಹೆಚ್ಚು ಮಹತ್ವ ಕೊಡುವುದಿಲ್ಲ. ನಾವು ಮಾಡುವಂತಹ ಕೆಲಸವನ್ನು ಮಾತ್ರ ಗುರುತಿಸುತ್ತಾರೆ.

ನಾನು ಗೌರ್‍ನಮೆಂಟ್ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ನಾನು ಬರೆಯುತ್ತಿದ್ದೇನೆ ಎಂದು ಎಷ್ಟೋ ಜನಕ್ಕೆ ಗೊತ್ತಿರಲಿಲ್ಲ. ಮಹಾರಾಷ್ಟ್ರದಲ್ಲಿ ಕೆಲಸ ಮಾಡುತ್ತಿರುವಾಗ ಅಲ್ಲಿ ಕನ್ನಡ ಬರಹಗಾರರನ್ನು ಕಟ್ಟಿಕೊಂಡಿದ್ದೆ, ಆದ್ದರಿಂದ ನನಗೆ ಸಾಕಷ್ಟು ನಷ್ಟವಾಯಿತು ಎನಿಸುತ್ತದೆ. ಒಂದು ಸಲ ಬೇಜಾರು ಆಗುತ್ತೆ. ಸುಮಾರು ೩೦ ಪುಸ್ತಕಗಳನ್ನು ಬರೆದಿದ್ದೇನೆ. ೯೦-೯೫ ಕತೆಗಳನ್ನು, ೭೦ ಪ್ರಬಂಧಗಳನ್ನು, ೩ ಅಂಕಣ ಬರಹಗಳ ಕೃತಿಗಳನ್ನು, ೩ ವಿಮರ್ಶೆ ಕೃತಿಗಳನ್ನು, ೩ ಸಂಪುಟಗಳ ಆತ್ಮಚರಿತ್ರೆಗಳನ್ನು ರಚನೆ ಮಾಡಿದ್ದೇನೆ.

ಇಷ್ಟೊಂದು ವೈವಿಧ್ಯಮಯವಾಗಿ ಬರೆದಿದ್ದರೂ ಕೂಡ ಕರ್ನಾಟಕದಿಂದ ಹೊರಗಡೆ ಇದ್ದುದರಿಂದ ಸಾಹಿತ್ಯ ವಲಯದಲ್ಲಿ ಕೆಲಸ ಮಾಡದೇ ಇದ್ದಿದ್ದರಿಂದ, ವಿಶ್ವವಿದ್ಯಾಲಯಗಳಲ್ಲಿ ಹಾಗೂ ಪತ್ರಿಕೋದ್ಯಮದಲ್ಲಿ ಕೆಲಸ ಮಾಡದೇ ಇದ್ದಿದ್ದರಿಂದ ಸಾಕಷ್ಟು ನಷ್ಟವಾಗಿದೆ. ಅದನ್ನು ಹೇಳುವುದಕ್ಕು ಮುಂಚೆ ಇನ್ನೊಂದು ಮಾತು ಹೇಳೋದಾದರೆ 'ಅನುಭೂತಿ' ಎನ್ನುವ ಪುಸ್ತಕವನ್ನು ನೋಡುವುದಾದರೆ ನನ್ನ ತಲೆಮಾರಿನ ಬೇರೆ ಯಾವುದೇ ಲೇಖಕರ ಬಗ್ಗೆ ಬರೆಯದೆ ಇರುವಷ್ಟು ವಿಮರ್ಶೆ ಲೇಖನಗಳನ್ನು ಹಲವಾರು ಲೇಖಕರು ಬರೆದಿದ್ದಾರೆ. ಇದು ಒಂದು ರೀತಿಯ ಮನ್ನಣೆ. ಇದು ಇಲ್ಲದೆ ಇರುವುದಕ್ಕೆ ಹೆಚ್ಚು ಜನಪ್ರಿಯ ಆಗಿಲ್ಲ ಎಂದು ಹೇಳಬಹುದು.

ಪ್ರಶ್ನೆ: ೪. ಎಕಾನಾಮಿಕ್ಸ್ ವಿದ್ಯಾರ್ಥಿಯಾದ ತಮಗೆ ಸಾಹಿತ್ಯ ಹೇಗೆ ಪ್ರಭಾವ ಬೀರಿತು? ಸರ್.

ನಾನು ಮೈಸೂರು ವಿಶ್ವವಿದ್ಯಾಲಯದಲ್ಲಿ ೧೯೭೨-೭೪ರಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದೆ. ನಾನು ಎಂ.ಎ. ಪದವಿಗೆ ಪ್ರವೇಶ ಪಡೆಯುವುದಕ್ಕೆ ಮೊದಲೆ ಸಾಕಷ್ಟು ಸಾಹಿತ್ಯವನ್ನು ಓದಿಕೊಂಡಿದ್ದೆ. ಬೇರೆ ಕ್ಷೇತ್ರದಲ್ಲೂ ಕೂಡ ಆಸಕ್ತಿ ಇತ್ತು. ಇತಿಹಾಸ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಎಂಬ ವಿಷಯಗಳು ಇದ್ದವು. ಈ ಎಲ್ಲಾ ವಿಷಯಗಳನ್ನು ಸಾಹಿತ್ಯಕ್ಕಿಂತ ಭಿನ್ನ ಸಾಹಿತ್ಯಕ್ಕೆ ವಿರೋಧ ಎಂದು ತಿಳಿದುಕೊಳ್ಳಬಾರದು. ಅದನ್ನು ಓದುವುದರಿಂದ ಕೂಡ ಬದುಕನ್ನು ಬೇರೆ ರೀತಿಯಲ್ಲಿ ಗ್ರಹಿಸುವುದಕ್ಕೆ, ಅರ್ಥಮಾಡಿಕೊಳ್ಳಲು ಅವಕಾಶ ಆಗುತ್ತದೆ.

ಎಂ.ಎ. ಅನ್ನು ಮೈಸೂರಿನಲ್ಲಿ ಓದುವಾಗ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಮತ್ತು ಇಂಗ್ಲೀಷ್ ವಿಭಾಗದಲ್ಲಿ ಸಾಕಷ್ಟು ಪ್ರತಿಭಾವಂತರಿದ್ದರು. ಕನ್ನಡ ವಿಭಾಗದಲ್ಲಿ ಜಿ.ಹೆಚ್. ನಾಯಕ ಕೆಲಸ ಮಾಡುತ್ತಿದ್ದರು. ಇಂಗ್ಲೀಷ್ ವಿಭಾಗದಲ್ಲಿ ಅನಂತಮೂರ್ತಿ, ದಾಮೋಧರ್‌ರಾವ್ ಇತರರೆಲ್ಲ ಕೆಲಸ ಮಾಡುತ್ತಿದ್ದರು. ಸಾಕಷ್ಟು ವಿಚಾರ ಸಂಕಿರಣಗಳಲ್ಲಿ, ಸಮ್ಮೇಳನಗಳಲ್ಲಿ ಭಾಗವಹಿಸಿ, ನೋಡಿದ್ದರಿಂದ ಒಂದು ರೀತಿಯ ಎಕ್ಸ್‌ಪೋಸಿವ್ ಇತ್ತು. ಅದನ್ನು ಎಂ.ಎ. ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚು ಗಮನ ನೀಡಿದರೆ ಓದುವುದಕ್ಕೆ ಆಗುವುದಿಲ್ಲ. ಆದರೆ ಏನೇನು ಓದಬಹುದು ಎನ್ನುವಂತಹ ವಾತಾವರಣ ಇತ್ತು. ಇವತ್ತಿನ ಕನ್ನಡ ಸಾಹಿತ್ಯಿಕ ವಾತಾವರಣವನ್ನು ಗಮನಿಸಿದರೆ ಎಂ.ಎ. ಕನ್ನಡ, ಎಂ.ಎ. ಇಂಗ್ಲೀಷ್ ಮಾಡಿದವರು ಇರುತ್ತಾರೆ. ಈಗ ಇಂಜಿನಿಯರ್‌ಗಳು, ಡಾಕ್ಟರ್‌ಗಳು ಜಾಸ್ತಿ ಬರೆಯುತ್ತಿದ್ದಾರೆ ಅದು ಒಳ್ಳೆದು. ಇತ್ತೀಚಿನ ದಿನಗಳಲ್ಲಿ ಗೃಹಿಣಿಯರು ತುಂಬಾನೆ ಬರೆಯುತ್ತಾರೆ. ಎಂ.ಎ. ಅರ್ಥಶಾಸ್ತ್ರ ಮಾಡಿದವರಿಗೆ ಸಾಹಿತ್ಯ ವಿರೋಧ ಎಂದು ಅನ್ನಿಸುವುದಿಲ್ಲ. ಬದುಕನ್ನು ಅರ್ಥಮಾಡಿಕೊಳ್ಳಲು ಇನ್ನೊಂದು ಸೆಲೆಯನ್ನು ಬದುಕಿಗೆ ಕೊಡುತ್ತದೆ. ಅವೆಲ್ಲವು ಒಂದಕ್ಕೊಂದು ಪೂರಕವಾಗಿರುತ್ತವೆ.

ಪ್ರಶ್ನೆ: ೫. ನಿಮ್ಮ ಕತೆಗಳಲ್ಲಿ ಕತೆಯೊಳಗೆ ಕತೆ/ಉಪಕತೆಯ ತಂತ್ರವನ್ನು ರೂಪಿಸಿದ್ದೀರಾ? ಏಕೆ? ಸರ್.

ನನ್ನ ಕತೆಗಳಲ್ಲಿ ಕತೆಯೊಳಗೆ ಕತೆಯ ತಂತ್ರವನ್ನು ಅಳವಡಿಸಿಕೊಳ್ಳಲು ಕಾರಣ ಎಂದರೆ ಅನೇಕ ದೃಷ್ಟಿಕೋನಗಳಿಂದ ನೋಡುವಂತಹ ಉದ್ದೇಶದಿಂದ, ಒಂದು ಅನುಭವವನ್ನು ಒಬ್ಬ ಮನುಷ್ಯನನ್ನು ಅನೇಕ ದೃಷ್ಟಿಕೋನಗಳಿಂದ ನೋಡಬಹುದು. ಅದಕ್ಕೆ ನಾವು ಕತೆಯೊಳಗೆ, ಬೇರೆ ಕತೆಯನ್ನು, ಉಪಕತೆಯನ್ನು ಅನೇಕ ಕತೆಗಳು ತಂದು ಬೇರೆ ಬೇರೆ ಮಗ್ಗಲುಗಳಿಂದ ನೋಡುವುದು ಹೇಗೆ ಎಂದು ತಿಳಿಯಲು ಕತೆಯೊಳಗೆ ಕತೆಯ ತಂತ್ರವನ್ನು ಬಳಸಿಕೊಳ್ಳಲಾಗಿದೆ. ಉದಾ. ಒಂದು ಕತೆಯನ್ನು ಹೇಳುವಾಗ ಇನ್ನೊಂದು ಕತೆಯನ್ನು ಅದರ ಜೊತೆಗೆ ಹೇಳುವುದರಿಂದ ಎರಡು ದೃಷ್ಟಿಕೋನಗಳು ನಮಗೆ ಸಿಗುತ್ತವೆ. ಅವೆರಡು ಓದುಗನಿಗೆ ಸಿಗುತ್ತವೆ.

ಕಥೆ ಎನ್ನುವುದು ಯಾವಾಗಲೂ ಒಂದೇ ಇರುವುದಿಲ್ಲ. ರಾಮಾಯಣ, ಮಹಾಭಾರತಗಳನ್ನು ತೆಗೆದುಕೊಂಡು ಕೂಡ ಕತೆಯೊಳಗೆ ಕತೆ ಇರುತ್ತದೆ. ಉಪಕತೆಗಳು ಮುಖ್ಯ ಕತೆಯನ್ನು ಯಾವ ರೀತಿ ದೃಷ್ಟಿಕೋನದಿಂದ ನೋಡಬೇಕು ಎನ್ನುವುದನ್ನು ಗುರುತಿಸುತ್ತದೆ. ರಾವಣನ ಮೂಲಕ ರಾಮನನ್ನು ನೋಡುವುದು, ರಾಮನ ಮೂಲಕ ರಾವಣನನ್ನು ನೋಡುವುದು, ರಾಮಾಯಣ, ಮಹಾಭಾರತದಲ್ಲಿ ಅನೇಕ ಪಾತ್ರಗಳು ಬರುತ್ತವೆ. ಜಾಂಬವಂತನ ಪಾತ್ರ ಆಗಿರಬಹುದು, ಕಿರಾತಾರ್ಜುನಿಯ ಅವೆಲ್ಲವು ಬೇರೆ ಬೇರೆ ಕತೆಗಳ ಮೂಲಕ ಒಂದೇ ಕತೆಯನ್ನು ಹಲವು ಮಗ್ಗಲುಗಳ ಮೂಲಕ ನೋಡಲು ಈ ಉಪಕತೆಗಳನ್ನು ಬಳಸಿಕೊಳ್ಳಲಾಗಿದೆ.

ಪ್ರಶ್ನೆ: ೬. ಕತೆಗಳನ್ನು ತಮಗೆ ಅನುಭವ ಆದಂತಹ ಅನುಭವಗಳನ್ನು ಚಿತ್ರಿಸಿದ್ದೀರಾ? ಕಲ್ಪನೆಯಿಂದ ಏಕೆ ಕಥೆಗಳನ್ನು ರಚನೆ ಮಾಡಿಲ್ಲ. ಸರ್.

ಅನುಭವದ ಆದಾರದ ಮೇಲೆ ಕತೆಗಳನ್ನು ಬರೆಯುವುದಕ್ಕೆ ಹೋದಾಗಲು ಕೂಡ ನಮಗೆ ಗೊತ್ತಿಲ್ಲದೆ ಇರುವಂತಹ ಅನೇಕ ಅಂಶಗಳು ನಮ್ಮ ಕಲ್ಪನೆಯ ಅಂಶಗಳಾಗಿ ಅದರಲ್ಲಿ ಸೇರಿಕೊಂಡಿರುತ್ತವೆ. ನಿಮಗೆ ಏನೆನಿಸುತ್ತದೆ ಎಂದರೆ ನಮ್ಮಂತವರ ಕತೆಗಳನ್ನು ಓದುವಾಗ ನಮ್ಮ ಎದುರುಗಿನ ಅನುಭವಗಳನ್ನು ಕುರಿತು ಬರೆಯುತ್ತಾರೆ ಎನಿಸುತ್ತದೆ. ನಮ್ಮ ಎದುರುಗಡೆ ಇರುವ ವ್ಯಕ್ತಿಯನ್ನು ಕುರಿತು ಬರೆಯುತ್ತಿದ್ದಾರೆ ಎನಿಸುತ್ತದೆ. ಅದು ಯಾಕೆ ಅಂದರೆ ಒಂದು ಪಾತ್ರವನ್ನು ಸೃಷ್ಟಿಸುವಾಗ ಒಂದು ಪಾತ್ರಕ್ಕೆ ಹತ್ತಾರು ಜನರುಗಳನ್ನು ಸೇರಿಸಿಕೊಂಡಿರುತ್ತೇವೆ. ಹತ್ತಾರು ಆಯಾಮಗಳನ್ನು ಸೇರಿಸಿಕೊಂಡಿರುತ್ತೇವೆ. ಹತ್ತಾರು ಆಯಾಮಗಳನ್ನು ಸೇರಿಸಿಕೊಳ್ಳುವುದೇ ಕಲ್ಪನೆ.

ಯಾರೋ ಒಬ್ಬರನ್ನು ನೋಡಿದರೆ, ಯಾವುದಾದರೂ ಅನುಭವಗಳನ್ನು ನೋಡಿದರೆ ಅದನ್ನು ಯತಾವತ್ತಾಗಿ ಬರೆಯಲು ಆಗುವುದಿಲ್ಲ. ಯತಾವತ್ತಾಗಿ ಬರೆದರೆ ಅದು ವರದಿಯಾಗಿ ಬಿಡುತ್ತದೆ. ಆದ್ದರಿಂದ ನಾನು ತುಂಬಾ ವಾಸ್ತವವಾದಿ ಬರವಣಿಗೆ ಎಂದು ಹೇಳುತ್ತಿರುತ್ತೇನಲ್ಲ

ಅದರಲ್ಲೂ ಕೂಡ ಕಲ್ಪನೆಯ ಅಂಶ ಇರುತ್ತದೆ. ಉದಾ. ಕುವೆಂಪುರವರ ಕಾದಂಬರಿಗಳನ್ನು ತೆಗೆದುಕೊಂಡರೆ ಎಲ್ಲ ನೋಡಿರುವುದನ್ನು ಬರೆದಿದ್ದಾರೆ. ನೋಡಿರುವುದಕ್ಕೆ ಒಂದು ಪ್ರತೀತವು ಹೊಳಪು ಬಂದಿರುವುದು. ಕಲ್ಪನೆ ವಾಸ್ತವ ಶಕ್ತಿ ಎಂದು ಹೇಳಬಹುದು. ಅದನ್ನು ತುಂಬಾ ವಾಸ್ತವವಾದಿ ಅಂಶ ಎಂದು ಏನನ್ನು ಹೇಳುತ್ತೇವೋ ಅದರಲ್ಲೂ ಕಲ್ಪನೆಯ ಅಂಶ ಇರುತ್ತದೆ. ಕಲ್ಪನೆ ಎನ್ನುವುದು ಎಷ್ಟು ಕಲ್ಪನೆಯಿರುತ್ತದೆ, ಎಷ್ಟು ಶ್ರೀಮಂತವಾಗಿರುತ್ತದೆ ಅಷ್ಟು ವಾಸ್ತವತೆಗೆ, ವಾಸ್ತವವಾದಕ್ಕೆ ಹೊಳಪು ಬರುತ್ತದೆ. ಯಾವುದು ಪೂರ್ತಿ ವಾಸ್ತವವಾದವಲ್ಲ, ಯಾವುದು ಪೂರ್ತಿ ಕಲ್ಪನೆಯಲ್ಲ. ನನ್ನ ಎಲ್ಲ ಕತೆಗಳಲ್ಲಿ ಬಾಲ್ಯದಲ್ಲಿ ಆಗಿರುವ ಅನುಭವಗಳ ಪುನಃ ಸಿಗುತ್ತವೆ. ಮತ್ತೆ ಮತ್ತೆ ಸಿಗುವಂತದೇ ಕಲ್ಪನೆ. ಅದು ಸಿಗುವುದೇ ಕಲ್ಪನೆಯ ಮೂಲಕ.

ಪ್ರಶ್ನೆ: ೭. ತಮ್ಮ ಕತೆಗಳ ಮೂಲಕ ಸಮಾಜಕ್ಕೆ ಯಾವ ಬದಲಾವಣೆಯನ್ನು/ಸಂದೇಶವನ್ನು ಕೊಡುವುದಕ್ಕೆ ಬಯಸುತ್ತೀರಾ? ಸರ್.

ಈ ಪ್ರಶ್ನೆಗೆ ಎರಡು ರೀತಿಯ ಉತ್ತರ ಕೊಡಬಹುದು. ಒಂದು ಒಬ್ಬ ಓದುಗ ಒಂದು ಸಾಹಿತ್ಯ ಕೃತಿಯನ್ನು ಓದುವಾಗ ಓದುಗ ವೈಯಕ್ತಿಕವಾಗಿ ಅವನು ಮನುಷ್ಯ. ಎಲ್ಲೆ ಒಂದು ಕಡೆ ಕುಳಿತು ಕತೆಗಳನ್ನು ಓದಬಹುದು ಮತ್ತು ಓದುಗ ಸಮುದಾಯ ಎನ್ನುವುದು ಕೂಡ ಒಂದು ಇದೆ. ಆದರೆ ಓದುಗ ಸಮುದಾಯದಿಂದನೇ ಎಷ್ಟು ಪರಿಣಾಮ ಬೀರುವುದಕ್ಕೆ ಆಗುತ್ತೆ ಬೀರಕಾಗುವುದಿಲ್ಲ. ಆದರೆ ಒಬ್ಬ ಓದುಗ ಏಕಾಂತದಲ್ಲಿ ಕುಳಿತು ಓದುವಾಗ ಅವನ ಮನಸ್ಸಿನ ಸಂರಚನೆ ಮೇಲೆ, ಅವನ ಆಲೋಚನ ಕ್ರಮದ ಮೇಲೆ ನಮ್ಮ ಕತೆಗಳನ್ನು ಓದಿದಾಗ ಏನಾದರೂ ಪ್ರಭಾವ ಆದರೆ ಅವನು ಬದುಕನ್ನು ಗ್ರಹಿಸುತ್ತಾನೆ. ಅದಕ್ಕೆ ಒಂದು ಸಣ್ಣ ಆಯಾಮ ಸೇರಿಕೊಂಡು ಬದಲಾವಣೆಯಾದರೆ ಕತೆ ನನ್ನ ಬರವಣಿಗೆಗೆ ಸಾರ್ಥಕವಾಗುತ್ತದೆ.

ಈಗ ಸಾಹಿತ್ಯ ಜನಜೀವನದ ಪ್ರತಿಬಿಂಬ ಅದರ ಮೇಲೆ ಪ್ರಭಾವ ಬೀರಬೇಕು ಎನ್ನುವುದು ವೈಚಾರಿಕ ಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಮಾತು. ಈಗ ಸಮಾಜದಲ್ಲಿ ಮೂಢನಂಬಿಕೆ ಇರಬೇಕು ಬೇಡವೇ, ಬೆತ್ತಲೆ ಸೇವೆ ಇರಬೇಕು ಬೇಡವೇ, ಜನರು ಹೇಗೆ ಸಂಘಟಿತರಾಗಬೇಕು, ಹೇಗೆ ಹೋರಾಟ ಮಾಡಬೇಕು ಎನ್ನುವುದು ವೈಚಾರಿಕ ಸಾಹಿತ್ಯಕ್ಕೆ ಸಂಬಂಧಪಟ್ಟಿದ್ದು. ಸಜ್ರನಶೀಲ ಸಾಹಿತ್ಯ ಎನ್ನುವುದು ಅದರ ಪ್ರಭಾವ ನಿಧಾನವಾಗಿರುತ್ತದೆ. ಅಪ್ರತ್ಯಕ್ಷವಾಗಿರುತ್ತದೆ. ಆದರೆ ಗಾಢವಾಗಿ ಆಳವಾಗಿರುತ್ತದೆ. ವೈಚಾರಿಕ ಸಾಹಿತ್ಯ ಭಾಷೆಯಾಗಿರಬಹುದು, ವಿಮರ್ಶೆಯಾಗಿರಬಹುದು ಅದು ಬೇಗ ಪ್ರಭಾವವನ್ನು ಬೀರುತ್ತದೆ.

ಸೃಜನಶೀಲ ಸಾಹಿತ್ಯ ಎನ್ನುವುದು ನಿಧಾನವಾಗಿ ಮತ್ತು ಖಚಿತವಾಗಿ, ಆಳವಾಗಿ ಪರಿಣಾವನ್ನು, ಪ್ರಭಾವವನ್ನು ಬೀರುತ್ತದೆ. ನನಗೆ ನನ್ನ ದೃಷ್ಟಿ ವೈಚಾರಿಕ ನೆಲೆಯಲ್ಲಿ ಇದ್ದೆನಲ್ಲ ಎನ್ನುವುದು. ವಿಮರ್ಶಕರು ನನ್ನ ಕತೆಗಳನ್ನು ಓದಿದರೆ ಮನುಷ್ಯನ ಸಾಧನೆ ಮತ್ತು ಏಕಾಂತ ಏನಿರುತ್ತೆ ಅಲ್ಲಿ ಅಪರೇಟ್ ಮಾಡುತ್ತದೆ. ಎಲ್ಲಿ ಸಮಾಜವನ್ನು ಬದಲಾಯಿಸುವುದಕ್ಕೆ ಯಾರು

ನನ್ನ ಕತೆಗಳನ್ನು ಓದುತ್ತಾರೋ, ಯಾರು ಕಲ್ಪನೆಯ ಬರವಣಿಗೆಯನ್ನು ಇಷ್ಟಪಡುತ್ತಾರೋ, ಯಾರು ಕ್ರಿಯಾತ್ಮಕ ಬರವಣಿಗೆಯನ್ನು ಇಷ್ಟಪಡುತ್ತಾರೋ ಅವರನ್ನು ಪರಿಹಾರ ಮಾಡಲಿಕ್ಕೆ, ಅವರನ್ನು ಉದ್ದೇಶಿಸಿ ಮಾತನಾಡುವುದಕ್ಕೆ ಅವರೊಂದಿಗೆ ಅನುಸಂಧಾನ ಮಾಡಲು ನಮ್ಮ ಸೃಜನಶೀಲ ಬರವಣಿಗೆ ನೆರವಾಗುತ್ತದೆ. ನೇರವಾಗಿ ಅವರ ಮೇಲೆ ಪ್ರಭಾವ ಬೀರಬೇಕೆಂದರೆ ಆತರಹದ ಬರವಣಿಗೆಗಳನ್ನು ನಾನು ಬರೆದಿದ್ದೇನೆ. ವಿಮರ್ಶೆಗಳು, ಲೇಖನ, ಅಂಕಣಗಳು ಅದೆಲ್ಲವನ್ನು ಬರೆಯುವುದು ಸಮಾಜದ ಮೇಲೆ ಗಾಢವಾಗಿ ಪರಿಣಾಮ/ಪ್ರಭಾವವನ್ನು ಬೀರುತ್ತವೆ. ಸಾಹಿತ್ಯ ಎನ್ನುವುದು ಮನುಷ್ಯನಿಗೆ ಒಳಗಡೆ ಪ್ರಭಾವ ಬೀರುತ್ತದೆ. ಅದರ ಪರಿಣಾಮ ಕಚಿತವಾಗಿ ನಿಧಾನವಾಗಿ ಆಗುತ್ತದೆ.

ಪ್ರಶ್ನೆ: ೮. ಹಿಂದಿನ ಯುವ ಕವಿಗಳಿಗೆ/ಬರಹಗಾರರಿಗೆ ತಾವು ಏನು ಹೇಳುವುದಕ್ಕೆ ಬಯಸ್ತೀರಾ? ಸರ್.

ಒಂದು ಅಧ್ಯಯನಶೀಲತೆಯನ್ನು ಗುರುತಿಸಿಕೊಳ್ಳಬೇಕು ಮತ್ತು ನಮ್ಮ ಕನ್ನಡ ಸಾಹಿತ್ಯ ಎಂದರೆ ೨೦–೨೧ನೇ ಶತಮಾನದ ಸಾಹಿತ್ಯವಲ್ಲ ಅದು. ಕನ್ನಡ ಸಾಹಿತ್ಯದ ಮುಖ್ಯ ಧ್ವನಿ ಎಂದರೆ ಸಾಧನ ಇರುವುದು ನಮ್ಮ ಹಳಗನ್ನಡ ಮತ್ತು ನಡುಗನ್ನಡ ಸಾಹಿತ್ಯದಲ್ಲಿ ನಮ್ಮ ಎಲ್ಲಾ ಕನ್ನಡ ಬರವಣಿಗೆಯನ್ನು, ಕನ್ನಡ ಮತ್ತು ಬೇರೆ ಸಾಹಿತ್ಯದ ಕತೆಯನ್ನು ಓದಬೇಕು. ಅದರ ಜೊತೆಗೆ ನಮ್ಮ ಅನುಭವಕ್ಕೆ ಸಂವಾದಿಯಾಗಿರುವ, ವಿಚಾರಕ್ಕೆ ಸಂವಾದಿಯಾಗಿರುವ ಬೇರೆ ದೇಶದ ಸಾಹಿತ್ಯವನ್ನು ಕೂಡ ಓದಬೇಕು. ದೇಶಿವಾದದ ಹೆಸರಿನಲ್ಲಿ ನಾವು ರೂಪಗೊಂಡಿರುವ, ನಮ್ಮ ಯಾವುದೇ ಲೇಖಕರನ್ನು ತೆಗೆದುಕೊಂಡರು, ಕುವೆಂಪು, ಬೇಂದ್ರೆಯವರಿಗೆ ಅನೇಕ ಜ್ಞಾನ ಶಿಸ್ತುಗಳ ಬಗ್ಗೆ ಅನೇಕ ಸಾಹಿತ್ಯಗಳ ಬಗ್ಗೆ, ಅನೇಕ ಧರ್ಮಗಳ ಬಗ್ಗೆ ಆಸಕ್ತಿ ಇತ್ತು. ಅದು ಅಲ್ಲದೆ ಅವರು ಯೌವ್ವನದ/ಆರಂಭದ ದಿನಗಳಲ್ಲಿಯೇ ಅವುಗಳನ್ನು ಮೈಗೂಡಿಸಿಕೊಂಡು ಬಂದಿದ್ದರು. ನಮ್ಮ ಯುವಕರು ಕೂಡ ಒಂದು ವಿಸ್ತಾರವಾದ ಆಳವಾದ ಅಧ್ಯಯನಶೀಲತೆಗೆ ತೊಡಗಬೇಕು.

ಸೃಜನಶೀಲ ಬರವಣಿಗೆ ಎಂದರೆ ಎಷ್ಟೇ ಪ್ರತಿಭಾವಂತನಾಗಿದ್ದರು ಒಬ್ಬ ಲೇಖಕನಲ್ಲಿ ವಿಕಾಸವಾಗಲು ಸಾಕ್ಷಾತ್ಕಾರವಾಗಲು, ಸೃಜನಶೀಲರಾಗಲು ಸುಮಾರು ಇಪ್ಪತ್ತು, ಮೂವತ್ತು, ನಲವತ್ತು ವರ್ಷಗಳು ಬೇಕಾಗುತ್ತವೆ. ಈಗ ಯಾರೇ ಆಗಲಿ ಮೊದಲಿಗೆ ಮಲೆಗಳಲ್ಲಿ ಮದುಮಗಳು, ಕಾನೂರು ಹೆಗ್ಗಡತಿ, ಮರಳಿಮಣ್ಣಿಗೆ ಇಂತಹವುಗಳನ್ನು ಬರೆಯಲು ಆಗುವುದಿಲ್ಲ. ಅದಕ್ಕೆ ಒಂದು ಸತತವಾದ ಪ್ರಯೋಗವನ್ನು ಮಾಡುತ್ತಾ ಒಂದು ಜೀವಂತಿಕೆಯನ್ನು, ಶ್ರದ್ಧೆಯನ್ನು, ಉಳಿಸಿಕೊಳ್ಳಬೇಕು ಮತ್ತು ಇದು ಮನಸ್ಸಿನಲ್ಲಿ ಯಾವಾಗಲೂ ತೆರೆದುಕೊಳ್ಳಬೇಕು.

ಯಾವುದೇ ವಿಚಾರವನ್ನು ನಮ್ಮ ಅನುಭವದ ಮೂಸೆಯಲ್ಲಿ ಪರೀಕ್ಷಿಸಬೇಕೆವರೆತು ಅವರಿವರು ಹೇಳಿದ್ದಾರೆ ಎಂದು ಒಪ್ಪಿಕೊಳ್ಳಲು ಹೋಗಬಾರದು. ಒಂದು ವಿಚಾರಕ್ಕೆ ಬದ್ಧವಾಗಿಬಿಟ್ಟರೆ

ಮನಸ್ಸಿನಲ್ಲಿ ಒಂದು ಚೌಕಟ್ಟು ಬರುತ್ತದೆ. ಆದಷ್ಟು ಮನಸ್ಸನ್ನು ತೆರೆದಿಟ್ಟುಕೊಂಡು ಇನ್ನೊಬ್ಬರ ಬಗ್ಗೆ ಅನುಮಾನ ಪಡುತ್ತಾ ಹಾಗೂ ಇನ್ನೊಬ್ಬರ ಬಗ್ಗೆ ಪ್ರೀತಿಯನ್ನು ಇಟ್ಟುಕೊಳ್ಳುತ್ತಾ ಎಲ್ಲಾದಕ್ಕೂ ಮನಸ್ಸನ್ನು ತೆರೆದುಕೊಂಡಿರುವುದರ ಜೊತೆಗೆ, ಅಧ್ಯಯನಶೀಲತೆಯನ್ನು ಬೆಳೆಸಿಕೊಳ್ಳಬೇಕು. ದಿಢೀರನೇ ಪ್ರಭಾವ ಬೀರಬೇಕೆಂದರೆ ವಿಮರ್ಶೆ, ವಿಚಾರ, ಅಂಕಣ ಈ ತರಹದ ಸೃಜನಶೀಲ ಬರವಣಿಗೆಯಲ್ಲಿ ನಾವು ಸಾಧನೆ ಮಾಡುತ್ತೇವೆ ಎಂದರೆ ಸಹನೆ ಬೇಕು. ಸಹನೆಯ ಜೊತೆಗೆ ಕಾಯುವಂತಹ ತಾಳ್ಮೆ ಬೇಕು. ಸಾಕಷ್ಟು ಕಾದ ಮೇಲೂ ಪ್ರಯೋಜನ ಸಿಗುತ್ತದೆ ಇಲ್ಲವೋ ಅದಕ್ಕು ರೆಡಿಯಾಗಿರಬೇಕು.

❖❖❖

ಅಧ್ಯಾಯ : ಆರು

ಸಮಾರೋಪ

ಪರಾಮರ್ಶನ ಗ್ರಂಥಗಳು

ಅಧ್ಯಾಯ: ಆರು

ಸಮಾರೋಪ

ಕೆ. ಸತ್ಯನಾರಾಯಣರ ಕತೆಗಳು ಕನ್ನಡ ಕಥನ ಸಾಹಿತ್ಯದಲ್ಲೇ ಅಪೂರ್ವವಾಗಿವೆ. ಕೇಂದ್ರಸ್ಥಾನದಲ್ಲಿ ಸಮಕಾಲೀನ ಜಗತ್ತಿನ ಪ್ರಸಿದ್ಧರನ್ನು ಜೀವಂತ ಪಾತ್ರಗಳಿಂದ ಇರಿಸಿ ಅವರ ಜನಪರ ಆಂದೋಲನಗಳಿಗೆ ಇಂದಿನ ಜನಾಂಗ ಪ್ರತಿಕ್ರಿಯಿಸುತ್ತಿದ್ದುದ್ದರ ಕಾಲ್ಪನಿಕ ಚಿತ್ರದ ಮೂಲಕ ಪ್ರಕಟಿಸಿದ್ದಾರೆ. ಈ ಕತೆಗಳು ಬಿಡಿಯಾಗಿ ಹಾಗೂ ಇಡಿಯಾಗಿ ಸಮಕಾಲೀನ ಭಾರತದ ವಾಸ್ತವ ಚಿತ್ರಣಗಳಾಗಿವೆ. ಒಂದು ಕಾಲಕ್ಕೆ ಪ್ರಸಿದ್ಧರು ಸಾಧಿಸಿದ ಸಾಮಾಜಿಕ ಪರಿವರ್ತನೆ ಈಗ ಭ್ರಷ್ಟಾಚಾರ, ಸ್ವಾರ್ಥ, ದಲಿತರ ಮೇಲಿನ ದೌರ್ಜನ್ಯ, ನಗರೀಕರಣ, ಹಳ್ಳಿಗೆ ಅಧಿಕಾರದ ವಿಕೇಂದ್ರೀಕರಣಗಳಲ್ಲಿ ಪರ್ಯವಸಾನವಾಗಿವೆ. ಒಟ್ಟಿನಲ್ಲಿ ಈಗ ಭಿನ್ನ ಸಾಮಾಜಿಕ ಪರಿಸರ ಬದಲಾಗಿದೆ. ಇವುಗಳನ್ನೆಲ್ಲ ಕತೆಗಾರ ಬಿಡಿಬಿಡಿಯಾಗಿ ಬಿಡಿಸುವುದರ ಮೂಲಕ ಭಾರತದ ದುರಂತ ಚಿತ್ರಣ ಕೊಟ್ಟಿದ್ದಾರೆ.

ಇಂದು ಅನೇಕರು ಬದುಕುತ್ತಿರುವ ಮಧ್ಯಮ ದರ್ಜೆಯ ಮಾಮೂಲಿ ಸಾಮಾನ್ಯ ಬದುಕನ್ನು ಸತ್ಯನಾರಾಯಣ ಅವರ ಕಥೆಗಳಲ್ಲಿ ಕಂಡದ್ದು ಕಂಡ ಹಾಗೆ ತೋರಿಸಿಕೊಡುತ್ತಾರೆ. ಬದುಕು ಕಥೆಗಳಲ್ಲಿ ಹಾಗೆ ಕಾಣಿಸಿಕೊಂಡು ಅವು ಇರುವುದೇ ಹಾಗೆ ಎಂಬ ತಿಳಿವಳಿಕೆಯನ್ನು ಅರಿವಿಗೆ ತರುವಲ್ಲಿ ಹೆಚ್ಚಿನ ಕಥೆಗಳು ಕೊನೆಗೊಳ್ಳುತ್ತವೆ. ಹಾಗಿದ್ದರೆ ಬದುಕಿನಲ್ಲಿ ಸತ್ಯವನ್ನು ಹುಡುಕುವ ಜವಾಬ್ದಾರಿ ಯಾರದ್ದು? ಅದು ಎಂದೋ ಒಮ್ಮೆ ಆಕಸ್ಮಿಕವಾಗಿ ಹೊಳೆದು ಬಿಡುವ ವಿಚಾರವೇ? ತಿಳಿವಳಿಕೆಯಲ್ಲಿ ಮಾಗಬೇಕಾದ್ದೆ? ಅನೇಕ ವೈರುಧ್ಯಗಳು ಒಂದಕ್ಕೊಂದು ಎದುರಾಗುವಲ್ಲಿ ಆಕಸ್ಮಿಕವಾಗಿ ಒಮ್ಮೊಮ್ಮೆ ಸತ್ಯದ ಸುಳಿವು ಕಂಡರೂ ಕಾಣಬಹುದು ಎಂಬುದು ಸತ್ಯನಾರಾಯಣ ಅವರ ಕಥೆಗಳ ಒಳಗೆ ಹುದುಗಿರುವ ಒಂದು ಆಸೆ.

ಸತ್ಯನಾರಾಯಣ ಅವರ ಕಿರು ಕಥೆಗಳು, ಲೇಖಕನೊಬ್ಬ ತನ್ನ ಹೆಗಲೇರಿರುವ ಕಥನಶೈಲಿ ಮತ್ತು ಕಾಣುವ ಬಗೆಯನ್ನು ಕೊಡವಿ ಹೊಸ ರೀತಿಯಲ್ಲಿ ನೋಡುವ/ಕಾಣುವ ಬಗೆಯನ್ನು

ಅನ್ವೇಷಿಸುವ ಧೀರ ಪ್ರಯತ್ನ ಕನ್ನಡಕ್ಕೂ ಇದು ಹೊಸ ದಾರಿಯ ಸುಳುಹು. ಈ ಮಾತುಗಳು ವರಸೆಯ ಮಾತುಗಳಂತೆ ಕೇಳಬಾರದು. ಸತ್ಯನಾರಾಯಣ ತಮ್ಮ ಕಥೆಗಳಲ್ಲಿ ಮಾಸ್ತಿಯವರ ಒಂದು ಮಟ್ಟನಲ್ಲಿ ಕಥೆ ಕಟ್ಟುತ್ತಾ ಹೋಗುತ್ತಾರೆ. ಮಾಸ್ತಿಯವರ ವಿವರಗಳ ಹ್ರಸ್ವತನ ಸತ್ಯನಾರಾಯಣ ಅವರಲ್ಲಿಲ್ಲ. ಅವರ ಕಥೆಗಳಿಗೆ ನಿರೂಪಣೆಯ ವಿಸ್ತಾರವಿದೆ. ಆದರೆ ಅದು ವಿವರಗಳ ದುಂದು ಅಲ್ಲ. ಪಾರಂಪರಿಕವಾಗಿ ನಮ್ಮಲ್ಲಿ ನೆಂಟರಿಷ್ಟರು, ಲೋಕಾಭಿರಾಮದಲ್ಲಿ ಬಿಚ್ಚಿಡುತ್ತಾ ಹೋಗುವ ತಂತ್ರ ಇದು. ಆಡು ಮಾತಿನ ಕಥನ ಮಥನದ ವಿಶ್ಲೇಷಣೆ. ಜಾಗರೂಕವಾದ ಪ್ರಜ್ಞೆ ಕೊಂಚ ಒರಟಾಗಿ ಹೇಳುವುದಾದರೆ ಆತ್ಮೀಯವೆನ್ನಿಸುವಾಗಲೂ ಅಷ್ಟು ದೂರ ಉಳಿಸಿಕೊಳ್ಳುವ ಬ್ರಾಹ್ಮಣರ ಮಾತಿನ ಶೈಲಿ. ಇಷ್ಟು ವರ್ಷಗಳ ಬಳಿಕವು ಸರಳವಾಗಿ ಮುಂದಿಡುವ ಈ ಶೈಲಿಯ ಸಾಂಗತ್ಯದ ಶಕ್ತಿಯನ್ನು ಉಳಿಸಿಕೊಂಡಿದ್ದಾರೆ.

ವರ್ತಮಾನದ ಬದುಕಿನ ಕಟು ವಾಸ್ತವತೆಯ ಅರಿವಿನಿಂದ ಹುಟ್ಟಿಕೊಂಡ ಗಾಢವಾದ ವಿಷಾದ ಹಾಗೂ ಅದರ ಮಧ್ಯೆಯೂ ಮೊಳಕೆಯೊಡೆಯುತ್ತಿರುವ ಜೈವಿಕ ಚಲನಶೀಲ ಸಂಬಂಧಗಳ ಬಗೆಗಿನ ಆಶಾವಾದ ಸತ್ಯನಾರಾಯಣ ಅವರ ಕತೆಗಳ ಪ್ರಧಾನ ಸಾಧನೆಯಾಗಿದೆ. ಸತ್ಯನಾರಾಯಣರ ಅನುಭವಲೋಕ ದೊಡ್ಡದು ಮತ್ತು ವಿಭಿನ್ನವಾದುದು. ಅವರ ಕತೆಗಳು ನಮ್ಮ ಇತ್ತೀಚಿನ ಬದುಕಿನ ಅನೇಕ ಮಗ್ಗಲುಗಳ, ನೆಲೆಗಳ ಅನ್ವೇಷಣೆಗೆ ತೊಡಗಿಕೊಳ್ಳುತ್ತವೆ. ಸಮಷ್ಟಿಹಿತ, ಸಹಬಾಳ್ವೆಗಾಗಿ ಅವು ಸದಾ ತುಡಿಯುವಂಥವು.

ನಮ್ಮ ವಿದ್ಯಾವಂತ ವರ್ಗವನ್ನು ಒಂದು ವ್ಯಸನವಾಗಿ ಕಾಡಿರುವ ಸಾಮಾಜಿಕ ಬದಲಾವಣೆ ಎಂಬುದು ಎಷ್ಟೊಂದು ವೈವಿಧ್ಯಮಯವಾದ ಸಾಮಾಜಿಕ ಒಳಹರಿವುಗಳಿಂದ ಮತ್ತು ಒಳಸುಳಿಗಳಿಂದ ರೂಪುಗೊಳ್ಳುತ್ತದೆ ಎಂಬುದರ ಕಡೆಗೆ ಇವರ ಕತೆಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಜೊತೆಗೆ ಸಾಮಾನ್ಯರೆಂದು ಗುರುತಿಸಲಾಗುವ ಜನರು ತಮ್ಮ ಬದುಕನ್ನು ತಮ್ಮ ಇಷ್ಟದಂತೆ ಕಟ್ಟಿಕೊಳ್ಳುವಲ್ಲಿ ತೋರಿಸುವ ಛಲವಂತಿಕೆಗೆ ನಾವು ಹಾಗೂ ನಮ್ಮಂತೆಯೇ ಸಮಾಜದ ಮುತ್ಸದ್ದಿಗಳು ಕೂಡ ಎಷ್ಟೊಂದು ಕುರುಡಾಗಿದ್ದೇವೆ ಎಂಬುದನ್ನು ಕೂಡ ಇವರ ಕತೆಗಳು ತೋರಿಸುತ್ತವೆ.

ಸತ್ಯನಾರಾಯಣರ ಕತೆಗಳಲ್ಲಿ ನಿರೂಪಕರ ಮಾತು ಜಾಸ್ತಿ, ಅಲ್ಲದೆ ಇವರ ಕತೆಗಳನ್ನು ಹೇಳುವವರು ಒಮ್ಮೊಮ್ಮೆ ತಾವೇ ಓದುಗ ಮತ್ತು ವಿಮರ್ಶಕರ ಪಾತ್ರಗಳನ್ನು ವಹಿಸಿ, ತಮ್ಮ ಕತೆಗೆ ಬರಬಹುದಾದ ಆಕ್ಷೇಪಗಳನ್ನು ಮುಂದಾಗಿ ಊಹಿಸಿಕೊಂಡು, ಅವಕ್ಕೆ ಉತ್ತರಗಳನ್ನು ಕೊಟ್ಟು ಬಿಡುತ್ತಾರೆ. ತಮ್ಮ ವಸ್ತು, ಚಿಂತನೆಗಳ ಬಹುರೂಪತೆ ಹಾಗೂ ಕಥಾ ಶೋಧದ ನಿಷ್ಠೆ ಇವುಗಳ ಮೂಲಕ ಸತ್ಯನಾರಾಯಣರ ಕತೆಗಳು ವಿಭಿನ್ನ ಕಾಲ ಸನ್ನಿವೇಶಗಳಲ್ಲಿ ಹಲವು ಬಗೆಯ ಓದಿಗೆ ನಮ್ಮನ್ನು ಪ್ರಚೋದಿಸಬಲ್ಲ ಶಕ್ತಿ ಪಡೆದಿವೆ. ಕೆ. ಸತ್ಯನಾರಾಯಣ ಅಖ್ಯಾನ–ವ್ಯಾಖ್ಯಾನಗಳ ಮೂಲಕವೇ ಸಣ್ಣಕತೆಯ ಕುಸುರಿ ಕೆಲಸ ಮಾಡುವ ಕತೆಗಾರ, ಅವರ ಕತೆಗಳು

ನಮ್ಮ ಕಾಲದ ಸಮಾಜದ ಜಿಕ್ಕಟ್ಟುಗಳನ್ನು ಸೂಕ್ಷ್ಮವಾಗಿ ಗುರುತಿಸಿ ವ್ಯಾಖ್ಯಾನಿಸುತ್ತವೆ. ಉತ್ತಮ ಅಭಿರುಚಿಯ ಕತೆಗಾರನೊಬ್ಬನ ಆಖ್ಯಾನ ಕೌಶಲ್ಯದ ರುಚಿ ನೋಡಲಿಕ್ಕಾಗಿಯೇ ಅವರ ಕತೆಗಳನ್ನು ಓದಬೇಕು.

ಕನ್ನಡ ಸಣ್ಣಕಥೆಯ ಪರಂಪರೆಯಲ್ಲಿ ವಿಭನ್ನರಾಗಿ ವಿಶಿಷ್ಟರಾಗಿ ಸೃಜನಶೀಲತೆಯ ಸ್ವಂತಿಕೆಯೇ ಕಾರಣವಾಗಿ ಸತ್ಯನಾರಾಯಣ ಇಂದಿನ ಕಥೆಗಾರರಲ್ಲಿ ಪ್ರಮುಖರಾಗಿ ಉಳಿಯುತ್ತಾರೆ. ಸತ್ಯನಾರಾಯಣರು ತಮ್ಮ ಗುರು ಮಾಸ್ತಿಯಿಂದ 'ತಂತ್ರ' ದೀಕ್ಷೆ ಪಡೆದಂತೆ 'ಮಂತ್ರ' ದೀಕ್ಷೆಯನ್ನು ಪಡೆಯಬೇಕಾಗಿದೆ. ಕಥೆಗಳನ್ನು ಕಡೆಗೆ ಮನಸ್ಸಿಟ್ಟಂತೆ ತೋರುತ್ತಿಲ್ಲ. ಇದು ಮೇಲ್ನೋಟಕ್ಕೆ ಕಥೆಗಾರನ ಕಸುಬುದಾರಿಕೆಯ ಸಾಮರ್ಥ್ಯದ ಪ್ರಶ್ನೆಯಾಗಿ ಕಂಡರೂ, ಮೂಲಭೂತವಾಗಿ ಕತೆಗಾರನ ವ್ಯಕ್ತಿತ್ವದ ಅಖಂಡತೆ, ಪೂರ್ಣತೆಗೆ ಸಂಬಂಧಪಟ್ಟ ಆಧ್ಯಾತ್ಮಿಕ ಪ್ರಶ್ನೆ ಈ ದೊಡ್ಡ ಪ್ರಶ್ನೆಯನ್ನು ಎಷ್ಟರಮಟ್ಟಿಗೆ ಕಥೆಗಾರ ಎದುರಿಸಿದ್ದಾನೆ ಎಂಬುದರ ಮೇಲೆ ಆತನ ಕಥೆಗಾರಿಕೆಯ ಒಟ್ಟಾರೆಯ ಸಾರ್ಥಕತೆ ನಿರ್ಧರಿತವಾಗುತ್ತದೆ.

ಕನ್ನಡದಲ್ಲಿ ಕಥನಕಲೆಯನ್ನು ಗಂಭೀರವಾಗಿ ತೆಗೆದುಕೊಂಡಿರುವ ಸಮಕಾಲೀನ ಲೇಖಕ ಕೆ. ಸತ್ಯನಾರಾಯಣ. ಕನ್ನಡದ ಸಣ್ಣಕತೆಗಳ ಮುಂದಿನ ಪ್ರಾತಿನಿಧ್ಯಕ ಸಂಕಲನಗಳು ಅವರ ಕತೆಗಳಲ್ಲದೆ ಹೋದರೆ ಅಪೂರ್ಣವಾಗುತ್ತವೆ. ತಮ್ಮ ಕಥೆ ಹಾಗೂ ಕಾದಂಬರಿಗಳ ಮೂಲಕ ಅವರು ನಮ್ಮ ಕಾಲದ ಬದುಕನ್ನು ವಿಶಿಷ್ಟವಾಗಿ ಗ್ರಹಿಸುವ ಕೆಲಸವನ್ನು ಮಾಡುವುದಲ್ಲದೆ ಕಥನ ತಂತ್ರಗಳಲ್ಲಿಯೂ ಗಂಭೀರವಾದ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಅವರು ಮಾಸ್ತಿ ಮಾದರಿಯ ಕಥನವನ್ನು ಬಳಸಿದ್ದಾರೆ ಎಂದು ವಿಮರ್ಶಕರು ಗ್ರಹಿಸಿದ್ದಾರೆ. ಮಾಸ್ತಿಯವರು ಸತ್ಯನಾರಾಯಣರಿಗೆ ಪ್ರಿಯರಾದ ಲೇಖಕರು.

ದಲಿತ ಬಂಡಾಯೋತ್ತರ ಸಂದರ್ಭದಲ್ಲಿ ಪ್ರಮುಕ ಕಥೆಗಾರರಾಗಿ ಹೊರಹೊಮ್ಮಿರುವ ಇವರು ಕಥಾವಸ್ತು, ವಿನ್ಯಾಸ, ತಂತ್ರ, ವಿಚಾರ, ಕಾಲ ದೇಶಗಳಲ್ಲಿ ವೈವಿಧ್ಯತೆಗಳನ್ನು ಮರೆಸಿ, ಕನ್ನಡ ಕಥಾಸಾಗರದಲ್ಲಿ ಮೀನಿನಂತೆ ಲೀಲಾಜಾಲವಾಗಿ ಈಜುತ್ತ, ಓದುಗರನ್ನು ಕಚಗುಳಿಯಿಡುತ್ತ, ಬೆಚ್ಚಿಸುತ್ತ, ಮಂತ್ರಮುಗ್ಧಗೊಳಿಸುತ್ತಾ ವಿಚಾರ ಮಾಡಲು ಹಚ್ಚುತ್ತ ಮಾನಸಿಕ ದೂರವನ್ನು ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆ.

ನವ್ಯೋತ್ತರ ಕಥಾ ಪ್ರಪಂಚವನ್ನು ತಮ್ಮ ಸಮೃದ್ಧ ಕಥನದಿಂದ ಶ್ರೀಮಂತಗೊಳಿಸುತ್ತಿರುವ ಸತ್ಯನಾರಾಯಣ ನಮ್ಮ ಕಾಲದ ಒಬ್ಬ ಪ್ರಮುಖ ಕತೆಗಾರ. ನವ್ಯೋತ್ತರ ಕಥಾ ಪ್ರಪಂಚದಲ್ಲಿ ಅವರದ್ದೇ ಆದ ವಿಶಿಷ್ಟ ಧ್ವನಿ ಇರುವುದನ್ನು ನಮ್ಮ ವಿಮರ್ಶಕರು ಈಗಾಗಲೇ ಗುರುತಿಸಿದ್ದಾರೆ. ಸತ್ಯನಾರಾಯಣ ವಾಸ್ತವವಾದಿ ಮಾರ್ಗದ ಕತೆಗಾರರು. ವಿವರಗಳಿಂದ ನಿಬಿಡವಾದ ಅವರ ಕಥನ ಪ್ರಪಂಚದಲ್ಲಿ ರೂಪಕಾತ್ಮಕತೆ, ಪ್ಯಾಂಟಸಿ ಮೊದಲಾದ ಅಂಶಗಳು ವಾಸ್ತವವಾದಿ ಕ್ರಮದ ಮೂಲಕವೇ ಬರುತ್ತವೆ. ನವೋದಯದ ಕಥನ ಕ್ರಮವನ್ನು ಅವರು ನವ್ಯದ ತಂತ್ರಗಾರಿಕೆಯಿಂದ

ಭಿನ್ನವಾಗಿ ಅನುಭವದ ಮೂಲಕವೇ ವೈಚಾರಿಕತೆಯನ್ನು ಕಟ್ಟಿಕೊಳ್ಳುವ ನೆಲೆಯಲ್ಲಿ ಪರಿಭಾವಿಸಿಕೊಂಡಿದ್ದಾರೆ. ಅನುಭವಗಳನ್ನು ವ್ಯಕ್ತಿಗತ ಮಿತಿಯಿಂದ ಬಿಡಿಸಿ ಸಮುದಾಯದ ನೆಲೆಯಲ್ಲಿ ಮರುರೂಪಿಸುವ ಕಲೆ ಸತ್ಯನಾರಾಯಣ ಅವರಿಗೆ ನಿಸ್ಸಂದೇಹವಾಗಿ ದಕ್ಕಿದೆ. ಅವರ ಕಥೆಗಳ ಕುರಿತು ಇನ್ನಷ್ಟು ಚರ್ಚೆಗಳು ನಡೆಯಬೇಕಾಗಿರುವುದು ಕನ್ನಡ ಕಥನಲೋಕದ ವಿಸ್ತಾರದ ದೃಷ್ಟಿಯಿಂದಲೂ ಅಗತ್ಯವಾಗಿದೆ.

❖❖❖

ಪರಾಮರ್ಶನ ಗ್ರಂಥಗಳು

ಸತ್ಯನಾರಾಯಣ ಕೆ. ೧೯೯೩, ನಿಮ್ಮ ಮೊದಲ ಪ್ರೇಮದ ಕಥೆ, ಅಪರ್ಣ ಪ್ರಕಾಶನ, ಬೆಂಗಳೂರು.

ಸತ್ಯನಾರಾಯಣ ಕೆ. ೧೯೯೮, ವಿಕ್ಟೋರಿಯ ಮಗ ದೇವಲಿಂಗು' ನುಡಿ ಪ್ರಕಾಶನ, ಬೆಂಗಳೂರು.

ಸತ್ಯನಾರಾಯಣ ಕೆ. ೨೦೦೨, ಹಳೆಯ ಕಾಲದ ಹೊಸಕಥೆ, ಅಭಿನವ ಪ್ರಕಾಶನ, ಬೆಂಗಳೂರು.

ಸತ್ಯನಾರಾಯಣ ಕೆ. ೨೦೧೦, ನಕ್ಸಲ್ ವರಸೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

ಸತ್ಯನಾರಾಯಣ ಕೆ. ೨೦೧೩, ಹನ್ನೊಂದನೆಯ ಇಂದ್ರಿಯ, ಅಹರ್ನಿಶಿ ಪ್ರಕಾಶನ, ವಿದ್ಯಾನಗರ, ಶಿವಮೊಗ್ಗ.

ಸತ್ಯನಾರಾಯಣ ಕೆ. ೨೦೧೧, ಪ್ರಸಿದ್ದ ನಾಮಾ, ಸುಭಾಷ್ ಸ್ಟೋರ್ಸ್ ಬೆಂಗಳೂರು.

ಸತ್ಯನಾರಾಯಣ ಕೆ. ನವೆಂಬರ್. ೨೦೧೩, ದಲಿತರ ನಮ್ಮ ಕಥೆಗಳು, ಸಪ್ನ ಬುಕ್ ಹೌಸ್ ಬೆಂಗಳೂರು.

ಸತ್ಯನಾರಾಯಣ ಕೆ. ೨೦೧೨, ಹೆಗ್ಗುರುತು, ಮನೋಹರ ಗ್ರಂಥಮಾಲಾ, ಧಾರವಾಡ.

ಸತ್ಯನಾರಾಯಣ ಕೆ. ೨೦೧೪, ನಾಳೆ ಬರೆದ ಕಥೆಗಳು, ಅಭಿನವ ಪ್ರಕಾಶನ, ಬೆಂಗಳೂರು.

ಸತ್ಯನಾರಾಯಣ ಕೆ. ೨೦೧೬, ಅಮೇರಿಕನ್ ಮನೆ, ಪರಸ್ಪರ ಪ್ರಕಾಶನ, ಬೆಂಗಳೂರು.

ಸತ್ಯನಾರಾಯಣ ಕೆ. ೨೦೧೩, ನಾವೇನು ಬಡವರಲ್ಲ, ಅಭಿನವ ಪ್ರಕಾಶನ, ಬೆಂಗಳೂರು.

ಸುಮಿತ್ರ ಬಿ.ಆರ್ (ಸಂ), ೨೦೧೬, ಅನುಭೂತಿ, ಸಪ್ನ ಬುಕ್ ಹೌಸ್ ಬೆಂಗಳೂರು.

ಇತರೆ ಆಕರ ಗ್ರಂಥಗಳು

ಅಮರೇಶ ನುಗಡೋಣಿ (ಸಂ), ೨೦೧೪, ಕಥೆ ಹುಟ್ಟುವ ಪರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅಮೂರು ಜಿ.ಎಸ್, ನವೆಂಬರ್-೨೦೦೮, ಆಧುನಿಕ ಕನ್ನಡ ವಿಮರ್ಶೆ, ಸಪ್ನ ಬುಕ್ ಹೌಸ್ ಬೆಂಗಳೂರು.

ಕರೀಗೌಡ ಬೀಚನಹಳ್ಳಿ, ೨೦೦೩, ಶತಮಾನದ ಸಣ್ಣ ಕಥೆಗಳ ಸಮೀಕ್ಷೆ, ೨೦೧೧, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಕೀರ್ತಿನಾಥ ಕುರ್ತಕೋಟಿ, ಎರಡನೇ ಆವೃತ್ತಿ, ೨೦೧೦, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಕುರ್ತಕೋಟಿ ಮೆಮೊರಿಯಲ್ ಟ್ರಸ್ಟ್, ಧಾರವಾಡ.

ಲಕ್ಷ್ಮೀನಾರಾಯಣಭಟ್ಟ ಎನ್.ಎಸ್, ೨೦೧೪, ಕನ್ನಡ ಸಾಹಿತ್ಯ ಚರಿತ್ರೆ, ೨೦೧೫, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.

ಶೇಷಗಿರಿರಾವ್ ಎಲ್-ಎಸ್, ೧೯೯೯, ಹೊಸಗನ್ನಡ ಸಾಹಿತ್ಯ ಚರಿತ್ರೆ, ೨೦೦೨, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.

❖❖❖

ಕೆ. ಸತ್ಯನಾರಾಯಣರವರಿಗೆ ದೊರೆತ ಪ್ರಶಸ್ತಿಗಳು



೨೦೧೩ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ಇವರ ಸಾಹಿತ್ಯ ಮತ್ತು ಆಡಳಿತ ಕ್ಷೇತ್ರದ ಸಾಧನೆಯನ್ನು ಪರಿಗಣಿಸಿ ನೀಡಿದ ಗೌರವ ಡಿ.ಲಿಟ್ ಪದವಿ, ಪ್ರಮಾಣ ಪತ್ರದೊಂದಿಗೆ ಕೆ. ಸತ್ಯನಾರಾಯಣರವರು.



೨೦೧೦ರಲ್ಲಿ ಮಾಸ್ತಿ ಪ್ರತಿಷ್ಠಾನವು ಇವರ ಕಥಾ ಸಂಕಲನ 'ನಕ್ಸಲ್ ವರಸೆ'ಗೆ 'ಮಾಸ್ತಿ ಪ್ರಶಸ್ತಿ' ಪುರಸ್ಕಾರದ ಸ್ಮರಣಿಕೆ



೨೦೧೮ರಲ್ಲಿ ಬಿ.ಎಚ್. ಶ್ರೀಧರ್ ಪ್ರಶಸ್ತಿ ಪುರಸ್ಕಾರದ ಸ್ಮರಣಿಕೆ.


ಕೆ. ಸತ್ಯನಾರಾಯಣರವರಿಗೆ ದೊರೆತ ಪ್ರಶಸ್ತಿಗಳು



೨೦೧೩ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ಇವರ ಸಾಹಿತ್ಯ ಮತ್ತು ಆಡಳಿತ ಕ್ಷೇತ್ರದ ಸಾಧನೆಯನ್ನು ಪರಿಗಣಿಸಿ ಗೌರವ ಡಿ.ಲಿಟ್ ಪದವಿಯನ್ನು ಕೆ. ಸತ್ಯನಾರಾಯಣರವರು ಸ್ವೀಕರಸುತ್ತಿರುವುದು.



ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ಇವರಿಂದ 'ಹೆಗ್ಗುರುತು ಕಥಾಸಂಕಲನ'ಕ್ಕೆ ೨೦೧೨ನೇ ಸಾಲಿನ 'ಪುಸ್ತಕ ಬಹುಮಾನ ಪ್ರಶಸ್ತಿ' ಪತ್ರಿಕೆ.



ಉದಯ ಭಾನು ಕಲಾ ಸಂಘ, ಬೆಂಗಳೂರು ಇವರು ಕೆ. ಸತ್ಯನಾರಾಯಣರವರಿಗೆ ಗೌರವಿಸಿದ ಸ್ಮರಣಿಕೆ ಪತ್ರ



೨೦೧೬ರಲ್ಲಿ ಬಿ.ಎಚ್. ಶ್ರೀಧರ್ ಪ್ರಶಸ್ತಿಪತ್ರ



ಕೆ. ಸತ್ಯನಾರಾಯಣರವರನ್ನು ಸಂದರ್ಶನ ಮಾಡುತ್ತಿರುವ ಛಾಯಾಚಿತ್ರ

ಕನ್ನಡ ವಿಶ್ವವಿದ್ಯಾಲಯ